|| ಓಂ ನಮಃ ಶಿವಾಯ ||

ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿದೇಶಿ ಪ್ರವಾಸಿಗರೇ ಕೈಟ್ ಟಾರ್ಗೆಟ್

ಮುಂದಿನ ಎರಡ್ಮೂರು ವರ್ಷಗಳಲ್ಲಿ ಕರ್ನಾಟಕಕ್ಕೆ ಒಂದು ಲಕ್ಷಕ್ಕೂ ಹೆಚ್ಚು ವಿದೇಶಿಗರರನ್ನು ಸೆಳೆಯುವ ಗುರಿ ಹೊಂದಿದ್ದೇವೆ. ಕೈಟ್ ಸಮಾವೇಶದಲ್ಲಿ ರಾಜ್ಯ, ಹೊರರಾಜ್ಯ ಹಾಗೂ ಹೊರದೇಶದ ಟೂರ್ ಆಪರೇಟರ್‌ಗಳ ಸಮ್ಮಿಲನದಿಂದ ಈ ಗುರಿ ತಲುಪಲು ಸಹಾಯವಾಗಲಿದೆ ಎಂದು ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ. ಕೆ.ವಿ.ರಾಜೇಂದ್ರ ಅವರು ವಿಶ್ವವಾಣಿ ವಿಶೇಷ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಸಂದರ್ಶನದಪೂರ್ಣಪಾಠ ಇಲ್ಲಿದೆ.

- **ಕೈಟ್ ಸಮಾವೇಶದ ಉದ್ದೇಶವೇನು?**

ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋವನ್ನು ಪ್ರವಾಸೋದ್ಯಮ ಇಲಾಖೆ ಹಮ್ಮಿಕೊಳ್ಳುತ್ತಿದೆ. ಕರ್ನಾಟಕದ ಪ್ರವಾಸಿ ತಾಣಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೋರಿಸಲು ಹಾಗೂ ನಮ್ಮಲ್ಲಿರುವ ಭಿನ್ನ-ವಿಭಿನ್ನ ಪ್ರವಾಸಿ ತಾಣಗಳನ್ನು ಪರಿಚಯಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇದು ಎರಡನೇ ಎಕ್ಸ್‌ಪೋ ಆಗಿದ್ದು, ಪ್ರವಾಸಿ ತಾಣಗಳನ್ನು ಪರಿಚಯಿಸುವ ಜತೆಜತೆಗೆ ಕರ್ನಾಟಕದಲ್ಲಿರುವ ಟೂರ್ ಆಪರೇಟರ್‌ಗಳೊಂದಿಗೆ ಅಂತಾರಾಷ್ಟ್ರೀಯ, ರಾಷ್ಟ್ರೀಯ ಟೂರ್ ಆಪರೇಟರ್‌ಗಳನ್ನು ಪರಿಚಯಿಸುವುದಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗುತ್ತದೆ.

- **ಈ ಸಮಾವೇಶಕ್ಕೆ ಯಾವ ಯಾವ ದೇಶಗಳಿಂದ ಬರುತ್ತಿದ್ದಾರೆ?**

ಕೈಟ್‌ನಲ್ಲಿ ಭಾಗವಹಿಸುವ ಬಗ್ಗೆ 300ಕ್ಕೂ ಹೆಚ್ಚು ಪ್ರವಾಸಿ ಉದ್ಯಮದಲ್ಲಿರುವ ಆಸಕ್ತರು ವಿವಿಧ ದೇಶಗಳಿಂದ ಅರ್ಜಿ ಸಲ್ಲಿಸಿದ್ದರು. ಆದರೆ ಆಯ್ಕೆ ಸಮಿತಿಯೂ ಆಯ್ದ ಅಂತಾರಾಷ್ಟ್ರೀಯ ಟೂರ್ ಆಪರೇಟರ್‌ಗಳಿಗೆ ಅವಕಾಶ ನೀಡಲಾಗಿದೆ. ಸುಮಾರು 36 ದೇಶಗಳ ಟೂರ್ ಆಪರೇಟರ್‌ಗಳು ಬರುತ್ತಿದ್ದಾರೆ. ಅಮೆರಿಕ, ರಷ್ಯಾ, ಕೀನ್ಯಾ, ಆಫ್ರಿಕಾ ದೇಶ, ಜಪಾನ್, ಫ್ರಾನ್ಸ್, ಯುಕೆ ಸೇರಿದಂತೆ ಹಲವು ದೇಶಗಳ ಸ್ಟೇಕ್ ಹೋಲ್ಡರ್ಸ್ ಬರುತ್ತಿದ್ದಾರೆ.

> **ಕೆಎಸ್‌ಟಿಡಿಸಿ ರಾಜ್ಯದಲ್ಲಿ ನಡೆಸುತ್ತಿರುವ ಹೋಟೆಲ್‌ಗಳು ಪ್ರಮುಖವಾಗಿ ಮಧ್ಯಮ ವರ್ಗಕ್ಕೆ ಸಹಾಯವಾಗುತ್ತಿವೆ. ಮಧ್ಯಮ ವರ್ಗದವರಿಗೆ ಪ್ರವಾಸಿ ತಾಣಗಳನ್ನು ತೋರಿಸುವ ಉದ್ದೇಶದಿಂದ ಜನರಿಗೆ ಕೈಗೆಟಕುವ ದರಲ್ಲಿ ನಮ್ಮ ಪ್ಯಾಕೇಜ್‌ಗಳಿವೆ. ಮುಂದಿನ ದಿನಗಳಲ್ಲಿ ಹೊಸದಾಗಿ ನಾಲ್ಕು ಹೋಟೆಲ್ ಗಳನ್ನು ಆರಂಭಿಸುವ ಯೋಚನೆ ಇದೆ.**
>
> **- ಡಾ.ಕೆ.ವಿ.ರಾಜೇಂದ್ರ**
> ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು

15ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮಾಧ್ಯಮಗಳು, ಇನ್ಫ್ಲುಯೆನ್ಸರ್‌ಗಳನ್ನು ಆಯ್ಕೆ ಮಾಡಲಾಗಿದೆ. ಇನ್ನು ದೇಶಿಯವಾಗಿ 120ಕ್ಕೂ ಹೆಚ್ಚು ಉದ್ಯಮಿಗಳು, 233 ಟೂರ್ ಆಪರೇಟರ್‌ಗಳು ಭಾಗವಹಿಸುತ್ತಿದ್ದಾರೆ. ಒಟ್ಟಾರೆ 370ಕ್ಕೂ ಹೆಚ್ಚು ಪ್ರವಾಸಿ ಉದ್ಯಮದ ವಿವಿಧ ಕ್ಷೇತ್ರದ ಉದ್ಯಮಿಗಳು ಬರುತ್ತಿದ್ದಾರೆ.

- **ಆಗಮಿಸುವವರಿಗೆ 'ಕರ್ನಾಟಕ ದರ್ಶನ' ಹೇಗೆ ಮಾಡಿಸುತ್ತೀರಾ?**

ರಾಜ್ಯಕ್ಕೆ ಆಗಮಿಸುತ್ತಿರುವ 120ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಉದ್ಯಮಿಗಳು ಹಾಗೂ ರಾಜ್ಯದ 233 ರಾಜ್ಯದ ಟೂರ್ ಆಪರೇಟರ್‌ಗಳಿಗೆ ನಾವು ಕರ್ನಾಟಕ ದರ್ಶನವನ್ನು ಮಾಡಿಸುವುದಕ್ಕಾಗಿ ಫ್ಯಾಮ್ ಟೂರ್ ಆರಂಭಿಸಿದ್ದೇವೆ. ಈಗಾಗಲೇ ವಿದೇಶಿ ಪ್ರವಾಸಿಗರನ್ನು ಎರಡರಿಂದ ಐದು ದಿನಗಳ ಅವಧಿಗೆ ಪ್ರವಾಸ ಮಾಡಿಸಲಾಗಿದೆ. ಇಲ್ಲಿರುವ ಹೋಟೆಲ್, ರೆಸಾರ್ಟ್, ಸಾಹಸಮಯಿ ಸ್ಥಳಗಳನ್ನು ತೋರಿಸುತ್ತಿದ್ದೇವೆ. ಇದರೊಂದಿಗೆ ನಮ್ಮಲ್ಲಿರುವ ಹೋಟೆಲ್‌ಗಳ ಸೌಲಭ್ಯ, ಸುರಕ್ಷತೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ಮಾಹಿತಿ ನೀಡಲಾಗಿದೆ. ವಿದೇಶಿ ಪ್ರವಾಸಿಗರು ಈಗಾಗಲೇ ಬಹುತೇಕ ಟ್ರಿಪ್ ಮುಗಿಸಿದ್ದು, ಕಾರ್ಯಕ್ರಮದ ಬಳಿಕ ದೇಶಿ ಟೂರ್ ಆಪರೇಟರ್‌ಗಳಿಗೆ ಆಯೋಜಿಸಲಾಗುವುದು. ಕರ್ನಾಟಕದಲ್ಲಿ ಏನಿದೆ ಎನ್ನುವುದನ್ನು ಬಾಯಿ ಮಾತಲ್ಲಿ ಹೇಳುವ ಬದಲು, ಕಣ್ಣಾರೆ ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇದರಿಂದ ರಾಜ್ಯದಲ್ಲಿರುವ ವೈವಿಧ್ಯಮಯ ಸ್ಥಳಗಳನ್ನು ಪರಿಚಯಿಸಲು ಸಾಧ್ಯವಾಗುತ್ತದೆ.

- **ಸಮಾವೇಶದಿಂದ ಏನೆಲ್ಲ ನಿರೀಕ್ಷೆ ಮಾಡುತ್ತೀದ್ದೀರಾ?**

ಯಾವುದೇ ಅಂತಾರಾಷ್ಟ್ರೀಯ ಪ್ರವಾಸಿಗರು ಒಂದು ವರ್ಷದ ಮೊದಲು ಆಲೋಚನೆ ಮಾಡುತ್ತಾರೆ. ಆದ್ದರಿಂದ ಇಂದಿನ ಎಕ್ಸ್‌ಪೋದ ಬಳಿಕ ನಾಳೆಯೇ ಪ್ರವಾಸಿಗರು ಬರುವುದಿಲ್ಲ. ಅಂತಾರಾಷ್ಟ್ರೀಯ ಪ್ರವಾಸಿಗರಿಂದ ಪ್ರತಿಕ್ರಿಯೆಗೆ ಕನಿಷ್ಠ ಒಂದೆರೆಡು ವರ್ಷ ಬೇಕಾಗುತ್ತದೆ. ಈ ಸಮಾವೇಶದಲ್ಲಿ 350 ಹೊರರಾಜ್ಯ, ಹೊರದೇಶದ ಟೂರ್ ಆಪರೇಟರ್ ಗಳು, 150 ರಾಜ್ಯದ ಸ್ಟೇಕ್ ಹೋಲ್ಡರ್‌ಗಳು ಭಾಗವಹಿಸುವುದರಿಂದ ಸುಮಾರು 14ರಿಂದ 18 ಸಾವಿರ ಸಭೆ ನಡೆಯುವ ನಿರೀಕ್ಷೆಯಿದೆ.

ಸಂದರ್ಶನದ ಪೂರ್ಣಪಾಠ → 4



ನಿಷೇದಾಜ್ಞೆ ಇದ್ದರೂ ಪ್ರತಿಭಟಿಸಿದ ಮೀನುಗಾರರು

ಟೊಂಕಾ ಕಡಲ ತೀರದಲ್ಲಿ ವಾಣಿಜ್ಯ ಬಂದರು ನಿರ್ಮಾಣಕ್ಕೆ ವಿರೋಧ | 50ಕ್ಕೂ ಅಧಿಕ ಜನರ ಬಂಧನ

ಹೊನ್ನಾವರ: ತಾಲೂಕಿನ ಕಾಸರಕೋಡ್ ಟೊಂಕಾ ಉದ್ದೇಶಿತ ವಾಣಿಜ್ಯ ಬಂದರು ವಿರೋಧಿಸಿ ನಿಷೇದಾಜ್ಞೆಯ ನಡುವೆಯೂ ಮೀನುಗಾರರು ಸಮುದ್ರಕ್ಕಿಳಿದು ಬೃಹತ್ ಪ್ರತಿಭಟನೆ ನಡೆಸಿದರು.

ಹೊನ್ನಾವರ ತಾಲೂಕಿನ ರಾಷ್ಟ್ರೀಯ ಹೆದ್ದಾರಿ-66 ಪಕ್ಕದಲ್ಲೇ ಇರುವ ಹಿರೇಮಠ ಸ್ಮಶಾನದಿಂದ ಕಾಸರಕೋಡ ಗ್ರಾಮದಲ್ಲಿ ಸಮುದ್ರಗುಂಟ ಇರುವ ರಸ್ತೆಯನ್ನು ಅಭಿವೃದ್ಧಿಪಡಿಸಿ, ಬಂದರು ಅಭಿವೃದ್ಧಿ ಯೋಜನಾ ಸ್ಥಳದವರೆಗೆ ಹೋಗುವ ರಸ್ತೆ ಕಾಮಗಾರಿಯ ಸರ್ವೆ ಕಾರ್ಯ ನಡೆಯುವ ಸುತ್ತಲಿನ ಪ್ರದೇಶದಲ್ಲಿ ಕಾನೂನು, ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ನಿಷೇದಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿ ಕೆ. ಲಕ್ಷ್ಮಿಪ್ರಿಯ ಆದೇಶಿಸಿದ್ದರು. ಅದರ ಹೊರತಾಗಿಯೂ ಬಂದರು ಕಾಮಗಾರಿ ವಿರೋಧಿಸಿ ಸ್ಥಳೀಯ ಮೀನುಗಾರರು ಪ್ರತಿಭಟನೆ ಹಮ್ಮಿಕೊಂಡಿದ್ದರಿಂದ ಪ್ರತಿಭಟನೆ ನಿರತ ಐವತ್ತುಕ್ಕೂ ಅಧಿಕ ಮೀನುಗಾರರನ್ನು ಪೊಲೀಸರು ಬಂಧಿಸಿದ್ದಾರೆ.

ಪೊಲೀಸರ ವಿರುದ್ಧ ಸ್ಥಳೀಯ ಮೀನುಗಾರರು ಆಕ್ರೋಶ ವ್ಯಕ್ತಪಡಿಸಿ ನಮ್ಮ ಜಾಗ ನಮಗೆ ಬಿಟ್ಟುಕೊಡಿ, ಸರ್ವೆಗೆ ಮುಂದಾದರೆ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎನ್ನುವ ಎಚ್ಚರಿಕೆ ನೀಡಿದರು. ಮೀನುಗಾರರು ಸಂಕಷ್ಟದಲ್ಲಿದ್ದರೂ ಸ್ಥಳಕ್ಕೆ ಆಗಮಿಸದ ಸಚಿವ ಮಂಕಾಳ ವೈದ್ಯರ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಮೀನುಗಾರಿಕೆ ಸಚಿವ ವಿರುದ್ಧ ಆಕ್ರೋಶ ಹೊರಹಾಕಿದರು. ಪೊಲೀಸರು ವಶಕ್ಕೆ ಪಡೆದ ಮೀನುಗಾರರನ್ನು ಬಿಡುಗಡೆಗೊಳಿಸದಿದ್ದಲ್ಲಿ ಸಮುದ್ರಕ್ಕೆ ಹಾರಿ ಪ್ರಾಣ ಬಿಡುವುದಾಗಿ ಎಚ್ಚರಿಕೆ ನೀಡಿದರು.

ಕಡಲತೀರದಲ್ಲಿ ಕಂಬಗಳನ್ನ ಹುಗಿಯಲು ಮುಂದಾದಾಗ ಪ್ರತಿಭಟನಕಾರರು ಅಡ್ಡಿಪಡಿಸಲು ಯತ್ನಿಸಿದರು. ಈ ವೇಳೆ ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆದು ಗ್ರಾಮಸ್ಥನೋರ್ವನನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಬಳಿಕ ಗ್ರಾಮದ ಹಲವು ಮುಖಂಡರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಮಧ್ಯಾಹ್ನ ಸಂದರ್ಭದಲ್ಲಿ ಪ್ರತಿಭಟನೆಯ ಕಾವು ತಣ್ಣಗಾದಂತೆ ಕಂಡು ಬಂತು.

ಟೊಂಕಾ ಕಡಲ ತೀರದಲ್ಲಿ ವಾಣಿಜ್ಯ ಬಂದರು ನಿರ್ಮಾಣಕ್ಕೆ ವಿರೋಧಿಸಿ ಪ್ರತಿಭಟಿಸಿದ ಮೀನುಗಾರರು.

ಬಿಗಿ ಬಂದೋಬಸ್ತ್ ನಡುವೆ ಸರ್ವೇ ಕಾರ್ಯ

ಈ ನಡುವೆ ಬಿಗಿಪೊಲೀಸ್ ಬಂದೋಬಸ್ತ್ ನಲ್ಲಿ ಅಧಿಕಾರಿಗಳು ಸರ್ವೇ ಕಾರ್ಯ ಮುಂದುವರೆಸಿದರು. ಭಟ್ಕಳ ಪ್ರಭಾರೆ ಉಪವಿಭಾಗಾಧಿಕಾರಿ ಕಾವ್ಯಾರಾಣಿ, ಡಿವೈಎಸ್‌ಪಿ ಮಹೇಶ್ ಕೆ. ತಹಸೀಲ್ದಾರ ಪ್ರವೀಣ ಕರಾಂಡೆ, ಪಿಐ ಸಿದ್ರಾಮೇಶ್ವರ ಸ್ಥಳದಲ್ಲೇ ಬಿಡುಬಿಟ್ಟದ್ದರು. ತಮ್ಮ ಮನೆ, ಭೂಮಿ ಕಳೆದುಕೊಳ್ಳುವ ಭೀತಿಯಿಂದ ಸಮುದ್ರದಡದಲ್ಲಿ ಮೀನುಗಾರರು ಗುಂಪು ಗುಂಪಾಗಿ ಸೇರಿದ್ದರು. ಪ್ರತಿಭಟನೆಗೆ ಮುಂದಾಗುತ್ತಿದ್ದ ಸ್ಥಳದಲ್ಲಿ ಪೊಲೀಸರು ಸುತ್ತುವರಿದು ಮೀನುಗಾರರ ಚದುರಿಸುತ್ತಿರುವ ದೃಶ್ಯ ಕಂಡುಬಂತು. ಈ ವೇಳೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೋರ್ವರು ದೃಶ್ಯ ಮಾಧ್ಯಮದವರ ಮೇಲೆ ವಿಡಿಯೋ ಚಿತ್ರಿಕರಿಸದಂತೆ ತಡೆಯೊಡ್ಡಿದ್ದ ಘಟನೆಯು ನಡೆದಿತ್ತು. ಈ ವೇಳೆ ಪತ್ರಕರ್ತರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿಯೂ ನಡೆಯಿತು.

ಹೈದ್ರಾಬಾದ್ ಮೂಲದ ಹೊನ್ನಾವರ ಪೋರ್ಟ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿ ಟೊಂಕ, ಕಾಸರಕೋಡುನಲ್ಲಿ ವಾಣಿಜ್ಯ ಬಂದರು ಯೋಜನೆ ಕೈಗೆತ್ತಿಕೊಂಡಿದೆ. ಬಂದರು ಇಲಾಖೆಯು 30 ವರ್ಷಕ್ಕೆ 92 ಎಕರೆ ಜಾಗವನ್ನು ಲೀಸ್ ನೀಡಿ 2010 ರಲ್ಲಿ ಒಪ್ಪಂದ ಮಾಡಿಕೊಂಡಿತ್ತು. ಮೀನುಗಾರರು ವಾಸಿಸುವ ಪ್ರದೇಶದಲ್ಲಿ ಯೋಜನೆ ಮಾಡುತ್ತಿರುವುದು ವಿರೋಧಕ್ಕೆ ಕಾರಣವಾಗಿದೆ. ಸರ್ಕಾರ ಜಿಲ್ಲಾಡಳಿತದ ಮೂಲಕ ಬಂದರು ನಿರ್ಮಾಣಕ್ಕೆ ಎಲ್ಲ ಸಹಕಾರ ನೀಡುತ್ತಿರುವುದು ಮೀನುಗಾರರನ್ನು ಕೆರಳಿಸಿದೆ.

ಆಡಳಿತವಿರುವಾಗ ವಿರೋಧ ಪಕ್ಷದ ನಾಯಕರು ಮೀನುಗಾರರಿಗೆ ರಕ್ಷಣೆ ನೀಡುವ ಭರವಸೆ ನೀಡುವುದು ಸಾಮಾನ್ಯವಾಗಿದ್ದು, ಬಂದರು ಸರ್ವೆ ಕಾರ್ಯದಲ್ಲಿ ಮೀನುಗಾರರು ಪ್ರತಿಭಟನೆ ಮಾಡುವಾಗ ಆಡಳಿತ ಪಕ್ಷದವರೂ ವಿರೋಧ ಪಕ್ಷದ ನಾಯಕರು ಯಾರು ಸ್ಥಳಕ್ಕೆ ಬಂದು ಬೆಂಬಲಿಸದೇ ಇರುವುದು ಮೀನುಗಾರರಿಗೆ ತಳಮಳ, ಬೇಸರ ಉಂಟುಮಾಡಿದೆ.

ಪ್ರತಿಭಟನೆ ವೇಳೆ ಐವರು ಅಸ್ವಸ್ಥ

ಪ್ರತಿಭಟನೆ ವೇಳೆ ಕೆಲ ಕಾಲ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ಪೊಲೀಸರು, ಸ್ಥಳೀಯರು ನಡುವೆ ಕೆಲಕಾಲ ಮಾತಿನ ಚಕಮಕಿ ಉಂಟಾಗಿತ್ತು. ಮೂವರು ಮಹಿಳೆಯರು, ಇಬ್ಬರು ಪುರುಷರು ಪ್ರತಿಭಟನೆ ವೇಳೆ ಅಸ್ವಸ್ಥರಾಗಿದ್ದು ತಕ್ಷಣ ಅಂಬ್ಯುಲೆನ್ಸ್ ಮೂಲಕ ತಾಲೂಕಾಸ್ಪತ್ರೆಗೆ ರವಾನಿಸಿ ಚಿಕಿತ್ಸೆ ನೀಡಿಲಾಯಿತು.

ಮೀನುಗಾರಿಕಾ ಸಚಿವರ ವಿರುದ್ಧ ವಾಗ್ದಾಳಿ

ಶಾಲಾ ವಿದ್ಯಾರ್ಥಿಗಳು ರಸ್ತೆಯಲ್ಲಿ ಕುಳಿತು ವಾಣಿಜ್ಯ ಬಂದರು ವಿರೋಧಿಸಿ ಪ್ರತಿಭಟಿಸಿದರು. ಈ ವೇಳೆ ಮಾತನಾಡಿದ ಶಾಲಾ ವಿದ್ಯಾರ್ಥಿನಿ ಅಪೇಕ್ಷಾ ತಾಂಡೇಲ್, ಪ್ರತಿಭಟನಾ ನಿರತ ಮೀನುಗಾರರನ್ನು ಪೊಲೀಸರು ಬಂಧಿಸಿ ಕರೆದೊಯ್ದದನ್ನು ಖಂಡಿಸಿ, ಮೀನುಗಾರು ಸಂಕಷ್ಟದಲ್ಲಿದ್ದರೂ ಸಚಿವ ಮಂಕಾಳ ವೈದ್ಯ ಹಾಯಾಗಿದ್ದಾರೆ. ಚುನಾವಣೆ ವೇಳೆಯಲ್ಲಿ ಮತ ಕೇಳಲು ಮಾತ್ರ ಬರುತ್ತಾರೆ. ಮೀನುಗಾರರು ಕಷ್ಟದಲ್ಲಿರುವಾಗ ಸಚಿವರು ಎಲ್ಲಿದ್ದಾರೆ. ಮೀನುಗಾರರು ಕಷ್ಟದಲ್ಲಿದ್ದರೂ ಯಾವುದೇ ಜನಪ್ರತಿನಿಧಿಗಳು ಬಂದಿಲ್ಲ. ಮೀನುಗಾರು ಬೀದಿಗೆ ಬಿದ್ದರೂ ಸಚಿವರ ಪತ್ತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಮ್ಮವರು ಮನೆಗೆ ವಾಪಾಸ್ಸಾಗದಿದ್ದಲ್ಲಿ ಸಮುದ್ರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದಳು.

ಸಮಾಚಾರ ಸಣ್ಣದಲ್ಲ

ತ್ರಿಪದಿಕವಿ ಸರ್ವಜ್ಞ: ನಾಡು ಕಂಡ ಶ್ರೇಷ್ಠ ವಚನಕಾರ

ಹಾವೇರಿ: ತ್ರಿಪದಿಕವಿ ಸರ್ವಜ್ಞ ನಾಡು ಕಂಡ ಶ್ರೇಷ್ಠ ವಚನಕಾರ, ಮೂಢನಂಬಿಕೆ ಹಾಗೂ ಶೋಷಣೆಗಳನ್ನು ತಮ್ಮ ವಚನಗಳ ಮೂಲಕ ಕಟುವಾಗಿ ಟೀಕಿಸಿದ ನೇರನಿಷ್ಠುರವಾದಿ ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್ ಅವರು ಬಣ್ಣಿಸಿದರು. ನಗರದ ಗಾಂಧಿ ಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರ ಹಾಗೂ ಹಾವೇರಿ ಜಿಲ್ಲಾ ಕುಂಬಾರ ಸಂಘದ ಸಹಯೋಗದಲ್ಲಿ ಜರುಗಿದ ತ್ರಿಪದಿಕವಿ ಸರ್ವಜ್ಞರ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದ ಮಹಾನ್ ಚೇತನ, ಅವರ ತ್ರಿಪದಿಗಳು ಸಾರ್ವಕಾಲಿಕವಾಗಿವೆ ಎಂದು ಹೇಳಿದರು. ನಗರಸಭೆ ಅಧ್ಯಕ್ಷೆಶಶಿಕಲಾ ಮಾಳಗಿ ಕಾರ್ಯಕ್ರಮ ಉದ್ಘಾಟಿಸಿದರು. ಭಗತ್ ಸಮೂಹ ಸಂಸ್ಥೆ ಅಧ್ಯಕ್ಷ ಎಂ.ಬಿ.ಸತೀಶ ಅವರು ಸರ್ವಜ್ಞನ ಅವರ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ, ನಗರಸಭೆ ಉಪಾಧ್ಯಕ್ಷ ಮಲ್ಲಿಕಾರ್ಜು ಸಾತೇನಹಳ್ಳಿ, ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ.ಮೈದೂರ, ಉಪ ವಿಭಾಗಾಧಿಕಾರಿ ಚೆನ್ನಪ್ಪ, ತಹಸೀಲ್ದಾರ್ ಶರಣಮ್ಮ, ಕುಂಬಾರ ಸಂಘದ ಜಿಲ್ಲಾಧ್ಯಕ್ಷ ರೇವಣಪ್ಪ ಬಸವಣ್ಣೆಪ್ಪ ಚಕ್ರಸಾಲಿ, ತಾಲೂಕಾಧ್ಯಕ್ಷ ಎಸ್.ಎನ್.ಕುಂಬಾರ, ಮಲ್ಲೇಶಪ್ಪ, ಬಸವರಾಜ, ಎಂ.ಪಿ.ಕುಂಬಾರ, ಶೇಕಪ್ಪ ಚಕ್ರಸಾಲಿ, ಶಿವಪ್ಪ ಚಕ್ರಸಾಲಿ, ಕೊಟ್ರೇಶಪ್ಪ, ಚನ್ನಪ್ಪ, ಮುತ್ತಪ್ಪ, ದ್ಯಾಮಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಆರ್.ವಿ. ಚೆನ್ನಿಕಟ್ಟಿ ಉಪಸ್ಥಿತರಿದ್ದರು.

ಮೀನು-ಮಾಂಸ ಮಾರಾಟ ನಿಷೇದ

ಹಾವೇರಿ: ಶಿವರಾತ್ರಿಯ ಪ್ರಯುಕ್ತ ಫೆ.26 ರಂದು ಹಾವೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆ ಹಾಗು ಮೀನು, ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ. ಮಾಂಸ ಮಾರಾಟದ ಅಂಗಡಿಗಳನ್ನು ಬಂದ್ ಮಾಡಬೇಕು. ತಪ್ಪಿದ್ದಲ್ಲಿ ಅಂಗಡಿಯವರ ಉದ್ದಿಮೆ ಪರವಾನಗಿ ರದ್ದುಪಡಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲ ರೈತರಿಗೂ ಸಾಲ ಸೌಲಭ್ಯ ಸಿಗಬೇಕು

ಹಾವೇರಿ: ಸಾಲ ಸೌಲಭ್ಯ ಕೋರಿ ಬ್ಯಾಂಕ್‌ಗೆ ಬರುವ ಎಲ್ಲ ರೈತರಿಗೂ ಸಾಲ ಸಿಗುವಂತಾಗಬೇಕು. ಎಲ್ಲ ಬ್ಯಾಂಕ್ ಗಳು ರೈತ ಸ್ನೇಹಿಯಾಗಿ ಕೆಲಸ ನಿರ್ವಹಿಸಬೇಕು. ಎಂದು ಬ್ಯಾಂಕ್ ಅಧಿಕಾರಿಗಳಿಗೆ ಸಂಸದ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಜರುಗಿದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನೆ ಸಮಿತಿ ಹಾಗೂ ಜಿಲ್ಲಾ ಮಟ್ಟದ ಬ್ಯಾಂಕ್‌ಗಳ ಸಲಹಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯ ಎಲ್ಲ ಬ್ಯಾಂಕ್ ಗಳಲ್ಲಿ ಅರ್ಹತೆ ಹೊಂದಿದ ಎಲ್ಲ ರೈತರಿಗೂ ಸಾಲ ಸೌಲಭ್ಯ ಸಿಗುವಂತಾಗಬೇಕು. ಬ್ಯಾಂಕ್‌ಗೆ ಬರುವ ರೈತರು ಹಾಗೂ ಉದ್ಯಮಿಗಳು ನಿಮ್ಮ ಗ್ರಹಕರಗಿರುತ್ತಾರೆ. ಉದ್ಯಮಿಗೆ ಸಾಲ ಪಡೆಯುವ ಮಾಹಿತಿ ಗೊತ್ತಿರುತ್ತದೆ, ಆದರೆ ರೈತರಿಗೆ ಮಾಹಿತಿ ಇರುವುದಿಲ್ಲ ಹಾಗಾಗಿ ಸಾಲದ ಅರ್ಜಿ ಫಾರ್ಮ್ ಭರ್ತಿ ಮಾಡುವುದು ಒಳಗೊಂಡಂತೆ ಎಲ್ಲ ಅಗತ್ಯ ಮಾಹಿತಿಗಳನ್ನು ನೀಡುವ ಮೂಲಕ ರೈತರಿಗೆ ಸ್ನೇಹಾಮಯಿಯಾಗಿ ಕಾರ್ಯ ನಿರ್ವಹಿಸಬೇಕು.

ಕೃಷಿ ಹಾಗೂ ಕೃಷಿಯೇತರ ಸಾಲ ಹಾಗೂ ಸಹಾಯಧನ ಗುರಿ ಸಾಧನೆಗೆ ಅಧಿಕಾರಿಗಳು ಹಾಗೂ ಬ್ಯಾಂಕರ್ಸ್‌ಗಳು ಸಮನ್ವಯದಿಂದ ಕೆಲಸ ಮಾಡಬೇಕು. ಸಾಲ ನೀಡುವುದರಿಂದ ಆರ್ಥಿಕತೆ, ಉದ್ಯೋಗ, ಜಿಡಿಪಿ ಅಭಿವೃದ್ಧಿ ಯಾಗಲು ಬ್ಯಾಂಕ್ ಗಳ ಪಾತ್ರ ಪ್ರಮುಖವಾಗಿದೆ. ದೇಶದ ಆರ್ಥಿಕ ಸುಧಾರಣೆ ದೊಡ್ಡ ಕೆಲಸವಾಗಿದ್ದು, ಬ್ಯಾಂಕಸ್ ರ್‌ಗಳು ದೇಶದ ಆರ್ಥಿಕ ರಾಯಭಾರಿಗಳಾಗಿದ್ದು ಈ ಮಹತ್ವ ತಿಳಿದು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದರು.

ದಿಶಾ ಸಭೆಯಲ್ಲಿ ಮೈಕ್ರೋ ಫೈನಾನ್ಸ್ ಗಳ ಚಲನ ವಲನ ಗಳ ಮೇಲೆ ನಿಗಾ ವಹಿಸಲು ಒಂದು ಸಮಿತಿ ರಚಿಸುವಂತೆ ಜಿಲ್ಲಾಧಿಕಾರಿಗಳಿಗೆ ಸಂಸದ ಬಸವರಾಜ ಬೊಮ್ಮಾಯಿ ಅವರು ನಿರ್ದೇಶನ ನೀಡಿದರು.

ಕೃಷಿ ಸೇರಿದಂತೆ ಎಲ್ಲ ಕ್ಷೇತ್ರ ಗಳಲ್ಲಿ ನಿಗದಿತ ಕಾಲ ಮಿತಿಯೊಳಗೆ ಗುರಿ ಸಾಧನೆಗೆ ಕ್ರಮವಹಿಸಲು ವಿವಿಧ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಗೆ ಗೈರಾದ ವರ ಬಗ್ಗೆ ಕೇಂದ್ರ ಕಚೇರಿಗೆ ಪತ್ರ ಬರೆಯಲು ಸೂಚಿಸಿದರು.

ಲೀಡ್ ಬ್ಯಾಂಕ್ ಮ್ಯಾನೇಜರ್ ಅಣ್ಣಯ್ಯ ಅವರು ಜಿಲ್ಲೆಯ ಬ್ಯಾಂಕುಗಳ ಪ್ರಗತಿ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾ ಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ, ಜಿಲ್ಲಾ ಪಂಚಾಯತ್ ಸಿ ಇ. ಒ ರುಚಿ ಬಿಂದಾಲ್, ಕೆವಿಜಿ ಬ್ಯಾಂಕ್ ಪ್ರಾದೇಶಿಕ ಅಧಿಕಾರಿ ಸೋಮಶೇಖರ್, ನಂಬಡ್‌ರನ ರಂಗನಾಥ್, ಯೂನಿಯನ್ ಬ್ಯಾಂಕ್ ನ ದೀಪಕ್ ಕುಮಾರ್ ಹಾಗೂ ಇತರ ಬ್ಯಾಂಕ್‌ಗಳ ಪ್ರಾದೇಶಿಕ ಅಧಿಕಾರಿಗಳು ಉಪಸ್ಥಿತರಿದ್ದರು.

ಶೇಜವಾಡದಲ್ಲಿ ಶಿವರಾತ್ರಿ ಉತ್ಸವ

ಕಾರವಾರ: ತಾಲೂಕಿನ ಶೇಜವಾಡದ ಶ್ರೀ ಶೆಜ್ಜೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವವು ಇಂದಿನಿಂದ ಅದ್ದೂರಿಯಾಗಿ ಆರಂಭಗೊಳ್ಳಲಿದೆ.

ಮಹಾ ಶಿವರಾತ್ರಿ ನಿಮಿತ್ತ ಬುಧವಾರ ಬೆಳಿಗ್ಗೆಯಿಂದ ಸಂಜೆ 6 ಗಂಟೆಯವರೆಗೆ ಶ್ರೀ ದೇವರಿಗೆ ಪಂಚಾಮೃತ ಅಭಿಷೇಕ, ರಾತ್ರಿ 7 ಗಂಟೆಯಿಂದ ಲೋಕ ಕಲ್ಯಾಣರ್ಥಕ್ಕಾಗಿ ಶತರುದ್ರಾಭಿಷೇಕ ನಡೆಯಲಿದೆ. ಬಳಿಕ ಮಹಾಪೂಜೆ ಪ್ರಸಾದ ವಿತರಣೆ ನಡೆಯಲಿದ್ದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶದ ಪ್ರಕಾರ ಮಹಾ ಶಿವರಾತ್ರಿಯ ದಿನ ಪೂರ್ತಿ ರಾತ್ರಿ ದೇವಸ್ಥಾನವನ್ನು ತೆರೆದಿಟ್ಟು ಜಾಗರಣೆ ಮಾಡಲಾಗುತ್ತದೆ.

ಫೆ.27 ರಂದು ಗುರುವಾರ ಬೆಳಿಗ್ಗೆ 7 ಗಂಟೆಗೆ ಸಮುದ್ರ ಸ್ನಾನಕ್ಕೆ ಪಲ್ಲಕ್ಕಿಯ ಮೂಲಕ ತೆರಳಿ ಮರಳಿದ ಬಳಿಕ ದೇವಾಲಯದಲ್ಲಿ ಮಧ್ಯಾಹ್ನ ಪೂಜೆ ರಾತ್ರಿ ಶ್ರೀ ದೇವರ ಪಲ್ಲಕ್ಕಿ ಮೆರವಣಿಗೆ, ರಂಗ ಪೂಜೆ, ಅಷ್ಟಾವಧಾನ ಸೇವೆ, ಪ್ರಸಾದ ವಿತರಣೆ ನಡೆಯಲಿವೆ.

ಫೆ.28 ಶುಕ್ರವಾರ ದಂದು ಮಧ್ಯಾಹ್ನ 1.30 ಗಂಟೆಗೆ ಹೋಮ ಹವನ ಸಾಯಂಕಾಲ 5 ಘಂಟೆಗೆ ರಥಾರೋಹಣ ಶ್ರೀ ದೇವರಿಗೆ ಹಣ್ಣು ಕಾಯಿ ಸೇವೆ, ದರ್ಶನ, ಕಾಣಿಕೆ ಸಲ್ಲಿಸುವುದು, ಇತ್ಯಾದಿ ಸಾಯಂಕಾಲ 7.30 ರಿಂದ ಸಂಗೀತ ಕಾರ್ಯಕ್ರಮ ಶ್ರೀ ಸಂಕೇತ ಸಪ್ರೆ, ತಬಲಾ, ಶ್ರೀ ಸಿದ್ಧಾಂತ ಮಡಕೈಕರ, ಹಾರ್ಮೋನಿಯಮ್ ದೃಶಾಲ ಚಾರಿ ಗೋವಾ ಇವರಿಂದ, ರಾತ್ರಿ 10 ಗಂಟೆಗೆ ದೇವಸ್ಥಾನದ ಪಂಚವಾದ್ಯದೊಂದಿಗೆ ಹಿಲಾಮತಿ ಮೆರವಣಿಗೆ ನಂತರ ಶ್ರೀ ದೇವರ ಫಲಪುಷ್ಪ ಲೀಲಾವು ನಂತರ ನಾಟ್ಯ ರಾಣಿ ಭರತ ನಾಟ್ಯ ನೃತ್ಯ ಕಲಾ ಕೇಂದ್ರ, ಕಾರವಾರ ವಿದ್ಯಾರ್ಥಿಯವರಿಂದ ಭರತ ನಾಟ್ಯ ರಾತ್ರಿ 11:30 ಘಂಟೆಗೆ ಅಭಿನದ ನಾಟ್ಯ ಸಮಾಜ ಶೇಜವಾಡ ಇವರು ಅರ್ಪಿಸುವ ಪ್ರದೀಪ್ ಗುರುನಾಥ ಕೋಠಾರಕರ, ಕಿನ್ನರ ವಿರಚಿತ ಸಾಮಾಜಿಕ ಕೊಂಕಣಿ ನಾಟಕ 'ಶಪಥ ತುಕಾ ಹ್ಯಾ ಮಂಗಳಸೂತ್ರಾಚೆ' ಪ್ರದರ್ಶನಗೊಳ್ಳಲಿದೆ. ನಾಟಕ ಪ್ರದರ್ಶನ ಮುಗಿಯುತ್ತಿದ್ದಂತೆ ಮಾ.1 ಶನಿವಾರ ದಂದು ಬೆಳಿಗ್ಗೆ 4 ಗಂಟೆಗೆ ರಥೋತ್ಸವ ನಡೆಯಲಿದೆ. ಸಂಜೆ 4 ಗಂಟೆಗೆ ಶ್ರೀ ದೇವರ ಅವಭೃತ ಸ್ನಾನ (ಓಕುಳಿ), ಪಲ್ಲಕ್ಕಿ ಮೆರವಣಿಗೆ, ಪೂಜೆ, ಪ್ರಸಾದ ವಿತರಣೆ ನಡೆಯಲಿದ್ದು ರಾತ್ರಿ, 9 ಗಂಟೆಗೆ ಓಎಚ್‌ಬಿ ಎವೆಂಟ್ಸ್ ಹೊನ್ನಾವರ ಇವರಿಂದ ನೃತ್ಯ ಸಂಗಮ ಕಾರ್ಯಕ್ರಮ ನಡೆಯಲಿದೆ.



ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು, ಎಲ್ಲಾ ಸದಸ್ಯರು, ಪ್ರಧಾನ ಅರ್ಚಕರು, ಒಳನೌಕರರು, ಹೊರನೌಕರರು ಹಾಗೂ ಊರ ನಾಗರಿಕರು ಕೋರಿದ್ದಾರೆ.

ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್
SUCO BANK
SUCO SOUHARDA SAHAKARI BANK

ಪ್ರಧಾನ ಕಛೇರಿ : ಮೋಕಾ ರಸ್ತೆ, ಗಾಂಧಿನಗರ, ಬಳ್ಳಾರಿ-583103, ದೂರವಾಣಿ ಸಂಖ್ಯೆ : 08392-255201-297296

ಬಹಿರಂಗ ಹರಾಜು ಪ್ರಕಟಣೆ

ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್ ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ (SARFAESI)-2002 ರ ನಿಯಮ 8 (5) (ಸಿ) ರ ಮೇರೆಗೆ

ನಮ್ಮ ಬ್ಯಾಂಕಿನ ಹುಬ್ಬಳ್ಳಿ ಶಾಖೆಯಿಂದ ಸಾಲ ಪಡೆದಂತಹ ಈ ಕೆಳಗೆ ಕಾಣಿಸಿದ ಸಾಲಗಾರರು ಪಡೆದ ಸಾಲ ಮರುಪಾವತಿ ಮಾಡಲು **ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್ ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ** (SARFAESI)-2002 ರ ಕಲಂ 13(2) ರ ಅನ್ವಯ 60 ದಿನಗಳ ನೋಟೀಸು ಜಾರಿ ಮಾಡಿದಾಗ್ಯೂ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡದೆ ಇದ್ದುದರಿಂದ ಸದರಿ ಸಾಲಗಾರರು/ಜಾಮೀನುದಾರರು ಬ್ಯಾಂಕಿಗೆ ಬರೆದು ಕೊಟ್ಟಂತಹ ಸ್ಥಿರಾಸ್ತಿಯನ್ನು ಸದರಿ ಕಾಯ್ದೆ ಕಲಂ 13(4)ರ ಅನ್ವಯ ಬ್ಯಾಂಕು ಕಬ್ಜಾ ಪಡೆದುಕೊಂಡಿರುತ್ತದೆ ಹಾಗೂ ಕಾಯ್ದೆ ನಿಯಮ 9(1)ರ ಅನ್ವಯ 30 ದಿನಗಳ ಸ್ಥಿರಾಸ್ತಿ ಕಬ್ಜಾ ನೋಟೀಸನ್ನು ಜಾರಿ ಮಾಡಿದಾಗ್ಯೂ ಕೂಡ ಸಾಲದ ಮೊತ್ತವನ್ನು ಸಾಲಗಾರರು/ಜಾಮೀನುದಾರರ ಮರುಪಾವತಿ ಮಾಡದೆ ಇದ್ದ ಕಾರಣ ಈ ಕೆಳಗಿನ ಸಾಲಗಾರರ ಎದುರಿಗೆ ಕಾಣಿಸಿದ ಸ್ಥಿರಾಸ್ತಿಯನ್ನು ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್ ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯ್ದೆ 2002 ರ ನಿಯಮ 8 (1) ಹಾಗೂ (2) ರನ್ವಯ ಬ್ಯಾಂಕಿನ ಕಬ್ಜಾಕ್ಕೆ ತೆಗೆದುಕೊಳ್ಳಲಾಗಿದೆ. ಸದರಿ ಕಾಯ್ದೆ ನಿಯಮ 8 (5) (ಸಿ) ಅನ್ವಯ ಬ್ಯಾಂಕಿನ ಅಧಿಕೃತ ಅಧಿಕಾರಿ ಸದರಿ ಆಸ್ತಿಯನ್ನು ಬಹಿರಂಗ ಹರಾಜು ಮಾಡಲಿರುವರು. ಬಹಿರಂಗ ಹರಾಜಿನ ದಿನಾಂಕ, ವೇಳೆ ಹಾಗೂ ಸ್ಥಳವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

1) **ಸಾಲಗಾರರು /ಜಾಮೀನುದಾರರ ಹೆಸರು ಮತ್ತು ವಿಳಾಸ** : (1) ಮೇ॥ **"ಬಾಲಾಜಿ ಕಟ್ ಪೀಸ್" ಮಾಲೀಕರಾದ:- ಶ್ರೀಮತಿ ಐಶ್ವರ್ಯಾ ರೇವಣಕರ್ ಗಂಡ ಸುರೇಶ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359. ಇನ್ನೊಂದು ವಿಳಾಸ:-ಸಿ.ಟಿ.ಎಸ್. ವಾರ್ಡ ನಂ.1, ಸಿ.ಟಿ.ಎಸ್. ನಂ. 3856 1 3856 2, ದುರ್ಗದಬೈಲ್, ತಾ॥ ಹುಬ್ಬಳ್ಳಿ, ಮತ್ತು ಜಿ॥ ಧಾರವಾಡ-580020, **ಜಾಮೀನುದಾರರು** :- (1) **ಶ್ರೀ ಸುರೇಶ ತಂದೆ ಗಣಪತಿ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359, (2) **ಶ್ರೀ ಗಣಪತಿ ತಂದೆ ಸುಬ್ರಾಯ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359.

ಸಾಲದ ವಿವರ : 1) ಸಾಮಾನ್ಯ ಅವಧಿ ಸಾಲ ಸೌಲಭ್ಯ ಮತ್ತು ಖಾತೆ ಸಂಖ್ಯೆ. 2000081756801064 & 2) ಓವರ್‌ಡ್ರಾಫ್ಟ್ ಸಾಲ ಸೌಲಭ್ಯ ಮತ್ತು ಖಾತೆ ಸಂಖ್ಯೆ. 2000081772801096, ಬ್ಯಾಂಕಿಗೆ ಬರಬೇಕಾದ ರಕಂ 1) ರೂ. 80,18,752/- ಮತ್ತು, 2) ರೂ. 93,93,146/-
ಒಟ್ಟು ಮೊತ್ತ ರೂ. 1,74,11,898/- + ಮುಂದಿನ ಬಡ್ಡಿ ಹಾಗೂ ಇತರೆ.

2) **ಸಾಲಗಾರರು / ಜಾಮೀನುದಾರರ ಹೆಸರು ಮತ್ತು ವಿಳಾಸ** : (1) **ಶ್ರೀ ಸುರೇಶ ತಂದೆ ಗಣಪತಿ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359. **ಜಾಮೀನುದಾರರು** :- (1) **ಶ್ರೀಮತಿ ಐಶ್ವರ್ಯಾ ರೇವಣಕರ್ ಗಂಡ ಸುರೇಶ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359, (2) **ಶ್ರೀ ಗಣಪತಿ ತಂದೆ ಸುಬ್ರಾಯ ರೇವಣಕರ್** ಸಾ॥ # 450, ಸಬಗೇರಿ, ಯಲ್ಲಾಪುರ, ತಾ॥ ಯಲ್ಲಾಪುರ, ಮತ್ತು ಜಿ॥ ಉತ್ತರ ಕನ್ನಡ-581359,

ಸಾಲದ ವಿವರ : ವ್ಯಾಪಾರ ಸಾಲ ಸೌಲಭ್ಯ ಮತ್ತು ಖಾತೆ ಸಂಖ್ಯೆ : 2000081751091010,
ಬ್ಯಾಂಕಿಗೆ ಬರಬೇಕಾದ ರಕಂ : ರೂ. 44,00, 685/- + ಮುಂದಿನ ಬಡ್ಡಿ ಹಾಗೂ ಇತರೆ.

ಬ್ಯಾಂಕಿಗೆ ಅಡಮಾನವಿಟ್ಟ ಆಸ್ತಿಯ ವಿವರ : ಷೆಡ್ಯುಲ್ ಆಸ್ತಿ : 1) ಆರ್.ಎಸ್. ನಂ.222/1, ಆಸ್ತಿ ನಂ.8-506-48/ಇ ಮತ್ತು ಹಳೆಯ ನಂ.2-278, ಆಸ್ತಿಯ ಪ್ರದೇಶ:-06 ಗುಂಟ 08 ಅನ್ 7078.50 ಚದರ ಅಡಿ. ಈ ಆಸ್ತಿಯು ವಾರ್ಡ ನಂ.3 ಕಾಳಮ್ಮನಗರ, ಮಾರುಕಟ್ಟೆ ರಸ್ತೆ, KSRTC ಬಸ್ ನಿಲ್ದಾಣ ಹತ್ತಿರ, ಯಲ್ಲಾಪುರ, ಸಿಟಿ, ಪಂಚಾಯಾತ್, ಈ ಸ್ಥಳದಲ್ಲಿ ನೆಲೆಗೊಂಡಿದೆ. ಚಕ್ಕುಬಂದಿ:- **ಪೂರ್ವಕ್ಕೆ** : ಆರ್.ಎಸ್.ನಂ.221, **ಪಶ್ಚಿಮಕ್ಕೆ** : ಆರ್.ಎಸ್.ನಂ.223, **ಉತ್ತರಕ್ಕೆ** : ಆರ್.ಎಸ್.ನಂ.222 ಹಿಸ್ಸಾ ಜಿ.ಆರ್.1, **ದಕ್ಷಿಣಕ್ಕೆ** : ಆರ್.ಎಸ್.ನಂ.221 ಹಿಸ್ಸಾ ಜಿ.ಆರ್.6, ಈ ಆಸ್ತಿಯು **ಶ್ರೀಮತಿ ಐಶ್ವರ್ಯಾ ರೇವಣಕರ್ ಗಂಡ ಸುರೇಶ ರೇವಣಕರ್,** ಸಾ॥ # 450, ಸಬಗೇರಿ, ಯಲ್ಲಾಪುರ, ಜಿ॥ ಉತ್ತರ ಕನ್ನಡ. ಇವರ ಹೆಸರಿನಲ್ಲಿದೆ.

ಮೀಸಲು ಬೆಲೆ : ರೂ.7,07,000/- | ಇ.ಎಮ್.ಡಿ. ಮೊತ್ತ (ರೂ.): ರೂ.70,700/-

ಷೆಡ್ಯೂಲ್ ಆಸ್ತಿ :-2) ವಾಣಿಜ್ಯ ಆಸ್ತಿ ಹೊಂದಿರುವ ಆಸ್ತಿ ನಂ.12-19-48 ಮತ್ತು ಹಳೆಯ 3-227, ವಾರ್ಡ್ ನಂ.15 ಹೊಂದಿರುವ ಆರ್.ಎಸ್.ನಂ. 68 A1A1 ಹಿಸ್ಸಾ 1B ಅಳತೆ 4:12 ಗುಂಟಾ. ವಿಸ್ತೀರ್ಣ/ ಆಸ್ತಿಯ ವಿಸ್ತಾರ:- 480.75 ಚದರ ಮೀಟರ್ (ತೆರೆದ ಭೂಮಿ) ಈ ಆಸ್ತಿಯು ನೂತನ ನಗರ ಯಲ್ಲಾಪುದಲ್ಲಿದೆ. ತಾ॥ ಯಲ್ಲಾಪುರ ಮತ್ತು ಜಿ॥ ಉತ್ತರಕನ್ನಡ. ಚಕ್ಕುಬಂದಿ:- **ಪೂರ್ವಕ್ಕೆ** : PID ನಂ.12-19-50, 12-19-52, **ಪಶ್ಚಿಮಕ್ಕೆ** : ರಸ್ತೆ 1ನೇ ಮುಖ್ಯ 3.7, **ಉತ್ತರಕ್ಕೆ** : ರಸ್ತೆ 19ಬೆಲ್ ರಸ್ತೆ 7.6, **ದಕ್ಷಿಣಕ್ಕೆ** : PID ನಂ.12-513.11., ಈ ಆಸ್ತಿಯು **ಶ್ರೀ ಸುರೇಶ ತಂದೆ ಗಣಪತಿ ರೇವಣಕರ್,** ಸಾ॥ # 450, ಸಬಗೇರಿ, ಯಲ್ಲಾಪುರ, ಜಿ॥ ಉತ್ತರ ಕನ್ನಡ-581359. ಇವರ ಹೆಸರಿನಲ್ಲಿದೆ.

ಮೀಸಲು ಬೆಲೆ : ರೂ.87,93,000/- | ಇ.ಎಮ್.ಡಿ. ಮೊತ್ತ (ರೂ.): ರೂ.8,79,300/-

ಷೆಡ್ಯೂಲ್ ಆಸ್ತಿ :-3) ಸಿ.ಟಿ.ಎಸ್. ಸರ್ವೆ ನಂ. 3774/ಬಿ, ವಾರ್ಡ -1, ಆಸ್ತಿಯು ಪ್ರದೇಶ :- ಒಟ್ಟು 222.92 ಚ.ಅಡಿ. ಹೊಂದಿರುವ ವಾಣಿಜ್ಯ ಮಳಿಗೆ, ಈ ಆಸ್ತಿಯು ಬ್ರಾಡ್ ವೇ, ದುರ್ಗದಬೈಲ್‌ನಲ್ಲಿ ವಿದ್ಯಾಮಂದಿರ ಬುಕ್ ಡಿಪೋ ಪಕ್ಕದಲ್ಲಿ ಹುಬ್ಬಳ್ಳಿ ಈ ಸ್ಥಳದಲ್ಲಿ ನೆಲೆಗೊಂಡಿದೆ. ಚಕ್ಕುಬಂದಿ:-**ಪೂರ್ವಕ್ಕೆ** : ಆಸ್ತಿಯ ಬೇರಿಂಗ್ ಸಿ.ಟಿ.ಎಸ್ ಸರ್ವೆ, ನಂ.3774 ಸಿ, **ಪಶ್ಚಿಮಕ್ಕೆ** : ಆಸ್ತಿಯ ಬೇರಿಂಗ್ ಸಿ.ಟಿ.ಎಸ್ ಸರ್ವೆ ನಂ.3774 ಬಿ, **ಉತ್ತರಕ್ಕೆ** ; ಆಸ್ತಿಯ ಬೇರಿಂಗ್ ಸಿ.ಟಿ.ಎಸ್ ಸರ್ವೆ ನಂ.3774 ಎ, **ದಕ್ಷಿಣಕ್ಕೆ** : ರಸ್ತೆ. ಈ ಆಸ್ತಿಯು **ಶ್ರೀ ಸುರೇಶ ತಂದೆ ಗಣಪತಿ ರೇವಣಕರ್.** ಸಾ॥ # 450, ಸಬಗೇರಿ, ಯಲ್ಲಾಪುರ, ಜಿ॥ ಉತ್ತರ ಕನ್ನಡ-581359. ಇವರ ಹೆಸರಿನಲ್ಲಿದೆ.

ಮೀಸಲು ಬೆಲೆ : ರೂ.33,43,000/- | ಇ.ಎಮ್.ಡಿ. ಮೊತ್ತ (ರೂ.): ರೂ.3,34,300/-

ಷೆಡ್ಯೂಲ್ ಆಸ್ತಿ :-4) ವಾಣಿಜ್ಯ ಆಸ್ತಿ ಹೊಂದಿರುವ ಆಸ್ತಿ ನಂ. 8-4-125 ಮತ್ತು ಹಳೆಯ 1-4, 1-5, ವಾರ್ಡ್ ನಂ.3 ಹೊಂದಿರುವ ಆರ್.ಎಸ್.ನಂ.201* ಹಿಸ್ಸಾ ಜಿಆರ್ 2, ಅಳತೆ 11 ಗುಂಟಾ. ವಿಸ್ತೀರ್ಣ/ಆಸ್ತಿಯ ವಿಸ್ತಾರ:- 1112.88 ಚದರ ಮೀಟರ್ (ಕಟ್ಟಡದ ಸ್ತಂಭ ವಿಸ್ತೀರ್ಣ 552.30 ಚ.ಮೀ) ಇದು ವಾಣಿಜ್ಯ ಆರ್.ಸಿ.ಸಿ. GF1 ಅಳತೆ 463.400164 ಚ.ಮೀ...GF2 ಅಳತೆ 88.908171 ಚ.ಮೀ..., FF ಅಳತೆ 88.908171 ಚ.ಮೀ.., SF ಅಳತೆ 88.908171 ಚ.ಮೀ..., ಈ ಆಸ್ತಿಯು ದೇವಿ ದೇವಸ್ಥಾನ ರಸ್ತೆ, ಯಲ್ಲಾಪುರ, ತಾ॥ ಯಲ್ಲಾಪುರ ಮತ್ತು ಜಿ॥ ಉತ್ತರ ಕನ್ನಡ. ಚಕ್ಕುಬಂದಿ:- **ಪೂರ್ವಕ್ಕೆ** : PID ನಂ.8-4-119, **ಪಶ್ಚಿಮಕ್ಕೆ** : PID ನಂ.8-4-131., **ಉತ್ತರಕ್ಕೆ** ; 4 ದೇವಿ ದೇವಸ್ಥಾನ ರಸ್ತೆ 6.1, **ದಕ್ಷಿಣಕ್ಕೆ** : PID ನಂ.8-4-131. ಈ ಆಸ್ತಿಯು 1) **ಶ್ರೀಮತಿ ಐಶ್ವರ್ಯಾ ರೇವಣಕರ್ ಗಂಡ : ಸುರೇಶ ರೇವಣಕರ್** ಮತ್ತು 2) **ಶ್ರೀ ಸುರೇಶ ತಂದೆ ಗಣಪತಿ ರೇವಣಕರ್** ಇವರಗಳ ಹೆಸರಿನಲ್ಲಿದೆ.

ಮೀಸಲು ಬೆಲೆ : ರೂ.1,39,25,000/- | ಇ.ಎಮ್.ಡಿ. ಮೊತ್ತ (ರೂ.): ರೂ.13,92,500/-

ಹರಾಜಿನ ಸ್ಥಳ ದಿನಾಂಕ ಹಾಗೂ ವೇಳೆ : ಮಹಾವೀರ್‌ಗಲ್ಲಿ, ಕಾಳಮ್ಮ ಅಗಸಿ, ಹುಬ್ಬಳ್ಳಿ ಶಾಖೆ, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., ಸಭಾಂಗಣದಲ್ಲಿ ದಿನಾಂಕ 21.04.2025 ರಂದು ಬೆಳಿಗ್ಗೆ 11.30 ಗಂಟೆಗೆ.

ಷರತ್ತುಗಳು : 1) ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಆಯಾ ಸಾಲಗಾರರ/ಜಾಮೀನುದಾರರ ಮೇಲೆ ಕಾಣಿಸಿದ ಇ.ಎಮ್.ಡಿ. ಹಣವನ್ನು ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ), NEFT/ RTGS ಮೂಲಕ ಹರಾಜಿನ ವೇಳೆಗೆ ಮುಂಚಿತವಾಗಿ ಪಾವತಿಸತಕ್ಕದ್ದು., 2) ಹರಾಜಿನಲ್ಲಿ ಭಾಗವಹಿಸಿದ ಯಶಸ್ವಿ ಬಿಡ್ಡುದಾರರನ್ನು ಹೊರತು ಪಡಿಸಿ. ಉಳಿದವರ ಇ.ಎಮ್.ಡಿ ಹಣವನ್ನು ಲೀಲಾವು ಪ್ರಕ್ರಿಯೆ ಮುಗಿದ ನಂತರ ಪರತ್ ಕೊಡಲಾಗುವುದು. 3. ಹರಾಜಿಗೆ ನಿಗದಿಪಡಿಸಿದ ದಿನಕ್ಕಿಂತ ಮೊದಲು ಅಧಿಕೃತ ಅಧಿಕಾರಿಯ ಪೂರ್ವಾನುಮತಿ ಮೇರೆಗೆ ಲಿಲಾವಿನಲ್ಲಿ ಭಾಗವಹಿಸಲಿಚ್ಛಿಸುವವರು ಸ್ಥಿರಾಸ್ತಿಯನ್ನು ಪರಿಶೀಲಿಸಬಹುದು., 4) ಹರಾಜಿನಲ್ಲಿ ಭಾಗವಹಿಸಿದವರು ಬಿಡ್ ಮಾಡುವಾಗ ಬಿಡ್ ಮೊತ್ತವನ್ನು ಪ್ರತಿ ಬಿಡ್‌ಗೆ ರೂ. 1,00,000/-ರಂತೆ ಗುಣಕಗಳಲ್ಲಿ ಹೆಚ್ಚಿಸಿ ಬಿಡ್ ಮಾಡಬೇಕು. 5) ಹರಾಜಿನಲ್ಲಿ ಯಶಸ್ವಿ ಬಿಡ್‌ದಾರರಾದವರು ತಕ್ಷಣವೇ ಹರಾಜಿನ ಶೇಕಡ 25% ರಕಮನ್ನು ಭರಿಸಬೇಕು. 6) ಬಾಕಿ ರಕಮನ್ನು ಬ್ಯಾಂಕಿನಿಂದ ಸ್ಥಿರಾಸ್ತಿ ಮಾರಾಟದ ಸ್ಥಿರೀಕರಣದ 15ನೇ ದಿನದಂದು ಅಥವಾ ಅದರ ಒಳಗಾಗಿ ಸಂದಾಯಿಸಬೇಕು. 7) ನಿಗದಿತ ಅವಧಿಯೊಳಗೆ ಹಣ ಸಂದಾಯವಾಗದಿದ್ದಲ್ಲಿ ಯಶಸ್ವಿ ಬಿಡ್‌ದಾರನು 4ನೇ ಕರಾರಿನ್ವಯ ಭರಿಸಿದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಅಲ್ಲದೇ ಯಶಸ್ವಿ ಬಿಡ್‌ದಾರನು ಸ್ಥಿರಾಸ್ತಿಯಲ್ಲಿ ಯಾವುದೇ ಹಕ್ಕು ಹೊಂದಿರಲಾರರು, 8) ಸ್ಥಿರಾಸ್ತಿ ನೊಂದಣಿಯನ್ನು ನೊಂದಣಿ ಕಛೇರಿಯಲ್ಲಿ ಖರೀದಿದಾರರೇ ತಮ್ಮ ಸ್ವಂತ ವೆಚ್ಚದಿಂದ ನೋಂದಣಿ ಮಾಡಿಸಿಕೊಳ್ಳಬೇಕು. 9) ಹರಾಜಿನ ಇನ್ನುಳಿದ ಷರತ್ತುಗಳನ್ನು ಹರಾಜಿನ ವೇಳೆ ಓದಿ ಹೇಳಲಾಗುವುದು ಹಾಗೂ ಸದರ ಷರತ್ತುಗಳಿಗೆ ಬಾಧ್ಯಸ್ತರಾಗಬೇಕಾಗುವದು. 10) ಹರಾಜನ್ನು ದೃಢೀಕರಿಸುವ, ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಬ್ಯಾಂಕಿನ ಅಧಿಕೃತ ಅಧಿಕಾರಿ ಹೊಂದಿರುತ್ತಾರೆ. ಅಧಿಕೃತ ಅಧಿಕಾರಿಯ ತೀರ್ಮಾನವೇ ಅಂತಿಮ ಹಾಗೂ ಬಂಧನಕಾರಿಯಾಗಿರುತ್ತದೆ.

ಸ್ಥಳ: ಬಳ್ಳಾರಿ
ದಿನಾಂಕ : 25.02.2025

ಸಹಿ/- ಅಧಿಕೃತ ಅಧಿಕಾರಿ
ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ. ಪ್ರಧಾನ ಕಚೇರಿ, ಬಳ್ಳಾರಿ

ನಗರಸಭೆ ಆಯವ್ಯಯ ಮಂಡನೆ

ಹಾವೇರಿ: ಹಾವೇರಿ ನಗರಸಭೆಯ ಪ್ರಸಕ್ತ 2025-26 ನೇ ಸಾಲಿನ ಆಯವ್ಯಯ ಮಂಡನೆ ಫೆಬ್ರುವರಿ 28ರಂದು ಶುಕ್ರವಾರ ಮುಂಜಾನೆ 11 ಗಂಟೆಗೆ ನಗರಸಭೆಯ ಸಭಾ ಭವನದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಣದ ವಿಕಿರಣದಿಂದ ಜನ ಇನ್ನೂ ಹೈರಾಣ

ಉತ್ತರ ಕನ್ನಡ ಜಿಲ್ಲೆಯ ಮಡಿಲಿನ ಕೆಂಡವೆಂದರೆ ಅದು ಕೈಗಾ ಅಣುವಿದ್ಯುತ್ ಸ್ಥಾವರ

ವಿಶಾಖಾ ಭಟ್

ಕಾರವಾರ: ಹಲವಾರು ಮನೆಗಳ ಮಹಿಳೆಯರಲ್ಲಿ, ಯುವಕರಲ್ಲಿ ಕಾಡುತ್ತಿದೆ ಮಂಡಿನೋವು, ಬೆನ್ನು ನೋವು. ಇದು ಹಳ್ಳಿಯಾದರೂ ನಗರಕ್ಕಿಂದ ಹೆಚ್ಚಿನನ ಜನ ಆರೋಗ್ಯ ಸಮಸ್ಯೆಯೊಂದಿಗೆ ಬದುಕುತ್ತಿದ್ದಾರೆ. ಈ ಹಿಂದೆಯೇ ಕಾಡಿ, ನರಕಕ್ಕೆ ದೂಡಿದ ಕ್ಯಾನ್ಸರ್ ಬೆನ್ನಿಗೆ ಬಂದಿದ್ದು ಇದೇ ಕಾಲು ಗಂಟು ನೋವು, ಥೈರಾಯ್ಡ್.

ಇದಕ್ಕೆಲ್ಲ ಕಾರಣ ಹತ್ತಿರದ ಕೈಗಾ ಸ್ಥಾವರದ ವಿಕಿರಣದ ಪ್ರಭಾವ ಎಂದು ಜನ ಹೇಳುವುದರಲ್ಲಿ ತಪ್ಪೇನಿಲ್ಲ. ಹಾಗಂದ ಮಾತ್ರಕ್ಕೆ ಕೈಗಾ ಸ್ಥಾವರದ ಹೊಣೆಗಾರರು ಸಾಕಷ್ಟು ಸಾಮಾಜಿಕ ಜವಾಬ್ದಾರಿಗಳನ್ನು ಕೈಗೊಂಡಿದ್ದಾರೆ. ಆದರೆ ರೋಗದಿಂದ ಬರುವ, ಆಗುವ ನೋವನ್ನು ಅವರಾರು ಭರಿಸಿಕೊಳ್ಳಲು ಸಾಧ್ಯವೇ ಇಲ್ಲ.

ಕೈಗಾ ಅಣುಸ್ಥಾವರ ಹಲವು ದುಷ್ಪರಿಣಾಮ ಬೀರುತ್ತಿದೆ ಎಂದು ಅಣುಸ್ಥಾವರ ಪ್ರಾರಂಭವಾದಗಿನಿಂದಲೂ ಪರಿಸರ ಹೋರಾಟಗಾರರು ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ. ಹೊರ ಸೂಸುವ ವಿಕಿರಣ ಮನುಷ್ಯ, ಮರ, ಮೃಗಗಳ ಮೇಲೆ ದುಷ್ಪರಿಣಾಮ ಬೀರಿದೆ ಎಂದು ಕೆಲ ವರದಿಗಳಿಂದ ಬಹಿರಂಗಗೊಂಡಿದೆ. ಇದೀಗ 5 ಮತ್ತು 6ನೇ ಘಟಕ ಕಾರ್ಯಾರಂಭಿಸಲು ಅನುಮೋದನೆ ದೊರೆತಿದ್ದು, ಇದರ ವ್ಯಾಪ್ತಿ ವಿಸ್ತಾರಗೊಂಡರೆ ವ್ಯತಿರಿಕ್ತ ಪರಿಣಾಮ ಬೀರುವ ಆತಂಕ ಎಲ್ಲರಲ್ಲೂ ಮನೆ ಮಾಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರದ ಕೈಗಾದಲ್ಲಿ ಈಗಾಗಲೇ ನಾಲ್ಕು ಘಟಕಗಳು ಕಾರ್ಯ ನಿರ್ವಹಿಸುತ್ತಿದೆ. 21 ಕೋಟಿ ರೂ. ವೆಚ್ಚದಲ್ಲಿ ಇನ್ನೆರಡು ಘಟಕ ಸ್ಥಾಪನೆಗೆ ಸರಕಾರ ಆಸಕ್ತಿ ವಹಿಸಿದೆ. ಈಗ ನಾಲ್ಕು ಘಟಕಗಳಿಂದ ಒಟ್ಟು 210 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದ್ದು, 5 ಮತ್ತು 6ನೇ ಘಟಕದ ನಿರ್ಮಾಣದ ನಂತರ ಕೈಗಾದಲ್ಲಿ 2.280 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ. ಜಿಲ್ಲೆಯಲ್ಲಿ ಅಣು ವಿದ್ಯುತ್ ಯೋಜನೆ ಮಂಜೂರಾದಾಗ ಇದನ್ನು ವಿರೋಧಿಸಿ ಹೋರಾಟ, ಪ್ರತಿಭಟನೆ ಮಾತ್ರವಲ್ಲದೇ ಹಲವು ಮಠದ ಸ್ವಾಮೀಜಿಗಳ ನೇತೃತ್ವದಲ್ಲಿಯೂ ಚಳವಳಿ ನಡೆದಿತ್ತು. ಆದರೆ ವಿರೋಧದ ನಡುವೆಯೂ ಸ್ಥಾವರವನ್ನು ಸ್ಥಾಪಿಸಲಾಯಿತು.

ಉತ್ತರ ಕನ್ನಡ ಜಿಲ್ಲೆಯ ಕೈಗಾ ಅಣುವಿದ್ಯುತ್ ಸ್ಥಾವರ.

ಅಣು ವಿದ್ಯುತ್ ಸ್ಥಾವರದ ವಿಕಿರಣಗಳಿಂದ ಜನರಲ್ಲಿ ಕ್ಯಾನ್ಸರ್ ಸೇರಿದಂತೆ ಹಲವು ಮಾರಣಾಂತಿಕ ರೋಗದ ಪ್ರಮಾಣ ಹೆಚ್ಚಾಗಿದೆ ಎನ್ನುವ ಮಾತು ಹಲವು ವರ್ಷಗಳಿಂದ ಕೇಳಿ ಬರುತ್ತಿದೆ. 2018ರಲ್ಲಿ ಈ ಬಗ್ಗೆ ಟಾಟಾ ಮೆಮೋರಿಯಲ್ ಸಂಸ್ಥೆ ಸಮೀಕ್ಷೆಯನ್ನು ನಡೆಸಿದ್ದು, ವರ್ಷದಿಂದ ವರ್ಷಕ್ಕೆ ರೋಗಕ್ಕೆ ತುತ್ತಾದವರ ಸಂಖ್ಯೆ ದುಪ್ಪಟ್ಟಾಗುತ್ತಿದೆ ಎಂಬ ಆಘಾತಕಾರಿ ಅಂಶವನ್ನು ಬಹಿರಂಗಗೊಳಿಸಿತ್ತು. ಇದೀಗ ಕೈಗಾದ ಗಡಿ ಪ್ರದೇಶವಾದ ಯಲ್ಲಾಪುರದ ಕೆಲ ಭಾಗ, ಅಂಕೋಲಾ, ಜೊಯಿಡಾದ ಗಡಿಗಳಲ್ಲಿನ ಜನರಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಕೃಷಿಕರೇ ಹೆಚ್ಚಿರುವ ಈ ಪ್ರದೇಶದಲ್ಲಿ ಇತ್ತೀಚಿನ ದಿನಗಳಲ್ಲಿಯೇ ಸುಮಾರು 50ಕ್ಕಿಂತಲೂ ಹೆಚ್ಚಿನ ಜನರಲ್ಲಿ ಕ್ಯಾನ್ಸರ್ ರೋಗ ಕಾಣಿಸಿಕೊಂಡಿದೆ.

ಅಣು ಸ್ಥಾವರ ಸ್ಥಾಪನೆಯಾದಾಗಿನಿಂದಲೂ ಜಿಲ್ಲೆಯ ಜನರು ವಿರೋಧ ನಡೆಸುತ್ತಲೇ ಬಂದಿದ್ದಾರೆ. ಆದರೆ ಜನಾಕ್ರೋಶದ ನಡುವೆಯೂ ಘಟಕ ನಿರ್ಮಾಣಕ್ಕೆ ಸರಕಾರ ಅನುಮೋದನೆ ನೀಡಿದ್ದು, ಯಾವೊಬ್ಬ ಜನಪ್ರತಿನಿಧಿಯೂ ಈ ಬಗ್ಗೆ ಧ್ವನಿ ಎತ್ತಲಿಲ್ಲ ಎಂದು ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

> ಕೈಗಾ ಅಣುಸ್ಥಾವರದಿಂದಲೇ ಕ್ಯಾನ್ಸರ್ ರೋಗ ಹೆಚ್ಚಾಗುತ್ತಿದ್ದು, ರೋಗಿಗಳ ಚಿಕಿತ್ಸೆಗಾಗಿ ವಿಶೇಷ ಅನುದಾನ ಬಿಡುಗಡೆಗೋಸ್ಕರ ಸರಕಾರಕ್ಕೆ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಅದರೆ ಈ ವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಇದರ ಕುರಿತು ಮುಂದಿನ ದಿನಗಳಲ್ಲಿ ಹೋರಾಟ ಕೈಗೊಳ್ಳುತ್ತೇವೆ.
>
> -ಅನಂತ ಹೆಗಡೆ ಅಶೀಸರ, ಜೀವ ವೈವಿಧ್ಯಮಂಡಳಿ ನಿಕಟಪೂರ್ವ ಅಧ್ಯಕ್ಷ

ದೇವರಿಗೆ ಮೊರೆ

ಯಲ್ಲಾಪುರ ತಾಲೂಕಿನ ಇಡಗುಂದಿ ಭಾಗದಲ್ಲಿ ಕ್ಯಾನ್ಸರ್ ರೋಗಿಗಳು ಹೆಚ್ಚಾದ ಹಿನ್ನಲೆಯಲ್ಲಿ ಜನತೆ ದೇವರ ಮೊರೆ ಹೋಗಿದ್ದು, ಎದುರಾದ್ ರೋಗ ನಿವಾರಣೆಗಾಗಿ ಯಜ್ಞ ಯಾಗಾದಿಗಳನ್ನು ಕೈಗೊಳ್ಳಲಾಗುತ್ತಿದೆ. ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತೀ ಶ್ರೀಗಳ ಸಾನಿಧ್ಯದಲ್ಲಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಸಲಾಗಿದೆ.

CHANGE OF NAME

I, **PRIYANKA M H** (Old Name) have changed my name and shall hereafter be known as **PRIYANKA** (New Name) R/o # 54, Rajapur Road, Near Balaji Hospital, Sarvodaya Nagar, Kalaguragi, Karnataka State-585105 Vide affidavit sworn before notary Venkatesh S.Naik at Dharwad on Dt: 25-02-2025

CHANGE OF NAME

I, **VIJAYALAXMI D/O LOKAPPA LAMANI** (Old Name) have changed my name and shall hereafter be known as **SMT.VIJAYALAXMI W/O SATISHKUMAR RATHODI** (New Name) R/o #02, Kalasapur Road, Sevalal Nagar, Sevalalnagar, Gadag, Vide affidavit sworn before notary Esther Rani at Dharwad on Dt: 25-02-2025

CHANGE OF NAME

I, **SHAILAJA D/O ISHWAR POL** (Old Name) have changed my name and shall hereafter be known as **SHAILAJA A KHARADE** (New Name) R/o Plot No:15, 3rd Cross, Nava Ayodhya Nagar, Hubli Vide affidavit sworn before notary Venkatesh S Naik, at Dharwad on Dt: 25-02-2025

ಬಣ್ಣದಮಠದಲ್ಲಿಂದು ವಿವಿಧ ಕಾರ್ಯಕ್ರಮ



ಶಿರಸಿ: ಇಲ್ಲಿನ ಬಣ್ಣದಮಠದಲ್ಲಿ ಮಠಾಧ್ಯಕ್ಷ ಶ್ರೀ ಶಿವಲಿಂಗ ಮಹಾಸ್ವಾಮಿಗಳವರ ಸಾನಿಧ್ಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಫೆಬ್ರವರಿ 26ರಂದು ಬುಧವಾರ ರಾತ್ರಿ 7-00 ಘಂಟೆಯಿಂದ ಸಾಮೂಹಿಕ ಇಷ್ಟಲಿಂಗ ಪೂಜೆ, ರುದ್ರಾಭಿಷೇಕ ಹಾಗೂ ಆಶೀರ್ವಚನ ನಡೆಯಲಿದೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮಠದ ವ್ಯವಸ್ಥಾಪಕರಾದ ಎಸ್.ಬಿ.ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಾಗೇಂದ್ರ ಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮೈ ನಕಾರಾಯ ನಮಃ ಶಿವಾಯ

ನಾಡಿನ ಸಮಸ್ತ ಜನತೆಗೆ
ಮಹಾಶಿವರಾತ್ರಿಯ
ಶುಭಾಶಯಗಳು

ಸೊಂಪಾದ ಪುಟಗಳು



ಬಣ್ಣ ಬಣ್ಣದ, ರುಚಿ ರುಚಿಯಾದ, ಸುವಾಸನಾಭರಿತ ಅಕ್ಷರಗಳು
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ನಮ್ಮ ನಾಡಿನ ಸಿಂಹಗಳನ್ನು ನೆನಪಿಸಿಕೊಳ್ಳುವವರಾರು?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿಮ್ಮ ಜೀವನದ ಲೇಖಕರು ನೀವೇ. ನೀವು ಏನನ್ನು ಬೇಕಾದರೂ ಬರೆಯಲು ಸ್ವತಂತ್ರರು. ನಿಮ್ಮ ಬಗ್ಗೆ ಏನೇ ಬರೆದರೂ ಅದನ್ನು ಬೇರೆಯವರು ಓದುತ್ತಾರೆ. ಹೀಗಾಗಿ ಏನು ಬರೆಯಬೇಕು ಎಂಬುದು ನಿಮಗೆ ಬಿಟ್ಟಿದ್ದು. ಎಡಿಟ್ ಮಾಡಲು, ಬರೆದಿದ್ದನ್ನು ಹರಿದು ಪುನಃ ಬರೆಯಲು ಹಿಂದೇಟು ಹಾಕಬಾರದು. ಅಂತಿಮ ಕಾಪಿ ಚೆನ್ನಾಗಿರಬೇಕಷ್ಟೆ.

ವಕ್ರತುಂಡೋಕ್ತಿ

ಕೆಲವರು ಭವಿಷ್ಯದ ಬಗ್ಗೆ ಸಾಕಷ್ಟು ಚಿಂತಿಸಿ ಕ್ರಮಕೈಗೊಳ್ಳುತ್ತಾರೆ. ಅಂಥವರು ಒಂದರ ಬದಲು ಮೂರು ಕೇಸ್ ಬಿಯರ್ ಖರೀದಿಸುತ್ತಾರೆ.

ಕಂಡಕ್ಟರ್ ಮೇಲೆ ಹಲ್ಲೆ ಖಂಡಿಸಿ ಬೃಹತ್ ಪ್ರತಿಭಟನೆ

ಗಡಿಯಲ್ಲಿ ಕನ್ನಡಿಗರ ರಣಕಹಳೆ

ಬೆಳಗಾವಿ: ತಾಲೂಕಿನ ಸಣ್ಣ ಬಾಳೇಕುಂದ್ರಿಯಲ್ಲಿ ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಮೇಲಿನ ಹಲ್ಲೆ ಹಾಗೂ ಅವರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದನ್ನು ಖಂಡಿಸಿ ಬೆಳಗಾವಿಯ ರಾಣಿ ಚನ್ನಮ್ಮನ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ.ನಾರಾಯಣಗೌಡ, ಪ್ರವೀಣ ಶೆಟ್ಟಿ ಬಣಗಳ ಕಾರ್ಯಕರ್ತರು ಮಂಗಳವಾರ ಪ್ರತ್ಯೇಕವಾಗಿ ಪ್ರತಿಭಟಿಸಿದರು. ಗಡಿಯಲ್ಲಿ ನಾಡವಿರೋಧಿ ಚಟುವಟಿಕೆ ಕೈಗೊಳ್ಳುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಎಂಇಎಸ್, ಶಿವಸೇನೆ ಕಾರ್ಯಕರ್ತರು ಭಯೋತ್ಪಾದರು: ಇದಕ್ಕೂ ಮುನ್ನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕರವೇ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಪಾಕಿಸ್ತಾನದ ಭಯೋತ್ಪಾದಕರಿಗೂ ಎಂಇಎಸ್ ಹಾಗೂ ಶಿವಸೇನೆಯ ಕಾರ್ಯಕರ್ತರಿಗೂ ಯಾವುದೇ ವ್ಯತ್ಯಾಸವಿಲ್ಲ. ಇವರ ವರ್ತನೆಗಳು ಅಷ್ಟು ಕ್ರೂರವಾಗಿವೆ. ಅಮಾಯಕ ಬಸ್ ಚಾಲಕ, ನಿರ್ವಾಹಕರನ್ನು ಹೊಡೆಯುತ್ತಾರೆ. ಅವರ ಮುಖಕ್ಕೆ ಮಸಿ ಬಳಿದು ಬೆದರಿಕೆ ಹಾಕಿ ಜೈ ಮಹಾರಾಷ್ಟ್ರ ಎಂದು ಹೇಳಿಸಿದ್ದಾರೆ. ಇದು ಭಯೋತ್ಪಾದಕರು ಮಾಡುವಂಥ ಕೃತ್ಯ ಎಂದರು.

ಜಿಲ್ಲಾಧಿಕಾರಿ ವಿರುದ್ಧ ಕಿಡಿ: ಮರಾಠಿಗರಿಗೆ ಮರಾಠಿ ಭಾಷೆಯಲ್ಲೇ ದಾಖಲೆ ನೀಡುತ್ತೇನೆ ಎಂದು ಹೇಳಿದ ಜಿಲ್ಲಾಧಿಕಾರಿ ನಡೆ ಖಂಡನೀಯ. ಹೊರ ರಾಜ್ಯದಿಂದ ಬಂದು ಕನ್ನಡಿಗರ ಭಾವನೆಗಳಿಗೆ ಧಕ್ಕೆ ಮಾಡಬೇಡಿ ಎಂದರು.

→ 8

ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಮೇಲಿನ ಹಲ್ಲೆ ಹಾಗೂ ಅವರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕನ್ನಡಿಗರನ್ನು ಕೆಣಕಿದವರನ್ನು ಸುಮ್ಮನೇ ಬಿಡುವುದಿಲ್ಲ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ. ಇಲ್ಲಿರುವ ಎಲ್ಲ ಮರಾಠಿಗರೂ ಜೈ ಕರ್ನಾಟಕ ಎಂದು ಹೇಳಲೇಬೇಕಾದ ದಿನಗಳು ಬರುತ್ತವೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಈಗ ಬೆಳಗಾವಿಯಲ್ಲಿ ಸಂಪೂರ್ಣ ನಾಶವಾಗಿದೆ. ಯಾರೂ ದಿಕ್ಕಿಲ್ಲ. ಆ ಹೊಟ್ಟೆಕಿಚ್ಚಿನಿಂದ ಈ ರೀತಿ ಹಲ್ಲೆ, ದಾಳಿಗಳನ್ನು ಮುಂದುವರಿಸಿದ್ದಾರೆ. ಕ್ರಿಯೆಗೆ ಪ್ರತಿಕ್ರಿಯೆ ನೀಡಿಯೇ ತೀರುತ್ತೇವೆ.
– **ಟಿ.ಎ.ನಾರಾಯಣಗೌಡ,** ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ

ಪೋಕ್ಸೊ ವಾಪಸ್

ಕರ್ನಾಟಕ ಹಾಗೂ ಮಹಾರಾಷ್ಟ್ರ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ಬಸ್ ಕಂಡಕ್ಟರ್ ವಿರುದ್ಧದ ಸುಳ್ಳು ಪೋಕ್ಸೊ ಪ್ರಕರಣ ಸುಳ್ಳು ಎಂದು ಪೊಲೀಸ್ ಇಲಾಖೆ ವರದಿ ನೀಡಿದ್ದು, ಈ ಬೆನ್ನಲ್ಲೇ ಯುವತಿ ಕುಟುಂಬದವರು ದೂರು ವಾಪಸ್ ಪಡೆದಿದ್ದಾರೆ. ಗಡಿಯಲ್ಲಿ ಭಾಷಾ ವೈಷಮ್ಯ ಮರೆತು ನಾವೆಲ್ಲರೂ ಸಹೋದರರಂತೆ ಬದುಕೋಣ ಎಂದು ದೂರು ದಾಖಲಿಸಿದ ಕುಟುಂಬ ವಿನಂತಿ ಮಾಡಿಕೊಂಡಿದೆ. ಸುಳ್ಳು ಪೋಕ್ಸೊ ಪ್ರಕರಣ ದಾಖಲಿಸಿ ಪ್ರಕರಣ ದಿಕ್ಕು ತಪ್ಪಿಸಲು ಯತ್ನಿಸಿದ್ದ ಪುಂಡರಿಗೆ ಮುಖಭಂಗವಾಗಿದೆ.

ಸಿಪಿಐ ವರ್ಗಾವಣೆ: ಯಾವುದೇ ಪರಿಶೀಲನೆ ನಡೆಸದೇ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಕರ್ತವ್ಯಲೋಪವೆಸಲಾಗಿದೆ ಆರೋಪದ ಮೇಲೆ ಮಾರಿಹಾಳ ಠಾಣೆ ಸಿಪಿಐ ಗುರುರಾಜ್ ಕಲ್ಯಾಣ ಶೆಟ್ಟಿ ವರ್ಗಾವಣೆಯಾಗಿದ್ದಾರೆ. ಸಿಸಿಆರ್‌ಬಿಗೆ ವರ್ಗಾವಣೆ ಮಾಡಿ ಬೆಳಗಾವಿ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಆದೇಶಿಸಿದ್ದಾರೆ.

ಮಹಾಕುಂಭ ಮೇಳಕ್ಕೆ ಇಂದು ತೆರೆ

ಪ್ರಯಾಗರಾಜ್: ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮ ಎಂದೇ ಖ್ಯಾತಿಯಾದ ಮಹಾಕುಂಭ ಮೇಳಕ್ಕೆ ಬುಧವಾರ ಮಹಾಶಿವರಾತ್ರಿಯಂದು ತೆರೆ ಬೀಳಲಿದೆ. ಮಹಾಶಿವರಾತ್ರಿಯಂದು ಸಂಗಮದಲ್ಲಿ ಕೊನೆಯ ಅಮೃತ ಸ್ನಾನ ನಡೆಯಲಿದ್ದು, ಲಕ್ಷಗಟ್ಟಲೇ ಭಕ್ತರು ಸಂಗಮದಲ್ಲಿ ಪುಣ್ಯ ಸ್ನಾನ ಮಾಡಲು ಬರುವ ನಿರೀಕ್ಷೆಯಿದೆ. ಈಗಾಗಲೇ ಸಾವಿರಾರು ಜನರು ಪ್ರಯಾಗರಾಜ್‌ನತ್ತ ಬರುತ್ತಿದ್ದಾರೆ. ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಸ್ಥಳೀಯ ಸಂಸ್ಥೆ ಚುನಾವಣೆ ಹೊಸ್ತಿಲಲ್ಲಿ ಬದಲಾವಣೆ ಬೇಡ

ಹೈಕಮಾಂಡ್ ಭೇಟಿಯಾದ ಡಿಕೆ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕೂಗು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೆನ್ನಲ್ಲೇ ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, 'ಈಗೇಕೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬೇಡ' ಎನ್ನುವ ಬಗ್ಗೆ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದಾರೆ.

ದೆಹಲಿ ಪ್ರವಾಸದಲ್ಲಿರುವ ಡಿ.ಕೆ.ಶಿವಕುಮಾರ್, ಶೀಘ್ರದಲ್ಲಿಯೇ ಸ್ಥಳೀಯ ಸಂಸ್ಥೆ ಚುನಾವಣೆ ಎದುರಾಗಲಿದೆ. ಈ ಹಂತದಲ್ಲಿ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಕೈಹಾಕಿದರೆ ಪಕ್ಷದ ಸಂಘಟನೆಯಲ್ಲಿ ಸಮಸ್ಯೆ ಯಾಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಸ್ಥಳೀಯ ಸಂಸ್ಥೆ ಚುನಾವಣೆ ಯನ್ನು ತಮ್ಮ ನೇತೃತ್ವದಲ್ಲಿ ನಡೆಸಲು ಉತ್ಸುಕನಾಗಿದ್ದು, ಆವರೆಗೆ ಯಾವುದೇ ಕಾರಣಕ್ಕೂ ಅಧ್ಯಕ್ಷರ ಬದಲಾವಣೆ ಮಾಡಬಾರದು ಎಂದು ಮನವಿ ಮಾಡಿದ್ದಾರೆ.

ಶಶಿ ತರೂರ್‌ಗೆ ನೋಟಿಸ್

ದೆಹಲಿ: ಎಲ್‌ಡಿಎಫ್ ಸರಕಾರದ ಅಭಿವೃದ್ಧಿ ಉಪಕ್ರಮಗಳನ್ನು ಶ್ಲಾಘಿಸಿ ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ಬರೆದಿದ್ದ ಅಭಿಪ್ರಾಯ ಲೇಖನದ ಕುರಿತು ಕಾಂಗ್ರೆಸ್‌ನಲ್ಲಿ ವ್ಯಾಪಕ ಚಟುವಟಿಕೆಗಳಿಗೆ ಕಾರಣವಾಗಿದ್ದು, ವಿವಾದಿತ ಲೇಖನದ ಕುರಿತು ಸ್ಪಷ್ಟನೆ ನೀಡುವಂತೆ ಕಾಂಗ್ರೆಸ್ ಹೈಕಮಾಂಡ್ ಸಂಸದ ಶಶಿ ತರೂರ್‌ಗೆ ಸಮನ್ಸ್ ಜಾರಿ ಮಾಡಿದೆ.

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾಯಿಸುವಂತೆ ಲಿಂಗಾಯತ ನಾಯಕರ ಒಕ್ಕೊರಲ ಆಗ್ರಹ । ಬಸನಗೌಡ ಯತ್ನಾಳ್, ಜಿ.ಎಂ.ಸಿದ್ದೇಶ್ವರ ನೇತೃತ್ವದಲ್ಲಿ ಲಿಂಗಾಯತ ನಾಯಕರ ಸಭೆ

ಬಿವೈವಿ ವಿರುದ್ಧ ಸಮರ ಜಾತಿ ಬೆಂಬಲದ ಮೊರೆ

ಬೆಂಗಳೂರಿನನಲ್ಲಿ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ, ಬಸವಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಬಿಜೆಪಿಯ ಲಿಂಗಾಯತ ಸಮುದಾಯದ ಮುಖಂಡರ ಸಭೆ ನಡೆಯಿತು.

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಯುದ್ಧ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್ ಇದೀಗ, ಈ ಯುದ್ಧದಲ್ಲಿ 'ಬ್ರಹ್ಮಾಸ್ತ್ರ'ದ ರೀತಿಯಲ್ಲಿ ಜಾತಿ ಬೆಂಬಲದ ಮೊರೆ ಹೋಗಿದ್ದಾರೆ. ಸಮುದಾ ಯದ ಹಲವು ಮುಖಂಡರು ವಿಜಯೇಂದ್ರ ವಿರುದ್ಧ ಅಸಮಾಧಾನ ಹೊರಹಾಕಿರುವುದು, ಯತ್ನಾಳ್ ಬಣಕ್ಕೆ ಮತ್ತಷ್ಟು ಲಾಭವಾಗಿದೆ.

ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಬಸವಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಬಿಜೆಪಿಯಲ್ಲಿರುವ ಲಿಂಗಾಯತ ಸಮುದಾಯದ ಹಲವು ನಾಯಕರು ಭಾಗ ವಹಿಸಿದ್ದರು. ಸಮುದಾಯದ ಬಿಜೆಪಿ ಮಾಜಿ ಶಾಸಕರು, ಜಿಲ್ಲಾ ಮಾಜಿ ಅಧ್ಯಕ್ಷರು, ಮಾಜಿ ಪದಾಧಿಕಾರಿಗಳು ಸೇರಿ 60-70 ಜನರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರ ನಡೆಯ ವಿರುದ್ಧ ಆರೋಪಗಳು ಕೇಳಿಬಂದಿವೆ. ಅದರಲ್ಲಿಯೂ ಕಳೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ಲಿಂಗಾಯತ ಸಮುದಾ ಯದ ಹಲವು ನಾಯಕರಿಗೆ ಗೆಲ್ಲುವ ಶಕ್ತಿ ಇದ್ದರೂ 'ಬೆಳೆಯುತ್ತಾರೆ' ಎನ್ನುವ ಏಕೈಕ ಕಾರಣಕ್ಕೆ ಟಿಕೆಟ್ ತಪ್ಪಿಸಿದ್ದಾರೆ ಎಂದು ಅನೇಕರು ಆರೋಪ ಮಾಡಿದ್ದಾರೆ.

→ 8

- ಬಿ.ವೈ.ವಿಜಯೇಂದ್ರ ಬಿಟ್ಟು ಯಾರೇ ಬಿಜೆಪಿ ರಾಜ್ಯಾಧ್ಯಕ್ಷರೂ ಒಪ್ಪಿಗೆ
- ಸುನೀಲ್ ಕುಮಾರ್, ಕುಮಾರ್ ಬಂಗಾರಪ್ಪ, ಲಿಂಬಾವಳಿ ಹೆಸರು ಮುನ್ನೆಲೆಗೆ
- ವರಿಷ್ಠರ ಮೇಲೆ ಒತ್ತಡ ಹೇರಲು ಲಿಂಗಾಯತ ಮುಖಂಡರ ನಿರ್ಣಯ

ಬಿಎಸ್‌ವೈ ಕುಟುಂಬ ಮಾತ್ರ ಲಿಂಗಾಯತವಲ್ಲ

ಲಿಂಗಾಯತ ಸಮುದಾಯವೆಂದರೆ ಯಡಿಯೂರಪ್ಪ ಕುಟುಂಬವೆಂದು ಹೇಳುವುದು ಸರಿಯಲ್ಲ. ಯಡಿಯೂರಪ್ಪ ಅವರನ್ನು ಸಮುದಾಯ ಒಪ್ಪಿಕೊಂಡಿರಬಹುದು. ಆದರೆ ಅವರ ಪುತ್ರ ವಿಜಯೇಂದ್ರ ಅವರನ್ನು ಈವರೆಗೆ ಲಿಂಗಾಯತ ನಾಯಕನೆಂದು ಒಪ್ಪಿಕೊಂಡಿಲ್ಲ. ಆದರೂ, ಒತ್ತಾಯಪೂರ್ವಕವಾಗಿ ಹೇರುವ ಕೆಲಸವಾಗುತ್ತಿದೆ. ಸಮುದಾಯದಲ್ಲಿರುವ ಇತರ ನಾಯಕರನ್ನು ಬೆಳೆಸಬೇಕಿದೆ. ಆದ್ದರಿಂದ ವಿಜಯೇಂದ್ರ ಹೊರತಾಗಿ ನಾಯಕತ್ವ ಬೆಳೆಯಬೇಕು ಎಂದು ಸಭೆಯಲ್ಲಿದ್ದ ಬಹುತೇಕ ಲಿಂಗಾಯತ ಮುಖಂಡರು ಆಗ್ರಹಿಸಿದ್ದಾರೆ.

ಶಕ್ತಿ ಗ್ಯಾರಂಟಿ ಸಫಲತೆಯ ಸಾಧನೆ

ಕರ್ನಾಟಕ ಸರ್ಕಾರ

ಮಹಿಳಾ ಸಬಲೀಕರಣದ ಪಯಣದಲ್ಲಿ ಮಹತ್ವದ ಮೈಲಿಗಲ್ಲು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

400 ಕೋಟಿ ಮಹಿಳಾ ಪ್ರಯಾಣಿಕರು
ರೂ.9803 ಕೋಟಿ ಉಚಿತ ಟಿಕೆಟ್ ಮೌಲ್ಯ

ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ಕಳೆದ 21 ತಿಂಗಳುಗಳ ಅವಧಿಯಲ್ಲಿನ ಸಾಧನೆಯ ಸಂಕ್ಷಿಪ್ತ ನೋಟ

- 5800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ
- 4891 ಹೊಸ ಬಸ್ಸುಗಳ ಸೇರ್ಪಡೆ (ಕರಾರಸಾ ನಿಗಮ 1165, ಬೆಂಮಸಾ ಸಂಸ್ಥೆ 1854, ವಾಕರಸಾ ಸಂಸ್ಥೆ 856, ಕಕರಸಾ ನಿಗಮ 1016)
- ಪಲ್ಲಕ್ಕಿ, ಅಶ್ವಮೇಧ ಕ್ಲಾಸಿಕ್, ಐರಾವತ ಕ್ಲಬ್ ಕ್ಲಾಸ್ 2.0, ಕಲ್ಯಾಣ ರಥ, ಅಂಬಾರಿ ಉತ್ಸವ, ಅಮೋಘ ವರ್ಷ ಹೊಸ ಬಸ್ಸುಗಳ ಸೇರ್ಪಡೆ
- 9000 ಹುದ್ದೆಗಳ ನೇಮಕಾತಿಗೆ ಅನುಮತಿ
- 2000 ಚಾಲಕ-ಕಂ-ನಿರ್ವಾಹಕರು ಹಾಗೂ 300 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಆದೇಶ ನೀಡಿಕೆ
- 6500 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳು ಶೀಘ್ರದಲ್ಲೇ ಪೂರ್ಣ (ಕರಾರಸಾ ನಿಗಮ 2000 ಚಾಲಕ-ಕಂ-ನಿರ್ವಾಹಕರು, ಬೆಂಮಸಾ ಸಂಸ್ಥೆ-2500 ನಿರ್ವಾಹಕರು, ವಾಕರಸಾ ಸಂಸ್ಥೆ-1000 ಚಾಲಕರು, 1000 ನಿರ್ವಾಹಕರು)
- 1452 ಹಳೆಯ ಬಸ್ಸುಗಳ ಪುನಶ್ಚೇತನ ಕಾರ್ಯ
- ಶಕ್ತಿ ಯೋಜನೆ ಜಾರಿಗೆ ಮುನ್ನ ಪ್ರತಿದಿನ ಕಾರ್ಯಾಚರಣೆ ಗೊಳಿಸುತ್ತಿದ್ದ 154955 ಟ್ರಿಪ್‌ಗಳ ಪ್ರಮಾಣವು 176787ಗೆ ಹೆಚ್ಚಳ, ಪ್ರತಿದಿನ 21832 ಹೆಚ್ಚುವರಿ ಟ್ರಿಪ್‌ಗಳ ಕಾರ್ಯಾಚರಣೆ
- ಬಸ್ಸುಗಳಲ್ಲಿ UPI ಡಿಜಿಟಲ್ ಪಾವತಿ ಜಾರಿ ಹಾಗೂ AWATAR 4.0 ಮತ್ತು ಇತರೆ ಮೌಲ್ಯವರ್ಧಿತ ಸೇವೆಗಳ ಅನುಷ್ಠಾನ
- 1000 ಮೃತ ಸಿಬ್ಬಂದಿಗಳ ಅವಲಂಬಿತರಿಗೆ ಅನುಕಂಪ ಆಧಾರದ ಮೇಲೆ ನೌಕರಿ ನೀಡಿಕೆ
- ಅಪಘಾತದಲ್ಲಿ (ಆನ್ ಡ್ಯೂಟಿ/ಆಫ್ ಡ್ಯೂಟಿ) ಮೃತಪಟ್ಟ ಸಾರಿಗೆ ನಿಗಮದ ಸಿಬ್ಬಂದಿಗಳ ಅವಲಂಬಿತರಿಗೆ ರೂ.1 ಕೋಟಿ ಚೆಕ್ ವಿತರಣೆ
- ಬಸ್ಸಿನಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರು ಬಸ್ ಅಪಘಾತಕ್ಕೆ ಒಳಗಾಗಿ ಮೃತಪಟ್ಟಲ್ಲಿ ಈ ಹಿಂದೆ ನೀಡುತ್ತಿದ್ದ ರೂ.3 ಲಕ್ಷ ಪರಿಹಾರ ಹಣವನ್ನು ರೂ.10 ಲಕ್ಷಕ್ಕೆ ಏರಿಕೆ
- ನಮ್ಮ ಕಾರ್ಗೋ-20 ಸರಕು ಸಾಗಣೆ ವಾಹನಗಳ ಮೂಲಕ ಲಾಜಿಸ್ಟಿಕ್ಸ್ ಸೇವೆ ಆರಂಭ
- ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯವರೊಂದಿಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕಕರಸಾ ನಿಗಮದ ಸಿಬ್ಬಂದಿಗಳಿಗಾಗಿ ಹೃದ್ರೋಗ ತಪಾಸಣೆ ಒಡಂಬಡಿಕೆ
- ಸಾರಿಗೆ ವಿದ್ಯಾ ಚೇತನ ಯೋಜನೆ-ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ ಇಲ್ಲಿಯವರೆಗೆ ರೂ. 2.60 ಕೋಟಿ ಪಾವತಿ
- ವಾಕರಸಾ ಸಂಸ್ಥೆಯ ಸಿಬ್ಬಂದಿಗಳಿಗೆ ಕಿಮ್ಸ್ ಮತ್ತು ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ 'ನಗದು ರಹಿತ' ವೈದ್ಯಕೀಯ ಸೌಲಭ್ಯ
- ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ ನೀಡಲಾಗುತ್ತಿದ್ದ ಕುಟುಂಬ ಕಲ್ಯಾಣ ವಿಮಾ ಯೋಜನೆ ಮೊತ್ತವನ್ನು ರೂ.3 ಲಕ್ಷ ದಿಂದ ರೂ.10 ಲಕ್ಷಕ್ಕೆ ಏರಿಕೆ
- KSRTC ಆರೋಗ್ಯ ಯೋಜನೆಯು ದಿನಾಂಕ: 06.01.2025 ರಿಂದ ಜಾರಿಯಾಗಿದ್ದು, ರಾಜ್ಯದಾದ್ಯಂತ 340+ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ, 34000 ನೌಕರರು ಹಾಗೂ ಅವರ ಅವಲಂಬಿತರು ಸೇರಿ 1.17 ಲಕ್ಷ ಫಲಾನುಭವಿಗಳಿಗೆ ನಗದು ರಹಿತ ಮಿತಿಯಿಲ್ಲದ ವೈದ್ಯಕೀಯ ಸೌಲಭ್ಯ

11.06.2023 ರಿಂದ 24.02.2025 ರವರೆಗೆ ಶಕ್ತಿ ಗ್ಯಾರಂಟಿಯ ವಿವರ (ಕೋಟಿಗಳಲ್ಲಿ)

ವಿವರ	ಕರಾರಸಾ ನಿಗಮ	ಬೆಂಮಸಾ ಸಂಸ್ಥೆ	ವಾಕರಸಾ ಸಂಸ್ಥೆ	ಕಕರಸಾ ನಿಗಮ	ಒಟ್ಟು
ಒಟ್ಟು ಪ್ರಯಾಣಿಕರು	207.86	216.58	151.25	105.97	681.66
ಒಟ್ಟು ಮಹಿಳಾ ಪ್ರಯಾಣಿಕರು	121.17	127.42	93.06	58.35	400.00
ಒಟ್ಟು ಮಹಿಳಾ ಪ್ರಯಾಣಿಕರ ಟಿಕೇಟ್ ಮೌಲ್ಯ (ರೂ.ಗಳಲ್ಲಿ)	3708.51	1695.84	2419.99	1979.53	9803.87

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕಳೆದ 21 ತಿಂಗಳುಗಳಲ್ಲಿ 153 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿದ್ದು, ಬದ್ಧತೆಯುಳ್ಳ ಸಿಬ್ಬಂದಿಗಳ ಸಮೂಹಕ್ಕೆ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು
ಸುರಕ್ಷತೆ, ವಿಶ್ವಾಸಾರ್ಹ ಪ್ರಯಾಣದ ಪ್ರತೀಕ
ನುಡಿದಂತೆ ನಡೆದಿದ್ದೇವೆ

ಕಂಡಕ್ಟರ್ ಮೇಲಿನ ಹಲ್ಲೆ ಖಂಡಿಸಿ ಕರವೇ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನೆ | ಆರೋಪಿಗಳ ವಿರುದ್ಧ ಗೂಂಡಾ ಕಾಯಿದೆಯಡಿ ಪ್ರಕರಣ ದಾಖಲಿಸಲು ಒತ್ತಾಯ

ಪುಂಡರ ವಿರುದ್ಧ ಕ್ರಮಕ್ಕೆ ಕರವೇ ಆಗ್ರಹ

ಬೆಳಗಾವಿ: ಗಡಿಯಲ್ಲಿ ಎಂಇಎಸ್ ಹಾಗೂ ಶಿವಸೇನೆ ಪುಂಡಾಟಿಕೆಗೆ ಸರಕಾರ ಕಡಿವಾಣ ಹಾಕಬೇಕು. ಕಂಡಕ್ಟರ್ ಮೇಲೆ ಹಲ್ಲೆ ಮಾಡಿರುವ ಆರೋಪಿಗಳ ವಿರುದ್ಧ ಗೂಂಡಾ ಕಾಯಿದೆಯಡಿ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿ ಮಂಗಳವಾರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ನಗರದ ಚನ್ನಮ್ಮ ವೃತ್ತದಲ್ಲಿ ಸೇರಿದ್ದ ಟಿ.ಎ.ನಾರಾಯಣಗೌಡ ಹಾಗೂ ಪ್ರವೀಣ್ ಶೆಟ್ಟಿ ಬಣದ ಕರವೇ ಕಾರ್ಯಕರ್ತರು ಗಡಿಯಲ್ಲಿ ಪುಂಡಾಟ ಮಾಡುತ್ತಿರುವ ನಾಡದ್ರೋಹಿಗಳ ವಿರುದ್ಧ ಸರಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. ಭಾಷೆ ಹೆಸರಿನಲ್ಲಿ ಪದೇ ಪದೆ ಬೆಳಗಾವಿಯ ಶಾಂತಿಗೆ ಚ್ಯುತಿ ತರುವ ಆರೋಪಿಗಳನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಕಿತ್ತೂರು ರಾಣಿ ಚನ್ನಮ್ಮ ಮೂರ್ತಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ, ಬೆಳಗಾವಿ ಕರ್ನಾಟಕ ಅವಿಭಾಜ್ಯ ಅಂಗ. ಈ ನಾಡಿನಲ್ಲಿ ಎಂಇಎಸ್ ಪುಂಡ ಪೋಕರಿಗಳು ರಾಜಕೀಯ ಮಾಡುತ್ತಿದ್ದಾರೆ. ಮುಗ್ಧ ಮರಾಠಿಗರನ್ನು ಮುಂದಿಟ್ಟುಕೊಂಡು ಪುಂಡಾಟಿಕೆ ನಡೆಸುವ ಪುಂಡರಿಗೆ ಮಾನಮರ್ಯಾದೆ ಇದೆಯಾ? ಕೊಲ್ಹಾಪುರದಲ್ಲಿ ಸಾರಿಗೆ ಬಸ್ ತಡೆದು ಕೇಸರಿ ಬಣ್ಣ ಹಚ್ಚಿ ಜೈ ಮಹಾರಾಷ್ಟ್ರ ಘೋಷಣೆ ಕೂಗಿಸುವ ಶಿವಸೇನೆ, ಕಿತ್ತುಹೋದ ಸೇನೆ. ಇವರು ಶಿವನ ಹೆಸರು ಇಟ್ಟುಕೊಂಡು ಮಾಡುವುದು ಅನಾಚಾರ. ಶಿವಸೇನೆಯ ಮುಖಂಡರ ಪುಂಡಾಟಿಕೆ ಜಾಸ್ತಿಯಾಗುತ್ತಿದೆ ಎಂದರು.

ಬೆಳಗಾವಿ ಜಿಲ್ಲಾಧಿಕಾರಿ ಸರಕಾರಿ ಅಧಿಕಾರಿಯಾಗಿ ಕನ್ನಡದ ಹಿತ ಕಾಯುವ ಬದಲು ಮರಾಠಿಗರಿಗೆ ಸಹಾಯ ಮಾಡುವುದಾಗಿ ಹೇಳಿರುವುದು ಖಂಡನೀಯ. ಬೆಳಗಾವಿಯಲ್ಲಿ ಇಬ್ಬರು ಸಚಿವರಿದ್ದರೂ ಕನ್ನಡದ ಪರವಾಗಿ ಗಟ್ಟಿಯಾಗಿ ಮಾತನಾಡಿಲ್ಲ. ನಾವು ಕನ್ನಡಿಗರ ಸ್ವಾಭಿಮಾನದ ಹಿತ ಕಾಯಲು ಬಂದಿದ್ದೇವೆ. ನೀವು ಮಾಡಿರುವ ರಾಜಕೀಯದಿಂದ ಬೆಳಗಾವಿಗೆ ಬೆಂಕಿ ಬಿದ್ದಿದೆ ಎಂದರು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ, ಉಪಾಧ್ಯಕ್ಷ ಗಣೇಶ ರೋಕಡೆ, ಸುರೇಶ ಗೌವನ್ನವರ, ರಮೇಶ ಯರಗಣ್ಣವರ ಸೇರಿ ಮತ್ತಿತರರು ಉಪಸ್ಥಿತರಿದ್ದರು.

> ಪೊಲೀಸ್ ಇಲಾಖೆ ಕನ್ನಡಿಗರ ಪರವಾಗಿದೆ. ಕಂಡಕ್ಟರ್ ಮೇಲೆ ಹಲ್ಲೆ ಮಾಡಿದ ಕಿಡಿಗೇಡಿಗಳನ್ನು ಬಂಧಿಸಲಾಗಿದೆ. ಈಗಾಗಲೇ ಕಂಡಕ್ಟರ್ ಮೇಲೆ ದೂರು ಕೊಟ್ಟಿದ್ದನ್ನು ಯುವತಿಯ ತಾಯಿ ಹಿಂಪಡೆದಿದ್ದಾರೆ.
>
> – ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಬೆಳಗಾವಿ ನಗರ ಪೊಲೀಸ್ ಆಯುಕ್ತ

> ಬೆಳಗಾವಿಯಲ್ಲಿ ಕನ್ನಡಿಗರಿಗೆ ತೊಂದರೆ ಕೊಟ್ಟರೆ ಎಂಇಎಸ್ ಪುಂಡರಿಗೆ ಬದುಕಲು ಬಿಡುವುದಿಲ್ಲ. ಕಂಡಕ್ಟರ್ ಕಣ್ಣೀರು ಹಾಕಿ ಮರಾಠಿಗರ ದೌರ್ಜನ್ಯ ಬಿಚ್ಚಿಟ್ಟಿದ್ದಾರೆ. ನಾನು ಹಲ್ಲೆಗೊಳಗಾದ ಕಂಡಕ್ಟರ್ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಉತ್ತಮ ಚಿಕಿತ್ಸೆ ಕೊಡಿಸುತ್ತೇನೆ.
>
> – ಟಿ.ಎ.ನಾರಾಯಣಗೌಡ ಕರವೇ ರಾಜ್ಯಾಧ್ಯಕ್ಷ

1. ಹಲ್ಲೆಗೊಳಗಾದ ಕಂಡಕ್ಟರ್ ಮಹಾದೇವ ಹುಕ್ಕೇರಿ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದ ಕರವೇ ಅಧ್ಯಕ್ಷ ಟಿ.ಎ ನಾರಾಯಣಗೌಡ. 2. ಕಂಡಕ್ಟರ್ ಮೇಲಿನ ಹಲ್ಲೆ ಹಾಗೂ ಎಂಇಎಸ್ ಪುಂಡಾಟಿಕೆ ವಿರೋಧಿಸಿ ಕರವೇ ನಾರಾಯಣಗೌಡ ಬಣದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರಕರಣದ ದಿಕ್ಕು ತಪ್ಪಿಸಲು ಯತ್ನಿಸಿದ್ದ ಪುಂಡರಿಗೆ ತೀವ್ರ ಮುಖಭಂಗ

ಪೋಕ್ಸೊ ಪ್ರಕರಣ ವಾಪಸ್

ಬೆಳಗಾವಿ: ಕರ್ನಾಟಕ ಹಾಗೂ ಮಹಾರಾಷ್ಟ್ರ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ಬಸ್ ಕಂಡಕ್ಟರ್ ವಿರುದ್ಧದ ಪೋಕ್ಸೊ ಪ್ರಕರಣ ಸುಳ್ಳು ಎಂದು ಪೊಲೀಸ್ ಇಲಾಖೆ ವರದಿ ನೀಡಿದ್ದು, ಈ ಬೆನ್ನಲ್ಲೇ ಯುವತಿ ಕುಟುಂಬದವರು ದೂರು ವಾಪಸ್ ಪಡೆದಿದ್ದಾರೆ.

ಗಡಿಯಲ್ಲಿ ಭಾಷಾ ವೈಷಮ್ಯ ಮರೆತು ನಾವೆಲ್ಲರೂ ಸಹೋದರರಂತೆ ಬದು ಕೋಣ ಎಂದು ದೂರು ದಾಖಲಿಸಿದ ಕುಟುಂಬ ವಿನಂತಿ ಮಾಡಿಕೊಂಡಿದೆ. ಸುಳ್ಳು ಪೋಕ್ಸೊ ಪ್ರಕರಣ ದಾಖಲಿಸಿ ಪ್ರಕರಣ ದಿಕ್ಕು ತಪ್ಪಿಸಲು ಯತ್ನಿಸಿದ್ದ ಪುಂಡರಿಗೆ ತೀವ್ರ ಮುಖಭಂಗವಾಗಿದೆ.

ಮಂಗಳವಾರ ಪ್ರಕರಣದ ಕುರಿತು ವಿಡಿಯೊ ಹೇಳಿಕೆ ಬಿಡುಗಡೆ ಮಾಡಿದ ಯುವತಿಯ ಕುಟುಂಬ ಸದಸ್ಯರು, 'ಅಂದು ಬಸ್‌ನಲ್ಲಿ ಕಂಡಕ್ಟರ್ ನಮ್ಮ ಮಗಳಿಗೆ ಕೆಟ್ಟ ಭಾಷೆ ಬಳಸಿದ್ದಾರೆ. ಈ ಸಂದರ್ಭದಲ್ಲಿ ಯುವತಿ ಕಣ್ಣೀರು ಹಾಕಿದ್ದಕ್ಕೆ ಯುವಕರು ಹೊಡೆದಿದ್ದಾರೆ. ಆದರೆ ಈ ವಿಷಯಕ್ಕೆ ಈಗ ಭಾಷೆ ಬಣ್ಣ ಕಟ್ಟಲಾಗಿದೆ. ಗಡಿ ಭಾಗದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಬೇಕು. ಕರ್ನಾಟಕ ಹಾಗೂ ಮಹಾರಾಷ್ಟ್ರದ ನಡುವೆ ಸಂಘರ್ಷದ ಪರಿಸ್ಥಿತಿ ನಿರ್ಮಾಣವಾಗಿದ್ದು ನೋವು ನೀಡಿದೆ. ನಾವು ಕನ್ನಡ ನೆಲದಲ್ಲಿ ಇರುವುದರಿಂದ ಕನ್ನಡಿಗರೇ. ನಮ್ಮ ಭಾಷೆ ಕನ್ನಡ. ಮನೆಯಲ್ಲಿ ನಾವೆಲ್ಲರೂ ಕನ್ನಡ ಮಾತನಾಡುತ್ತೇವೆ. ಪೋಕ್ಸೊ ಪ್ರಕರಣ ದಿಕ್ಕು ಬದಲಾಗಿದ್ದು ನೋವಾಗಿದೆ. ನಮ್ಮಿಂದ ಎರಡೂ ರಾಜ್ಯಗಳ ಜನರಿಗೆ ತೊಂದರೆಯಾಗಿದೆ. ಇದರಿಂದ ಪ್ರಯಾಣಿಕರಿಗೂ ಸಾಕಷ್ಟು ಅಡಚಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ನಾವು ದಾಖಲಿಸಿದ್ದ ಪ್ರಕರಣ ವಾಪಸ್ ಪಡೆಯುತ್ತೇವೆ ಎಂದು ಹೇಳಿದ್ದಾರೆ.

> ಕೇವಲ ಟಿಕೆಟ್ ವಿಚಾರಕ್ಕೆ ನಡೆದ ಜಗಳಕ್ಕೆ ಭಾಷೆ ಬಣ್ಣ ಕಟ್ಟಲಾಗಿದೆ. ನಮಗೂ ಕನ್ನಡದ ಮೇಲೆ ಸಾಕಷ್ಟು ಅಭಿಮಾನ ಇದೆ. ನಮ್ಮ ಮಗಳಿಗೆ ಕಂಡಕ್ಟರ್ ಅವಾಚ್ಯ ಶಬ್ದ ಬಳಸಿ ನಿಂದನೆ ಮಾಡಿದ್ದಾರೆ. ಆದರೂ ನಾವು ಶಾಂತಿ ಸುವ್ಯವಸ್ಥೆ ನೆಲೆಸಲಿ ಎಂಬ ಉದ್ದೇಶದಿಂದ ಪ್ರಕರಣ ವಾಪಸ್ ಪಡೆಯುವ ನಿರ್ಧಾರ ಮಾಡಿದ್ದೇವೆ.
>
> ಪ್ರಕರಣ ದಾಖಲಿಸಿದ್ದ ಯುವತಿಯ ತಾಯಿ

> ಯಾರೋ ಉದ್ದೇಶಪೂರ್ವಕವಾಗಿ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಯುವತಿ ನನಗೆ ಮಗಳ ಸಮಾನಳು. ಅವಳಿಗೆ ಯಾವುದೇ ಅವಾಚ್ಯ ಶಬ್ದ ಬಳಕೆ ಮಾಡಿಲ್ಲ. ನಾನು ಯಾರಿಗೂ ಕೆಟ್ಟದ್ದು ಬಯಸಿಲ್ಲ. ನನಗೆ ಆದ ಅನ್ಯಾಯಕ್ಕೆ ನ್ಯಾಯ ಕೇಳುತ್ತೇನೆ.
>
> – ಮಹಾದೇವ ಹುಕ್ಕೇರಿ ಹಲ್ಲೆಗೊಳಗಾದ ಬಸ್ ಕಂಡಕ್ಟರ್

ಕರ್ತವ್ಯಲೋಪ ಆರೋಪ ಇನ್‌ಸ್ಪೆಕ್ಟರ್ ವರ್ಗಾವಣೆ

ನಮ್ಮ ವರದಿ **ಪರಿಣಾಮ**

ಬೆಳಗಾವಿ: ಕಂಡಕ್ಟರ್ ಮೇಲಿನ ಹಲ್ಲೆ ಪ್ರಕರಣದ ದಿಕ್ಕುತಪ್ಪಿಸಿ ಕರ್ತವ್ಯಲೋಪದ ಆರೋಪ ಎದುರಿಸುತ್ತಿದ್ದ ಮಾರಿಹಾಳ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಜೆ.ಐ ಕಲ್ಯಾಣಶೆಟ್ಟಿಯನ್ನು ಬೆಳಗಾವಿ ನಗರ ಪೊಲೀಸ್ ಆಯುಕ್ತರು ವರ್ಗಾವಣೆ ಮಾಡಿದ್ದಾರೆ. ನಿರ್ವಾಹಕನ ಮೇಲಿನ ಹಲ್ಲೆ ಪ್ರಕರಣದ ನಂತರದಲ್ಲಿ ಮಾರಿಹಾಳ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕರ್ತವ್ಯಲೋಪದ ಕುರಿತು ವಿಶ್ವವಾಣಿ ನಿರಂತರ ವರದಿಗಳನ್ನು ಪ್ರಕಟಿಸಿತ್ತು. ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಆಯುಕ್ತರು,ತನಿಖೆಗೆ ಆದೇಶ ನೀಡಿದ್ದಾರೆ. ಕಲ್ಯಾಣಶೆಟ್ಟಿಯಿಂದ ತೆರವಾದ ಸ್ಥಾನಕ್ಕೆ ಸಿಸಿಆರ್‌ಬಿ ಘಟಕದ ಇನ್‌ಸ್ಪೆಕ್ಟರ್ ಮಂಜುನಾಥ ನಾಯಕ್ ಅವರನ್ನು ನಿಯೋಜಿಸಲಾಗಿದೆ. ಹಲ್ಲೆಗೊಳಗಾದ ಕರ್ತವ್ಯಲೋಪದ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಮಾಜಿ ಸಚಿವೆ ಉಮಾಶ್ರೀ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು. ಕಲ್ಯಾಣಶೆಟ್ಟಿಯನ್ನು ಸಿಸಿಆರ್‌ಬಿ ಘಟಕಕ್ಕೆ ವರ್ಗಾಯಿಸಲಾಗಿದ್ದು, ಆರೋಪಗಳ ಕುರಿತು ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಆಯುಕ್ತರು ವಿಶ್ವವಾಣಿಗೆ ಮಾಹಿತಿ ನೀಡಿದ್ದಾರೆ.

ಹಲ್ಲೆಗೊಳಗಾದವರಿಗೇ ನಿಂದಿಸಿದ್ದ

ಮರಾಠಿ ಭಾಷಿಕ ಪುಂಡರಿಂದ ಹಲ್ಲೆಗೊಳಗಾದ ನಿರ್ವಾಹಕ ಮಾರಿಹಾಳ ಠಾಣೆಗೆ ತೆರಳಿ ಪ್ರಕರಣ ದಾಖಲಿಸಲು ಮುಂದಾಗಿದ್ದರು. ಈ ಸಂದರ್ಭದಲ್ಲಿ ಇನ್‌ಸ್ಪೆಕ್ಟರ್ ಕಲ್ಯಾಣಶೆಟ್ಟಿ ಬಸ್ ಚಾಲಕ ಹಾಗೂ ನಿರ್ವಾಹಕನ ಮೇಲೆ ಹರಿಹಾಯ್ದು ಪ್ರಕರಣ ದಾಖಲಿಸಿಕೊಳ್ಳದೆ ವಾಪಸ್ ಕಳುಹಿಸಿದ್ದರು. ಘಟನೆ ನಂತರ ಹಿರಿಯ ಅಧಿಕಾರಿಗಳ ಗಮನಕ್ಕೆ ತರದೆ ಸುಳ್ಳು ಪೋಕ್ಸೊ ಕೇಸ್ ದಾಖಲಿಸಿಕೊಂಡಿದ್ದರಿಂದ ಇಡೀ ಪ್ರಕರಣ ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಉದ್ವಿಗ್ನ ಪರಿಸ್ಥಿತಿಗೆ ಕಾರಣವಾಗಿತ್ತು.

ಕನ್ನಡದ ತಂಟೆಗೆ ಬಂದ್ರೆ ಸುಮ್ಮನಿರಲ್ಲ

ಎಂಇಎಸ್ ಕಾರ್ಯಕರ್ತರಿಗೆ ಖಡಕ್ ಎಚ್ಚರಿಕೆ ನೀಡಿದ ಸಚಿವ

ಬೆಂಗಳೂರು: ಎಂಇಎಸ್ ಪುಂಡರು ಕನ್ನಡದ ತಂಟೆಗೆ ಬಂದರೆ ಸರಿಯಿರುವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

- ಕನ್ನಡದ ವಿಚಾರಕ್ಕೆ ಬಂದರೆ ನಿಮಗೆ ಸರಿಯಾದ ಶಿಸ್ತು ಕಲಿಸುವ ಪರಿಸ್ಥಿತಿ ನಿರ್ಮಾಣ ಆಗುತ್ತೆ
- ಪುಂಡಾಟಿಕೆ ಹೀಗೆ ಮುಂದುವರಿದರೆ ಗೂಂಡಾ ಪ್ರಕರಣ ದಾಖಲು
- ಅನ್ಯ ಭಾಷಿಕರು ಈ ನೆಲದ ಭಾಷೆ ಮತ್ತು ಕಾನೂನನ್ನು ಗೌರವಿಸಿ, ಪಾಲಿಸಬೇಕು

ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕದ ನೀರು, ಗಾಳಿ, ಅನ್ನ ತಿಂದು ಮತ್ತೊಂದು ಭಾಷೆಯ ಬಗ್ಗೆ ಬಹಳ ಪ್ರೀತಿ ವ್ಯಾಮೋಹ ತೋರಿಸಿದರೆ ಮುಂದೆ ಪರಿಣಾಮ ನೆಟ್ಟಗಿರಲ್ಲ. ಎಂಇಎಸ್ ಪುಂಡಾಟಿಕೆ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಬಗ್ಗೆ ಚರ್ಚೆ ಮಾಡುತ್ತೇವೆ. ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಅಂತ ಹೇಳಿದ್ದೇವೆ. ಕನ್ನಡದ ವಿಚಾರಕ್ಕೆ ಬಂದರೆ ನಿಮಗೆ ಸರಿಯಾದ ಶಿಸ್ತು ಕಲಿಸುವ ಪರಿಸ್ಥಿತಿ ನಿರ್ಮಾಣ ಆಗುತ್ತೆ ಎಂದು ಎಚ್ಚರಿಸಿದರು.

ಪುಂಡಾಟಿಕೆ ಹೀಗೆ ಮುಂದುವರಿದರೆ ಗೂಂಡಾ ಪ್ರಕರಣ ದಾಖಲಿಸಿ ಜೈಲಿಗೆ ಅಟ್ಟಬೇಕಾಗುತ್ತದೆ. ನಾವು ಕನ್ನಡಿಗರು ಬೇರೆ ಭಾಷೆಯನ್ನು ಪ್ರೀತಿಸುತ್ತೇವೆ, ಗೌರವಿಸುತ್ತೇವೆ. ಆದರೆ ಈ ರಾಜ್ಯದಲ್ಲಿ ವಾಸವಿರುವ ಅನ್ಯ ಭಾಷಿಕರು ಈ ನೆಲದ ಭಾಷೆ ಮತ್ತು ಕಾನೂನನ್ನು ಗೌರವಿಸಿ, ಪಾಲಿಸಬೇಕು. ಕನ್ನಡಿಗರು ಪುಂಡಾಟ ನಡೆಸಲ್ಲ. ಕನ್ನಡಿಗರು ಆ ರೀತಿ ಮಾತ ಮಾಡೋಕೆ ನಿಂತರೆ, ನೀವ್ಯಾರು ಉಳಿಯಂಗಿಲ್ಲ ಹುಷಾರಾಗಿರಿ ಎಂದು ಎಚ್ಚರಿಕೆ ನೀಡಿದರು.

> ಎಲ್ಲಾ ಮರಾಠಿಗರು ಈ ರೀತಿ ಮಾಡಲ್ಲ. ಕೆಲವೇ ಕೆಲವು ಪುಂಡರು ಈ ರೀತಿ ಮಾಡುತ್ತಿದ್ದಾರೆ. ಅದಕ್ಕೆ ಸರಿಯಾಗಿ ಉತ್ತರ ಕೊಡುವ ಪರಿಸ್ಥಿತಿ ಬಂದಿದೆ, ಕೊಟ್ಟೆ ಕೊಡುತ್ತೇವೆ. ಕನ್ನಡ ಭಾಷೆ, ನೆಲ ಮತ್ತು ಜಲದ ವಿಚಾರದ ಬಗ್ಗೆ ಪ್ರತಿಯೊಬ್ಬರು ಧ್ವನಿ ಎತ್ತಬೇಕು. ಬೆಳಗಾವಿ ನಾಯಕರು ಈ ಬಗ್ಗೆ ಮಾತನಾಡಬೇಕು. ನಾವು ಇಲ್ಲಿ ಹೇಳೋದಲ್ಲ, ಮರಾಠರ ಜಾಗದಲ್ಲೇ ನಿಂತು ಉತ್ತರ ಕೊಡುತ್ತೀವಿ. ನಮಗೆ ಯಾವುದೇ ಅಂಜಿಕೆ ಇಲ್ಲ. ಕನ್ನಡದ ವಿಚಾರಕ್ಕೆ ಬಂದರೆ ನಾವು ಸುಮ್ಮನಿರುವ ಪ್ರಶ್ನೆ ಇಲ್ಲ.
>
> –ಶಿವರಾಜ್ ತಂಗಡಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ನವಜಾತ ಶಿಶು ಮಾರಾಟಕ್ಕೆ ಯತ್ನ: ನಾಲ್ವರ ಬಂಧನ

ಕುಣಿಗಲ್: ನವಜಾತ ಶಿಶುವಿನ ಮಾರಾಟಕ್ಕೆ ಯತ್ನಿಸಿದ ಆರೋಪದ ಮೇಲೆ ಪೊಲೀಸರು ನಾಲ್ವರನ್ನು ಬಂಧನಕ್ಕೊಳಪಡಿಸಿದ್ದಾರೆ. ಕುಣಿಗಲ್‌ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕಿ ಹುಚ್ಚ ರಂಗಮ್ಮ ದೂರು ಆಧರಿಸಿ ಕುಣಿಗಲ್ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕೋಟೆಕಾರ್ ಬ್ಯಾಂಕ್ ದರೋಡೆ: ಇಬ್ಬರ ಸೆರೆ

ಮಂಗಳೂರು: ನಗರದ ಹೊರವಲಯದ ಕೆ.ಸಿ.ರೋಡ್‌ನಲ್ಲಿರುವ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಸಂಘ(ನಿ) ಬ್ಯಾಂಕ್‌ನಲ್ಲಿ ನಡೆದ ಭಾರೀ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಸೇರಿ ಇಬ್ಬರನ್ನು ಘಟನೆ ನಡೆದು ತಿಂಗಳ ಬಳಿಕ ಪೊಲೀಸರು ಬಂಧಿಸಿದ್ದಾರೆ.

ಬಂಟ್ವಾಳ ತಾಲೂಕು ಕನ್ಯಾನದ ಭಾಸ್ಕರ್ ಬೆಳ್ಚಪಾಡ ಯಾನೆ ಶಶಿ ತೇವರ್ (69) ಮತ್ತು ಕೆ.ಸಿ.ರೋಡ್‌ನ ಮೊಹಮ್ಮದ್ ನಝೀರ್ ಬಂಧಿತರು. ಜನವರಿ 17ರಂದು ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಸಿ.ರೋಡ್‌ನಲ್ಲಿರುವ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ಪಿಸ್ತೂಲ್ ತೋರಿಸಿ ಒಳಬಂದ ಐವರು ದರೋಡೆಕೋರರು ಕೆ.ಜಿಗಟ್ಟಲೆ ಚಿನ್ನ ಮತ್ತು ನಗದು ದರೋಡೆ ಮಾಡಿದ್ದರು.ಈ ಪ್ರಕರಣವನ್ನು ಪತ್ತೆ ಹಚ್ಚಿದ ಪೊಲೀಸರು ಆರೋಪಿಗಳು ದರೋಡೆಗೈದ ಚಿನ್ನಾಭರಣ ಮತ್ತು ಹಣವನ್ನು ವಶಪಡಿಸಿಕೊಂಡಿದ್ದು, ಪ್ರಕರಣದಲ್ಲಿ ಈಗಾಗಲೇ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ.

ವಿದೇಶಿ ಪ್ರವಾಸಿಗರೇ ಕೈಟ್ ಟಾರ್ಗೆಟ್

← ಮೊದಲಪುಟದಿಂದ

ಈ ಮೂಲಕ ನಮ್ಮಲ್ಲಿರುವ ಅನೇಕ ತಾಣಗಳನ್ನು ಹೊರಜಗತ್ತಿಗೆ ಪರಿಚಯವಾಗುತ್ತದೆ. ಮುಂದಿನ ಒಂದು ವರ್ಷದ ಬಳಿಕ ಕನಿಷ್ಠ ಒಂದು ಲಕ್ಷ ವಿದೇಶಿ ಪ್ರವಾಸಿಗರನ್ನು ಸೆಳೆಯುವ ನಿರೀಕ್ಷೆಯಿದೆ. ಕರ್ನಾಟಕ್ಕೆ ಅನೇಕರು ಬ್ಯುಸಿನೆಸ್ ಟ್ರಿಪ್ ಬರುತ್ತಾರೆ. ಆದರೆ ಮುಂದಿನ ದಿನಗಳಲ್ಲಿ ಈ ಬ್ಯುಸಿನೆಸ್ ಟ್ರಿಪ್ ಜತೆಗೆ ಪ್ರವಾಸಕ್ಕೂ ಸಮಯ ಮಾಡಿಕೊಂಡು ಬರುವಂತೆ ಮಾಡಬೇಕಿದೆ. ದೇಶಿಯ ಪ್ರವಾಸಿಗರನ್ನು ಸೆಳೆಯುವ ರಾಜ್ಯಗಳ ಪೈಕಿ ಕರ್ನಾಟಕವು ಟಾಪ್ ನಾಲ್ಕನೇ ಸ್ಥಾನದಲ್ಲಿದ್ದು, ಅದನ್ನು ಟಾಪ್ 3ಗೆ ಏರಿಕೆ ಮಾಡಬೇಕು ಎನ್ನುವ ಗುರಿಯಿದೆ. ಇದೇ ರೀತಿ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವ ವಿಷಯದಲ್ಲಿಯೂ ಟಾಪ್ 3ನಲ್ಲಿರಬೇಕು ಎನ್ನುವ ಗುರಿ ಇದೆ. ಪ್ರವಾಸಿಗರನ್ನು ಸೆಳೆಯುವುದು ನಿರಂತರ ಪ್ರಕ್ರಿಯೆಯಾಗಿದ್ದು, ಮುಂದಿನ ಮೂರು ವರ್ಷಗಳಲ್ಲಿ ಇದರ ಫಲಿತಾಂಶ ಸಿಗುವ ವಿಶ್ವಾಸವಿದೆ.

- **ಕರ್ನಾಟಕದಲ್ಲಿ ಪ್ರವಾಸೋದ್ಯಮಕ್ಕಿರುವ ಸವಾಲು ಹಾಗೂ ಲಾಭಗಳೇನು?**

– ಮೊದಲಿಗೆ ನಮ್ಮ ಶಕ್ತಿಯ ಬಗ್ಗೆ ನೋಡುವುದಾದರೆ, ಕರ್ನಾಟಕದಲ್ಲಿ ಮರುಭೂಮಿ ಹಾಗೂ ಹಿಮ ಬಿಟ್ಟರೆ ಇನ್ನುಳಿದ ಎಲ್ಲ ರೀತಿಯ ಪ್ರವಾಸೋದ್ಯಮದ ಸ್ಥಳಗಳು ನಮ್ಮಲ್ಲಿವೆ. ಇದರೊಂದಿಗೆ ಯುನೆಸ್ಕೋ ಗುರುತಿಸಿರುವ ನಾಲ್ಕು ಪಾರಂಪರಿಕ ತಾಣಗಳು ನಮ್ಮಲ್ಲಿವೆ. ಇದರೊಂದಿಗೆ ಎರಡು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಹಲವು ದೇಶಿಯ ವಿಮಾನಗಳಿವೆ. ಬಹುತೇಕ ಪ್ರವಾಸಿ ತಾಣಗಳಿಗೆ ರೈಲು ಹಾಗೂ ರಸ್ತೆ ಸಂಪರ್ಕವಿದೆ. ಇನ್ನು ಸವಾಲುಗಳ ಬಗ್ಗೆ ನೋಡುವುದಾದರೆ, ಕಲ್ಯಾಣ-ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ ಪ್ರವಾಸಿ ತಾಣಗಳಿಗೆ ಇನ್ನಷ್ಟು ಒತ್ತು ನೀಡಬೇಕಿದೆ. ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯಲು ಕನಿಷ್ಠ ತ್ರಿಸ್ಟಾರ್ ಹೋಟೆಲ್‌ಗಳ ಅಗತ್ಯವಿದ್ದು, ಖಾಸಗಿ ಪಾಲುದಾರರೊಂದಿಗೆ ಸೇರಿ ಇವುಗಳನ್ನು ಆರಂಭಿಸಬೇಕಿದೆ. ಪ್ರತಿಯೊಂದನ್ನು ಸರಕಾರವೇ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಖಾಸಗಿ ಪಾಲುದಾರಿಗೆ ಈ ಹಂತದಲ್ಲಿ ಮುಖ್ಯವಾಗುತ್ತದೆ.

- **ಅಭಿವೃದ್ಧಿ ನಿಗಮದಿಂದ ಯಾವೆಲ್ಲ ಪ್ಯಾಕೇಜ್‌ಗಳನ್ನು ಆರಂಭಿಸಲಾಗಿದೆ?**

– ಕೆಎಸ್‌ಟಿಡಿಸಿ ವತಿಯಿಂದ ಈಗಾಗಲೇ ನೂರಕ್ಕೂ ಹೆಚ್ಚು ಪ್ಯಾಕೇಜ್‌ಗಳನ್ನು ಆರಂಭಿಸಲಾಗಿದೆ. ಆದರೆ ಈ ಟೂರ್ ಪ್ಯಾಕೇಜ್‌ಗೆ ಹೆಚ್ಚಿನ ಪ್ರಚಾರದ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ನಿರ್ದಿಷ್ಟ ಪ್ಯಾಕೇಜ್‌ಗಿಂತ ಕಸ್ಟಮೈಸ್ಡ್ ಪ್ಯಾಕೇಜ್‌ಗಳನ್ನು ಜನ ಕೇಳುತ್ತಿದ್ದಾರೆ. ಆದ್ದರಿಂದ ಆ ನಿಟ್ಟಿನಲ್ಲಿಯೂ ನಿಗಮ ಕಾರ್ಯನಿರ್ವಹಿಸಬೇಕಿದೆ. ಇನ್ನು ಐದು ದಶಕಗಳ ಇತಿಹಾಸವಿರುವ ನಿಗಮದಲ್ಲಿ ಕೆಲವೊಂದಷ್ಟು ಬದಲಾವಣೆ ಮಾಡಬೇಕಿದೆ. ಈ ಸಂಬಂಧ ಬಜೆಟ್‌ನಲ್ಲಿ ಅನುದಾನ ಕೇಳಲಾಗಿದೆ. ಸರಕಾರದಿಂದ ಅನುದಾನದ ನಿರೀಕ್ಷೆಯಲ್ಲಿದ್ದೇವೆ.

ಆನೆ ದಾಳಿಗೆ ಮಹಿಳೆ ಬಲಿ

ಕೋಲಾರ: ತಾಲೂಕಿನ ಕಾಡಂಚಿನ ಪ್ರದೇಶದ ಗ್ರಾಮದಲ್ಲಿ ಮಂಗಳವಾರ ನಸುಕಿನಲ್ಲಿ ಆನೆ ದಾಳಿಗೆ ಸಿಲುಕಿ ರೈತ ಮಹಿಳೆ ಮೃತಪಟ್ಟಿದ್ದಾರೆ.

ಸಾಕರಸನಹಳ್ಳಿ ಗ್ರಾಮದ ಹೊರ ವಲಯದ ತೋಟದ ಮನೆ ಬಳಿ ವಾಸವಾಗಿದ್ದ ಮಂಜುಳಾ (44) ಮೃತ ಮಹಿಳೆ. ಮೂತ್ರ ವಿಸರ್ಜನೆಗಾಗಿ ಮನೆಯಿಂದ ಹೊರಬಂದ ವೇಳೆ ಆಕೆಯ ಮೇಲೆ ಒಂಟಿಸಲಗ ದಾಳಿ ನಡೆಸಿ ಕೊಂದಿದೆ. ಈ ದಾಳಿಯಿಂದ ಸಾಕರಸನಹಳ್ಳಿ ಸೇರಿದಂತೆ ಕಾಡಂಚಿನ ಗ್ರಾಮಗಳ ರೈತರಲ್ಲಿ ಆತಂಕ ಮನೆ ಮಾಡಿದೆ.

ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು. ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮೃತ ಮಹಿಳೆ ಮಂಜುಳಾ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 ಇ–ಮೇಲ್:eepwdbngdn@yahoo.com www.kpwd.gov.in
ಸಂಖ್ಯೆ:ಕಾನಿಇಂ/ಲೋಇ/ಬೆಂವಿ/2024–25/4203 ದಿನಾಂಕ:24.02.2025

ಟೆಂಡರ್ ಪ್ರಕಟಣೆ ಸಂಖ್ಯೆ:43
E-Portal:https://kppp.karnataka.gov.in/#/portal/portal-home
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರುರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಪ್ರಕ್ಯೂರ್‌ಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನೆಲಮಂಗಲ & ಆನೇಕಲ್** ಉಪವಿಭಾಗಕ್ಕೆ ಸಂಬಂಧಿಸಿದಂತೆ 05 ಸಂಖ್ಯೆಯ (ರೂ.200.00 ರಿಂದ 400.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಚೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.
ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:12.03.2025 ಸಂಜೆ 4.00 ಗಂಟೆಯವರೆಗೆ**
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ:13.03.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗೆ ಈ ಕಚೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಸಂಇ/ಸಿಪಿ/ಎಎಎ/5282/2024–25 ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222943, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ: 43/2024-25 ದಿನಾಂಕ : 25.02.2025
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು–ಬಂಡವಾಳ ವೆಚ್ಚಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ತೀರ್ಥಹಳ್ಳಿ ತಾಲ್ಲೂಕು ಆರಗ–ಬೇಳೂರು ಮುಖ್ಯ ರಸ್ತೆಯಿಂದ ಹೊಸಮನೆ ಮಾರ್ಗವಾಗಿ ರಾಜ್ಯ ಹೆದ್ದಾರಿ–52ರ ರಸ್ತೆಯನ್ನು ಸಂಪರ್ಕಿಸುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 1.20 ಕಿ.ಮೀ. ರಲ್ಲಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ.19746) ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.193.14 ಲಕ್ಷ ಮತ್ತು ಇ.ಎಂ.ಡಿ. ಮೊತ್ತ ರೂ.2.90 ಲಕ್ಷ. ಸದರಿ ಕಾಮಗಾರಿಗಳ ಟೆಂಡರ್ ಕಾಲಾವಧಿ 11 ತಿಂಗಳು ಮಳೆಗಾಲ ಸೇರಿ,
ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 25-02-2025 ರಿಂದ 04-03-2025 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 04-03-2025 ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ: 05-03-2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 06-03-2025 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ಶಿ/ನಂ.189-02 ಝೇಂಕಾರ್/2024-25 ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 32/1525–1534/2024–25 ದಿನಾಂಕ : 24–02–2025
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾವಣೆ ಮಾಡಿಸಿಕೊಂಡಿರುವ **ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,** ಕರ್ನಾಟಕ ಸರ್ಕಾರ ಇಲ್ಲಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : https://kppp.karnataka.gov.in ಮುಖಾಂತರ **ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಕನಕಪುರ ತಾಲ್ಲೂಕಿನಲ್ಲಿ** ಲೆಕ್ಕ ಶೀರ್ಷಿಕೆ ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕನಿಷ್ಠ ಅಂದಾಜು ಮೊತ್ತ ರೂ. 10.00 ಲಕ್ಷಗಳು, ಗರಿಷ್ಠ ಅಂದಾಜು ಮೊತ್ತ ರೂ. 150.00 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 03–03–2025 ರ ಸಂಜೆ 5.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : 04–03–2025 ರ ಸಂಜೆ 5.30 ಗಂಟೆಯ ನಂತರ. ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 07–03–2025 ರ ಸಂಜೆ 5.30 ಗಂಟೆಯ ನಂತರ.
ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/615/ಮಣಿಪಾಲ್/2024–25

ಕರ್ನಾಟಕ ಸರ್ಕಾರ,
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಅ:ಪಂರಾಇಂವಿ:ಮಂಡ್ಯ:ಮಟೆಂಪ್ರ:2024–25/2745
ದಿ:24.02.2025
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:50/2024–25
ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಅ:ಪಂರಾಇಂವಿ:ಮಂಡ್ಯ: ಟೆಂಪ: ಸಇಂ–2:47/2024–25 ದಿನಾಂಕ: 06.02.2025ರಂದು ಲೆಕ್ಕಶೀರ್ಷಿಕೆ :4235ರ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿ ಅನುಮೋದನೆಯಾಗಿರುವ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಅಹ್ವಾನಿಸಲಾಗಿತ್ತು. ಸದರಿ ಟೆಂಡರ್ ಪ್ರಕಟಣೆಯ ಕ್ರ.ಸಂ.(2)ರ ಮದ್ದೂರು ತಾ॥ ದೇಶಹಳ್ಳಿ (INDENT12651/CALL-2) ಮತ್ತು ಕ್ರ.ಸಂ(8)ರ ಶ್ರೀರಂಗಪಟ್ಟಣ ತಾ: ಕಪರನಕೊಪ್ಪಲು ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ (INDENT12712/ CALL-2) ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದ ಕಾರಣ ಸದರಿ ಕಾಮಗಾರಿಗಳಿಗೆ ಮರು ಟೆಂಡರ್ ಪ್ರಕಟಣೆ ಪ್ರಕಟಿಸಲಾಗಿದೆ. ಟೆಂಡರ್‌ಗಳನ್ನು KPPPortal ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:04.03.2025ರ ಸಂಜೆ 4.00 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/692/2024–25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ,
ಕೃಭಾಜನಿನಿ, ನಾಎದಂಕಾ, ವಿಭಾಗ ರೋಡಲಬಂಡಾ–584127
ತಾ: ಲಿಂಗಸುಗೂರು ಜಿ: ರಾಯಚೂರು
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/24–25/2323 ದಿನಾಂಕ:– 21.2.2025
ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ ಕರೆ)
Through Karnataka Public Procurement Portal Only)
(SERVICE TENDER)
Ref:First call Short Tender Notification No.889 Date:25.09.2024
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ reputed and authorized Man power Supply agencies, Registered in Karnataka State, ರವರಿಂದ Supply of Man power for water management of RLIS canal network upto March-2025.(INDENT NO.KBJNL/2024-25/SE0057/CALL-2) ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ Agencies ರವರು ದಿನಾಂಕ 25.2.2025 ರಿಂದ 5.3.2025 ಸಾಯಂಕಾಲ 5.00 ಗಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿ. 6.3.2025 ಅಪರಾಹ್ನ 5.15 ಗಂಟೆಗೆ ತೆರೆಯಲಾಗುವುದು.
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಕೃಭಾಜನಿನಿ, ನಾಎದಂಕಾ ವಿಭಾಗ, ರೋಡಲಬಂಡಾ.
DIP/RCR/761/KSMC&A/762/2024-25

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಗ್ಯಾರಂಟಿಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಕೇವಲ ಒಂದೂವರೆ ವರ್ಷದಲ್ಲೇ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಸಂಪೂರ್ಣ ಎಡವಿದೆ ಹಾಗೂ ಸರಕಾರದ ಆಡಳಿತ ವ್ಯವಸ್ಥೆ ನಿಷ್ಕ್ರಿಯಗೊಂಡಿದೆ. (ಸಿಎಂ ಸಿದ್ದರಾಮಯ್ಯ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಬಹಿರಂಗ ಪತ್ರ)

ಕೃಷ್ಣ, ಬೆಂಗಳೂರು

ಈಗ ಗ್ಯಾರಂಟಿಗಳ ಭರವಸೆ ನೀಡಿ ನಿಮ್ಮ ಸರಕಾರದಲ್ಲಿ ದೆಹಲಿಯಲ್ಲಿ ಗೆದ್ದಿಗೆ. ಒಂದು ವರ್ಷದ ನಂತರ ಪ್ರತಿಕ್ರಿಯೆ ಕೊಡಿ.

ವಿಶ್ವವಾಣಿ ಕ್ಲಬ್ ಹೌಸ್
26.02.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

ರಾಜ್ಯದ ವಿವಿಧ ಯೋಜನೆಗಳಿಗೆ ಅನುದಾನ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವರಿಗೆ ಡಿಸಿಎಂ

ನೀರಾವರಿ ಯೋಜನೆಗೆ ಅನುಮತಿ ನೀಡಿ

ಮನವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ತುಂಗಭದ್ರಾ ಎಡದಂಡೆ ಕಾಲುವೆ, ಘಟಪ್ರಭಾ ಬಲದಂಡೆ ಪ್ರಮುಖ ಕಾಲುವೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಇಂಡಿ ಕಾಲುವೆ, ಮಲಪ್ರಭಾ ಕಾಲುವೆಗಳ ವಿಸ್ತರಣೆ, ನವೀಕರಣ, ಆಧುನೀಕರಣ ಹಾಗೂ ಸೋಂತಿ ಏತ ನೀರಾವರಿ ಯೋಜನೆಗಳಿಗೆ ಅಗತ್ಯವಿರುವ ಅನುಮತಿ ಹಾಗೂ ಅನುದಾನ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್‌ಗೆ ಮನವಿ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಶಿವಕುಮಾರ್, ಅವರು ನನೆಗುದಿಗೆ ಬಿದ್ದಿರುವ ರಾಜ್ಯದ ಯೋಜನೆಗಳಿಗೆ ಅನುದಾನ ಹಾಗೂ ಅನುಮತಿ ನೀಡಲು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು. ಈ ವೇಳೆ ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ, ರಾಜ್ಯ ಸಣ್ಣ ನೀರಾವರಿ ಸಚಿವ ಬೋಸರಾಜ್, ದೆಹಲಿಯಲ್ಲಿ ರಾಜ್ಯ ಸರಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಜಲಸಂಪನ್ಮೂಲ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಇದ್ದರು.

ವೇಗವರ್ಧಿತ ನೀರಾವರಿ ಪ್ರಯೋಜನಗಳ ಅನುದಾನಕ್ಕೆ ಮನವಿ: ಪ್ರಮುಖವಾಗಿ ಭದ್ರಾ ಎಡದಂಡೆ ಕಾಲುವೆಯ ವಿಸ್ತರಣೆ, ನವೀಕರಣ, ಆಧುನೀಕರಣ ಯೋಜನೆಗೆ ಕರ್ನಾಟಕ ಈಗಾಗಲೇ ಕೇಂದ್ರ ಜಲ ಆಯೋಗಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಿದೆ. ತುಂಗಭದ್ರಾ ಎಡದಂಡೆ ಕಾಲುವೆಯು 226 ಕಿ.ಮೀ ಉದ್ದ ಹರಿಯಲಿದ್ದು, ಉತ್ತರ ಕರ್ನಾಟಕದ 2,44,103 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಒದಗಿಸಲಿದೆ. ಈ ಯೋಜನೆಯಿಂದಾಗಿ ಕಾಲುವೆಯ ಕೊನೆ ಭಾಗದ ರೈತರಿಗೂ ನೀರು ಸಮನಾಂತರವಾಗಿ ಹಂಚಿಕೆಯಾಗಲಿದೆ. ಜತೆಗೆ 96,400 ಹೆಕ್ಟೇರ್ ಪ್ರದೇಶದ ರೈತರಿಗೆ ನೆರವಾಗಲಿದೆ. ಈ ಯೋಜನೆಗೆ 1444.42 ಕೋಟಿ ರು.ಗಳ ಅನುದಾನ ಅಗತ್ಯವಿದೆ. ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ- ವೇಗವರ್ಧಿತ ನೀರಾವರಿ ಪ್ರಯೋಜನಗಳ ಕಾರ್ಯಕ್ರಮದಲ್ಲಿ ಅನುದಾನ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

1596.98 ಕೋಟಿ ರು.ಗಳ ಅನುದಾನ ಒದಗಿಸಿ: ಘಟಪ್ರಭಾ ಬಲದಂಡೆ ಪ್ರಮುಖ ಕಾಲುವೆಯ 0 ಕಿ.ಮೀನಿಂದ 199.09 ಕಿ.ಮೀವರೆಗೆ ಹಾಗೂ ಚಿಕ್ಕೋಡಿ ಭಾಗದ ಕಾಲುವೆ 30.00 ಕಿ.ಮೀ. ನಿಂದ 88.25 ಕಿ.ಮೀ. ವರೆಗೆ ಕಾಲುವೆಗಳ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸಲು ಕರ್ನಾಟಕ ಸರಕಾರ ದಿನಾಂಕ 10.02.2025ರಂದು ಡಿಪಿಆರ್ ಸಲ್ಲಿಕೆ ಮಾಡಿದೆ. ಇದರಿಂದ ಈ ಭಾಗದ ರೈತರಿಗೆ ನೀರನ್ನು ಸಮರ್ಪಕವಾಗಿ ಪೂರೈಸಲು ನೆರವಾಗಲಿದ್ದು, ಈ ಯೋಜನೆಗೆ ಪಿಎಂಕೆಎಸ್ ವೈ-ಎಐಬಿಪಿ ಯೋಜನೆ ಅಡಿಯಲ್ಲಿ 1596.98 ಕೋಟಿ ರು.ಗಳ ಅನುದಾನ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಮಲಪ್ರಭಾ ಕಾಲುವೆ ಯೋಜನೆ ವಿಸ್ತರಣೆಗೆ ಮನವಿ: ಮಲಪ್ರಭಾ ಕಾಲುವೆ ಯೋಜನೆಯ ಮೂರನೇ ಹಂತದಲ್ಲಿ ಕಾಲುವೆಗಳ ವಿಸ್ತರಣೆ, ನವೀಕರಣ, ಆಧುನೀಕರಣ ಗೊಳಿಸಲು ತೀರ್ಮಾನಿಸಿದ್ದು, ಇದಕ್ಕಾಗಿ 3000.00 ಕೋಟಿ ರು.ಗಳು ಅಗತ್ಯವಿದೆ. ಇದರ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲಾಗಿದೆ. ಈ ಯೋಜನೆ ಯಿಂದ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಹೀಗಾಗಿ ಸಚಿವಾಲಯವು ಡಿಪಿಆರ್ ಗೆ ಅನುಮತಿ ನೀಡಿ ಈ ಯೋಜನೆಗೆ ಅಗತ್ಯವಿರುವ ಅನುಮತಿಯನ್ನು ಕೊಡಿಸುವಂತೆ ಕೇಂದ್ರ ಜಲ ಆಯೋಗದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಜತೆಗೆ ಈ ಯೋಜನೆಗೆ ಅಗತ್ಯವಾಗಿರುವ ಅನುದಾನವನ್ನು ಪಿಎಂಕೆಎಸ್ ವೈ-ಎಐಬಿಪಿ ಯೋಜನೆ ಅಡಿಯಲ್ಲಿ ಒದಗಿಸಬೇಕು ಎಂದು ಮನವಿ ಮಾಡಲಾಗಿದೆ.

ದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಶಿವಕುಮಾರ್ ಅವರು ನನೆಗುದಿಗೆ ಬಿದ್ದಿರುವ ರಾಜ್ಯದ ಯೋಜನೆಗಳಿಗೆ ಅನುದಾನ ಹಾಗೂ ಅನುಮತಿ ನೀಡಲು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು.

ಪ್ರವಾಹ ನಿಯಂತ್ರಣಕ್ಕೆ 1610 ಕೋಟಿ ರು.ಅನುದಾನ ಒದಗಿಸಿ

ಭಾರತ ಸರಕಾರದ ಪ್ರವಾಹ ನಿರ್ವಹಣೆ ಮತ್ತು ಗಡಿ ಪ್ರದೇಶ ಕಾರ್ಯಕ್ರಮದಲ್ಲಿ ಬೆಣ್ಣಿಹಳ್ಳದಿಂದ ಮಲಪ್ರಭಾದ ಸಂಗಮದವರೆಗೂ ಪ್ರವಾಹ ನಿಯಂತ್ರಣ ಹಾಗೂ ಪ್ರವಾಹ ನಿರ್ವಹಣೆಯ ಕಾಮಗಾರಿಯನ್ನು ನಡೆಸಲು ಅಗತ್ಯವಿರುವ 1610.00 ಕೋಟಿ ಅನುದಾನವನ್ನು ನೀಡಬೇಕು. ಈ ವಿಚಾರವಾಗಿ ರಾಜ್ಯ ಸರಕಾರವು ಡಿಪಿಆರ್ ಸಲ್ಲಿಕೆ ಮಾಡಿದೆ. ಈ ಭಾಗದಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಅಕಾಲಿಕ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಲಿದ್ದು, ನೀರಿನ ಮಟ್ಟ ಹೆಚ್ಚಾಗಿ ನದಿಯ ಹರಿವು ಬೇರೆಡೆಗೆ ತಿರುಗುತ್ತದೆ. ಇದರಿಂದ ಪ್ರವಾಹ ಉಂಟಾಗಿ ಜನಜೀವನ ಅಸ್ತವ್ಯಸ್ತವಾಗುತ್ತಿದೆ. ಹೀಗಾಗಿ ಜಲಶಕ್ತಿ ಸಚಿವಾಲಯದ ಕೇಂದ್ರ ಜಲ ಆಯೋಗದ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಬೇಕು ಹಾಗೂ ಕೇಂದ್ರ ಸರಕಾರದ ಕಾರ್ಯಕ್ರಮದಡಿಯಲ್ಲಿ ಅನುದಾನ ನೀಡಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಇಂಡಿ ಕಾಲುವೆ ಯೋಜನೆ ವಿಸ್ತರಣೆಗೆ ಕೋರಿಕೆ

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪ್ರಮುಖ ಭಾಗವಾಗಿರುವ 172 ಕಿ.ಮೀ ಉದ್ದದ ಇಂಡಿ ಕಾಲುವೆ ಯೋಜನೆಯು ಕಲಬುರ್ಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಯ 1.31 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶಕ್ಕೆ ನೀರಾವರಿ ಒದಗಿಸಲಿದೆ. ಆದ್ದರಿಂದ ಸರಕಾರ ಇಂಡಿ ಕಾಲುವೆಯ 64.00 ಕಿ.ಮೀ. ನಿಂದ 172.00 ವರೆಗೂ ವಿಸ್ತರಣೆ, ನವೀಕರಣ, ಆಧುನೀಕರಣಗೊಳಿಸಲು (eRM) ತೀರ್ಮಾನಿಸಿದ್ದು, ಈ ಯೋಜನೆಗಾಗಿ 2666.70 ಕೋಟಿ ಮೊತ್ತದ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ದಿನಾಂಕ 20.02.2025ರಂದು ಸಲ್ಲಿಸಲಾಗಿದೆ. ಈ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ಪರಿಗಣಿಸಿ, ಪಿಎಂಕೆಎಸ್ ವೈ-ಎಐಬಿಪಿ ಯೋಜನೆ ಅಡಿಯಲ್ಲಿ ಈ ಯೋಜನೆಗೆ ಅನುದಾನ ಒದಗಿಸಬೇಕು ಎಂದು ಮನವಿ ಮಾಡಲಾಗಿದೆ.

ಕೆಲಸ ಮಾಡುವವರಿಗೆ ಮಾತ್ರ ಪಕ್ಷದ ಜವಾಬ್ದಾರಿ: ಡಿಕೆಶಿ

ಬೆಂಗಳೂರು: ತಾಲೂಕು ಮಟ್ಟದಲ್ಲಿ ಹಗಲಿರುಳೂ ಶ್ರಮಿಸುವವರಿಗೆ ಮಾತ್ರ ಪಕ್ಷದ ಜವಾಬ್ದಾರಿ ವಹಿಸಲಾಗುವುದು. ನಾಯಕರ ಹಿಂದೆ ಗಿರಕಿ ಹೊಡೆಯುವವರನ್ನು ನೇಮಿಸಿ ಪ್ರಯೋಜನವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪದಾಧಿಕಾರಿಗಳ ಪಟ್ಟಿಯಲ್ಲಿ ಕೆಲ ಮಂತ್ರಿಗಳ ಆಪ್ತರನ್ನು ಕೈಬಿಡಲಾಗಿದೆ ಎನ್ನುವ ವಿಷಯ ಗೊತ್ತಿಲ್ಲ. ಮಾಧ್ಯಮಗಳ ಬಳಿ ಮಾತಾಡಿರಬಹುದು. ನನ್ನ ಬಳಿ ಯಾರೂ ಮಾತನಾಡಿಲ್ಲ. ನಮಗೆ ಕೆಲಸ ಮಾಡುವವರು ಬೇಕು. ಅವರಿಗೆ ಜವಾಬ್ದಾರಿ ಕೊಟ್ಟರೆ ತಕ್ಕ ಫಲಿತಾಂಶ ಬರಬೇಕು. ನಮ್ಮ ಸುತ್ತ ಗಿರಿಗಿಟ್ಲೆಯಂತೆ ಸುತ್ತುತ್ತಿದ್ದರೆ ಆಗುವುದಿಲ್ಲ. ತಾಲೂಕಿನಲ್ಲಿ ಕೂತು, ಅಲ್ಲಿನ ಸಮಸ್ಯೆ ಬಗೆಹರಿಸಬೇಕು. ಫಲಿತಾಂಶ ಬರುವ ನಾಯ ಕತ್ವಕ್ಕೆ ಮಾತ್ರ ಆದ್ಯತೆ ನೀಡಲಾ ಗುವುದು ಎಂದರು.

ಈ ವಾರವೇ ಪಟ್ಟಿ ಬಿಡುಗಡೆ: ಪದಾಧಿಕಾರಿಗಳ ಪಟ್ಟಿಯನ್ನು ಹೈಕಮಾಂಡ್ ನಾಯಕರಿಗೆ ಸದ್ಯಕ್ಕೆ ನೀಡುವುದಿಲ್ಲ. ಪಟ್ಟಿ ಸಿದ್ಧವಾಗಿದ್ದು, ಯಾರಿಗೆ ಆಸಕ್ತಿ ಇಲ್ಲ ಅವರ ಜಾಗಕ್ಕೆ ಬೇರೆಯವರನ್ನು ನೇಮಿಸಲಾಗುವುದು. ಪಕ್ಷ ಸಂಘಟನೆ ವಿಚಾರದಲ್ಲಿ ನಮಗೆ ದಿನವಿಡೀ ಸ್ಥಳೀಯ ಮಟ್ಟದಲ್ಲಿ ಕೆಲಸ ಮಾಡುವವರು ಬೇಕು. ಬೇರೆಯವರ ಒತ್ತಡದ ಮೇರೆಗೆ ನೇಮಕ ಮಾಡಿಕೊಂಡು ಸಮಯ ವ್ಯರ್ಥ ಮಾಡುವುದರಲ್ಲಿ ಪ್ರಯೋಜನವಿಲ್ಲ. ಕೆಲಸ ಮಾಡುವವರಿಗೆ ಅವಕಾಶ ನೀಡಿ ಎಂದು ಎಐಸಿಸಿ ಆದೇಶ ನೀಡಿದೆ. ಈ ವಿಚಾರವಾಗಿ ನಾವು ವರದಿ ತರಿಸಿಕೊಂಡಿದ್ದು, ಸರಿಯಾಗಿ ಕೆಲಸ ಮಾಡುವವರಿಗೆ ಜವಾಬ್ದಾರಿ ನೀಡಲಾಗುವುದು. ಮೀಸಲಾತಿ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ ಅವರನ್ನು ತಯಾರಿ ಮಾಡಲಾಗುತ್ತಿದೆ. ಈ ವಿಚಾರವಾಗಿ ಮಂತ್ರಿಗಳ ಅಭಿಪ್ರಾಯ ಪಡೆಯುತ್ತಿದ್ದು, ಈ ವಾರವೇ ಈ ಪಟ್ಟಿ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ರಾಜ್ಯಾಧ್ಯಕ್ಷ ಹುದ್ದೆ ಆಕಾಂಕ್ಷಿಯಲ್ಲ

ಮೈಸೂರು: ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟ ಎಂಬುದು ಅಪ್ರಸ್ತುತ ಎನಿಸಿದೆ. ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತನೇ ಹೊರತು ರಾಜ್ಯಾಧ್ಯಕ್ಷ ಹುದ್ದೆಯ ಆಕಾಂಕ್ಷಿಯಲ್ಲ ಎಂದು ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಸಂಘಟನೆಗೆ ಮೊದಲ ಆದ್ಯತೆ ನೀಡುತ್ತಿದ್ದೇನೆ. ಮೊದಲು ಎಲ್ಲಾ ರೀತಿಯ ಸಂಘಟನೆಯಲ್ಲಿ ನಾನು ಪಾಲ್ಗೊಳ್ಳುತ್ತೇನೆ. ತಂದೆ, ತಾತ ಅವರ ಅನಾರೋಗ್ಯ ಹಿನ್ನೆಲೆಯಿಂದಾಗಿ ಒತ್ತಡ ಬರುತ್ತಿದೆ. ಆದರೆ, ಪಕ್ಷದಲ್ಲಿ ಹಲವು ಹಿರಿಯ ನಾಯಕರಿದ್ದು, ತಳಮಟ್ಟ ದಿಂದ ಸಂಘಟನೆಯನ್ನು ಕಾರ್ಯಕರ್ತರು ಕಟ್ಟಿ ಬೆಳೆಸಿದ್ದಾರೆ. ರಾಜ್ಯ ಸರಕಾರದ ವೈಫಲ್ಯದಿಂದ ಮುಂದೆ ಜೆಡಿಎಸ್ ಅಧಿಕಾರಕ್ಕೆ ಬರಲಿದೆ. ಎಲ್ಲ ಕಾರ್ಯಕರ್ತ ರಿಗೆ ಅಧಿಕಾರ ಕೊಡಿಸುವುದು ನಮ್ಮ ಗುರಿ ಎಂದು ತಿಳಿಸಿದರು.

ತನಿಖೆ ಎದುರಿಸಲು ಸಿದ್ಧ

ನಮ್ಮ ತೋಟದ ಮನೆ ವಿಚಾರ ಚರ್ಚೆಗೆ ಕಾರಣವಾಗಿದೆ. 2013ರಿಂದ ನಿರಂತರ ತನಿಖೆ ಮಾಡಿದ್ದಾರೆ. 1985ರಲ್ಲಿ ಕುಮಾರಸ್ವಾಮಿ ಖರೀದಿಸಿದ ಭೂಮಿ. ಇಂತಹ ಭೂಮಿ ಬೇಕೆಂದು ಎಂದೂ ಹೇಳಿದವರಲ್ಲ. ಬಿಡದಿಯಲ್ಲಿ ಬೃಹತ್ ಕಟ್ಟಡ ಕಟ್ಟಿ ವಾಣಿಜ್ಯ ವ್ಯವಹಾರ ಮಾಡುತ್ತಿಲ್ಲ. ದೇವೇಗೌಡರು ರಾಮನಗರದಲ್ಲಿ ಇರಬೇಕೆಂದು ರೈತರು ಭೂಮಿ ನೀಡಿದ್ದರು. ಈ ವಿಷಯದಲ್ಲಿ ಕಾನೂನು ತನಿಖೆ ಎದುರಿಸಲು ಎಂದು ನಿಖಿಲ್ ಸ್ಪಷ್ಟಪಡಿಸಿದರು.

ಸಮಾಚಾರ ಸಣ್ಣದಲ್ಲ

ಅಪಘಾತ: ಸ್ಥಳದಲ್ಲೇ ಇಬ್ಬರ ಸಾವು

ವಿಜಯಪುರ: ಪ್ರಯಾಗರಾಜ್‌ಗೆ ತೆರಳುತ್ತಿದ್ದಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ವಿಜಯಪುರದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಗುಜರಾತ್‌ನ ಪೋರಬಂದರ್ ಸಮೀಪ ನಡೆದಿದೆ.

ಚಡಚಣ ಪಟ್ಟಣದ ವಿಶ್ವನಾಥ ಅವಜಿ (55) ಹಾಗೂ ಮಲ್ಲಿಕಾರ್ಜುನ ಸದಲಗಿ (40) ಮೃತ ದುರ್ದೈವಿಗಳು. ಚಡಚಣದಿಂದ ಚಾಲಕ ಸೇರಿ 17 ಮಂದಿ ಮ್ಯಾಕ್ಸಿ ಕ್ಯಾಬ್‌ನಲ್ಲಿ ಪ್ರಯಾಗ ರಾಜ್ ಮಹಾ ಕುಂಭಮೇಳಕ್ಕೆ ತೆರಳಿದ್ದರು. ಈ ವೇಳೆ ಮ್ಯಾಕ್ಸಿ ಕ್ಯಾಬ್, ಪೋರ್‌ಬಂದರ್ ಸಮೀಪ ರಸ್ತೆಬದಿ ನಿಂತಿದ್ದ ಟಿಪ್ಪರ್‌ಗೆ ಡಿಕ್ಕಿಯಾಗಿದೆ. ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ, ನಾಲ್ವರು ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಪೋರಬಂದರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಲಕ ನಿದ್ದೆಯ ಮಂಪರಿನಲ್ಲಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಶಂಕಿಸಲಾಗಿದೆ. ಪೋರಬಂದರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಡಾ ಪ್ರಕರಣ: ಸತ್ಯಕ್ಕೆ ಸಂದ ಜಯ

ಮೈಸೂರು: ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ಪೊಲೀಸರು ಕ್ಲೀನ್ ಚಿಟ್ ನೀಡಿರುವುದು ಸತ್ಯಕ್ಕೆ ಸಿಕ್ಕಿದ ಜಯವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಜಮೀನು ಬಳಸಿಕೊಂಡು ನಿವೇಶನ ಕೊಟ್ಟಿದ್ದರು. ಇದನ್ನೇ ದೊಡ್ಡ ಹಗರಣ ಎಂದು ಬಿಜೆಪಿಯವರು ಬಿಂಬಿಸಿದರು. ಬೇಕೆಂತಲೇ ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿದರು. ಈಗ ಕ್ಲೀನ್‌ಚಿಟ್ ಸಿಕ್ಕುವ ಮೂಲಕ ಸತ್ಯಕ್ಕೆ ಜಯ ಲಭಿಸಿದೆ ಎಂದರು.

ಬಿಜೆಪಿ ರಾಜಕೀಯ: ಉದಯಗಿರಿ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಯಾರೋ ಕಿಡಿಗೇಡಿ ವಿವಾದಿತ ಪೋಸ್ಟ್ ಹಾಕಿದ್ದ. ಅದಕ್ಕೆ ಕೆಲವರು ಕಾನೂನು ಕೈಗೆತ್ತಿಕೊಂಡರು. ಸರಕಾರ ಇಬ್ಬರ ವಿರುದ್ಧವೂ ಕ್ರಮ ಕೈಗೊಂಡಿದೆ. ಇದನ್ನು ರಾಜಕೀಯ ಮಾಡಲು ಬಿಜೆಪಿ ಹೊರಟಿತ್ತು ಎಂದು ಯತೀಂದ್ರ ಆರೋಪಿಸಿದರು.

ಮಹಾ ಸರಕಾರದ ಜತೆ ಚರ್ಚೆಗೆ ಸೂಚನೆ

ಬೆಂಗಳೂರು: ದಿನದಿಂದ ದಿನಕ್ಕೆ ಬೆಳಗಾವಿ ಗಡಿಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರ ಸರಕಾರದೊಂದಿಗೆ ಚರ್ಚಿಸಲು ಸರಕಾರದ ಮುಖ್ಯಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ. ಬೆಳಗಾವಿಗೆ ತೆರಳಿ ಪರಿಸ್ಥಿತಿ ಪರಿಶೀಲಿಸಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ಚರ್ಚಿಸಿದ ಬಳಿಕ ಮುಖ್ಯಕಾರ್ಯದರ್ಶಿಗೆ ಸಿಎಂ ಸೂಚನೆ ನೀಡಿದ್ದಾರೆ.

ಈ ಬಗ್ಗೆ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, ಸೋಮವಾರ ಬೆಳಗಾವಿಗೆ ಹೋಗಿದ್ದೆ. ಹಲ್ಲೆಗೊಳಗಾಗಿದ್ದ ನಿರ್ವಾಹಕರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದೇನೆ. ಘಟನೆ ಕುರಿತು ಬೆಳಗಾವಿ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ನಮ್ಮ ರಾಜ್ಯದ ಬಸ್‌ಗಳು ಮಹಾರಾಷ್ಟ್ರಕ್ಕೆ ಹೋಗುತ್ತಿಲ್ಲ. 509 ನಮ್ಮ ಬಸ್‌ಗಳು ನಿತ್ಯ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದವು. ಮಹಾರಾಷ್ಟ್ರದ 130 ಬಸ್‌ಗಳು ರಾಜ್ಯಕ್ಕೆ ಆಗಮಿಸುತ್ತಿದ್ದವು. ಬಸ್ ಪ್ರಯಾಣ ಸ್ಥಗಿತಗೊಂಡು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದರು.

ನಮ್ಮ ರಾಜ್ಯದ ಒಂದು ಬಸ್‌ಗೆ ಮಸಿ ಬಳಿದಿದ್ದಾರೆ. ಮಹಾರಾಷ್ಟ್ರ ಬಸ್‌ಗೆ ನಮ್ಮವರು ಯಾವುದೇ ಬಣ್ಣ ಬಳಿದಿಲ್ಲ. ಅವರು ಕೇಸರಿ ಬಣ್ಣ ಬಳಿಯುವುದು. ಮಸಿ ಬಳಿಯುವುದು ಮಾಡುತ್ತಿದ್ದಾರೆ. ಎಲ್ಲ ವಿಚಾರಗಳನ್ನು ಸಿಎಂ ಗಮನಕ್ಕೆ ತಂದಿದ್ದೇನೆ. ಸಿಎಂ ಸಿದ್ದರಾಮಯ್ಯ ಕೂಡಲೇ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಮೂಲಕ ಮಹಾರಾಷ್ಟ್ರದ ಡಿಜಿ ಜತೆ ಮಾತನಾಡಲು ಸೂಚಿಸಿದ್ದಾರೆ. ಮಹಾರಾಷ್ಟ್ರ ಸರಕಾರದ ಜತೆ ಮಾತನಾಡುವಂತೆ ಮುಖ್ಯ ಕಾರ್ಯದರ್ಶಿಗೂ ಸೂಚನೆ ನೀಡಿದ್ದಾರೆ ಎಂದು ತಿಳಿಸಿದರು.



ಮಹಾರಾಷ್ಟ್ರದವರಿಗೆ ಅನ್ಯಾಯವಾಗಿದ್ದರೆ ಅವರು ಪ್ರತಿಭಟನೆ ಮಾಡಲಿ. ಅದು ಬಿಟ್ಟು ಬಸ್‌ಗಳಿಗೆ ಹಾನಿಮಾಡುವುದು ಸರಿಯಲ್ಲ. ಮೊದಲಿನಂತೆ ಎಂಇಎಸ್‌ಗೆ ಪ್ರಭಾವವಿಲ್ಲ. ಮೊದಲು ಅವರ ಪಕ್ಷದಿಂದ ಶಾಸಕರು ಆಯ್ಕೆಯಾಗಿ ಬರುತ್ತಿದ್ದರು. ಆದರೀಗ ಯಾರೂ ಆಯ್ಕೆಯಾಗುತ್ತಿಲ್ಲ. ಇದರೊಂದಿಗೆ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿಯೂ ಅಧಿಕಾರ ಕುಸಿದಿದೆ. ಅದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಎಂಇಎಸ್ ಪುಂಡರ ಹಾವಳಿ ತಡೆಯುವಂತೆ ಗೃಹ ಸಚಿವರು ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

-ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಓಮನ್‌ನ ಮೀನುಗಾರಿಕಾ ಬೋಟ್ ಪತ್ತೆ

ಉಡುಪಿ: ಮಲ್ಪೆ ಸೈಂಟ್ ಮೇರಿಸ್ ದ್ವೀಪದಲ್ಲಿ ಓಮನ್ ದೇಶದ ಮೀನುಗಾರಿಕಾ ಬೋಟ್ ಪತ್ತೆಯಾಗಿದೆ. ತಮಿಳುನಾಡಿನ ಮೂವರು ಮೀನುಗಾರರು ಓಮನ್ ಹಾರ್ಬರ್‌ನಿಂದ ತಪ್ಪಿಸಿಕೊಂಡು ಈ ಬೋಟ್‌ನಲ್ಲಿ ಭಾರತೀಯ ಸಮುದ್ರಕ್ಕೆ ಬಂದಿದ್ದರು ಎಂಬ ಮಾಹಿತಿ ದೊರೆತಿದೆ.

ಜೇಮ್ಸ್ ಫ್ರಾಂಕ್ಲಿನ್ (50), ರಾಬಿನ್ ಸ್ಟನ್ (50) ಮತ್ತು ಡಿರೋಸ್ ಅಲ್ಫೋನ್ಸ್ (38) ಎಂಬವರು ಓಮನ್ ಮೂಲದ ಬೋಟ್‌ನಲ್ಲಿ ಮೀನುಗಾರಿಕಾ ವೃತ್ತಿ ನಡೆಸುತ್ತಿದ್ದರು. ಆದರೆ, ಬೋಟ್ ಮಾಲೀಕರು ಇವರ ಪಾಸ್‌ಪೋರ್ಟ್ ವಶಕ್ಕೆ ಪಡೆದುಕೊಂಡು ವೇತನ ಹಾಗೂ ಆಹಾರ ನೀಡದೇ ಸತಾಯಿಸುತ್ತಿದ್ದರು. ಮಾಲೀಕ ಚಿತ್ರಹಿಂಸೆ ನೀಡುತ್ತಿದ್ದ ಕಾರಣ ಪ್ರಾಣಭಯದಿಂದ ಓಮನ್ ಹಾರ್ಬಾರ್‌ನಿಂದ ತಪ್ಪಿಸಿಕೊಂಡು ಬಂದಿದ್ದಾರೆ. ಓಮನ್ ಹಾರ್ಬರ್‌ನಿಂದ ತಪ್ಪಿಸಿಕೊಂಡು ಬಂದ ತಮಿಳುನಾಡಿನ ಮೀನುಗಾರರು ಸಮುದ್ರ ಮಾರ್ಗದಲ್ಲಿ 4 ಸಾವಿರ ಕಿ.ಮೀ ಕ್ರಮಿಸಿ ಭಾರತದ ಸಮುದ್ರ ತೀರಕ್ಕೆ ಬಂದಿದ್ದರು.

ನಾಳೆಯಿಂದ ಗೆಫೆಕ್ಸ್ ಸಮ್ಮೇಳನ

ಗೆಫೆಕ್ಸ್ ಕರ್ನಾಟಕದ ಮಾಹಿತಿ ತಂತ್ರಜ್ಞಾನ ಇಲಾಖೆ ಆಯೋಜಿಸಿರುವ ಭಾರತದ ಪ್ರಧಾನ ಎವಿಜಿಸಿ-ಎಕ್ಸ್‌ಆರ್ ಸಮ್ಮೇಳನ ಭಿತ್ತಿಪತ್ರವನ್ನು ಸಚಿವ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿದರು.

ಬೆಂಗಳೂರು: ನಾವೀನ್ಯತೆಯ ಪೋಷಣೆ, ಜ್ಞಾನದ ಹಂಚಿಕೆಯನ್ನು ಸಾಧ್ಯವಾಗಿಸುವಲ್ಲಿ ಮತ್ತು ಕಾರ್ಯತಂತ್ರೀಯ ಸಹಯೋಗಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆ ಆಶ್ರಯದಲ್ಲಿ ಫೆ. 27ರಿಂದ ಮೂರು ದಿನ ರಾಜಧಾನಿಯ ಲಲಿತ್ ಅಶೋಕ ಹೋಟೆಲ್‌ನಲ್ಲಿ ಗೆಫೆಕ್ಸ್ 2025 ಶೃಂಗಸಭೆ ನಡೆಯಲಿದೆ.

ಗೆಫೆಕ್ಸ್ ಕರ್ನಾಟಕದ ಮಾಹಿತಿ ತಂತ್ರಜ್ಞಾನ ಇಲಾಖೆ ಆಯೋಜಿಸಿರುವ ಭಾರತದ ಪ್ರಧಾನ ಎವಿಜಿಸಿ-ಎಕ್ಸ್‌ಆರ್ ಸಮ್ಮೇಳನವು (ಅನಿಮೇಷನ್, ವಿಷ್ಯುಯಲ್ ಎಫೆಕ್ಟ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿಯನ್ನು ಒಳಗೊಂಡಿರಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ವಿಶ್ವದ ನಂ1 ಎವಿಜಿಸಿ ಕೇಂದ್ರವಾಗಿ ಹಾಗೂ ಮಾಧ್ಯಮ ಮತ್ತು ಮನರಂಜನೆಯ ಕ್ಷೇತ್ರದಲ್ಲಿ ಭಾರತದ ಜಾಗತಿಕ ನಾಯಕತ್ವದ ಹಿಂದಿನ ಚಾಲಕಶಕ್ತಿಯಾಗಿ ಬೆಂಗಳೂರಿನ ಸ್ಥಾನವನ್ನು ಭದ್ರವಾಗಿಸುತ್ತ ಮಹತ್ವದ ಹೆಜ್ಜೆಯಾಗಿದೆ. 20,000ಕ್ಕೂ ಹೆಚ್ಚು ಮಂದಿಯ ನಿರೀಕ್ಷಿತ ಹಾಜರಿಯೊಂದಿಗೆ ಹಿಂದಿನ ಶೃಂಗಸಭೆಯ ಎರಡರಷ್ಟು ಈ ವರ್ಷದ ಶೃಂಗದಲ್ಲಿ ಎವಿಜಿಸಿ-ಎಕ್ಸ್‌ಆರ್ ಪರಿಸರ ವ್ಯವಸ್ಥೆಯಲ್ಲಿನ ಸೃಷ್ಟಿಕರ್ತರು, ಸ್ಟುಡಿಯೋಗಳು ಮತ್ತು ಉತ್ಸಾಹಿಗಳು ಪಾಲ್ಗೊಳ್ಳಲಿದ್ದು ಇದು ಅತ್ಯಂತ ಪ್ರಭಾವಶಾಲಿಯಾದ ಮೇಳವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ತಲ್ಲೀನತೆಯ ಭವಿಷ್ಯಅನುಭವಿಸಿ. ಅನ್ವೇಷಿಸುವಿಕೆಯ ತತ್ವದಡಿ ಕ್ರಿಯಾಶೀಲತೆ ಮತ್ತು ತಂತ್ರಜ್ಞಾನದ ಎಲ್ಲೆಗಳನ್ನು ವಿಸ್ತರಿಸುವಲ್ಲಿನ ಸಮ್ಮೇಳನದ ಬದ್ಧತೆಯನ್ನು ಎತ್ತಿಹಿಡಿಯುತ್ತದೆ. ಸಮ್ಮೇಳನದಲ್ಲಿ ಭಾಗವಹಿಸುವವರು ನೈಜಾವಧಿಯ ನಿರೂಪಣೆಯಲ್ಲಿನ ಪ್ರಗತಿಯಿಂದ ಭ್ರಾಮಕವಾದ ಹಾಗೂ ವೃದ್ಧಿಸಲಾದ ನೈಜತೆಯ ಪರಿವರ್ತಕ ಸಾಮರ್ಥ್ಯದವರೆಗೆ ತಲ್ಲೀನಾತ್ಮಕ ತಂತ್ರಜ್ಞಾನಗಳ ಶಕ್ತಿಯನ್ನು ಅನುಭವಿಸಲಿದ್ದಾರೆ. ಗೆಫೆಕ್ಸ್ 2025 ಕಥಾನಿರೂಪಣೆ ಮತ್ತು ಪ್ರತಿಕ್ರಿಯಾತ್ಮಕ ಅನುಭವದ ಭವಿಷ್ಯದ ಅನ್ವೇಷಣೆಗೆ ವೇದಿಕೆಯಾಗಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಕಾರ್ಯದರ್ಶಿಗಳಾದ ಡಾ. ಏಕರೂಪ್ ಕೌರ್, ಬೆಂಗಳೂರು ಗೆಫೆಕ್ಸ್ ಅಧ್ಯಕ್ಷ ಮತ್ತು ಅಬಯ್ ಅಧ್ಯಕ್ಷ ಬಿರೇನ್ ಘೋಷ್ ಮಾತನಾಡಿದರು.

ಡಿಜಿಟಲ್ ಮಾಧ್ಯಮ ಉದ್ಯಮಕ್ಕೆ ಶಕ್ತಿ ತುಂಬಲಿದೆ ಸರಕಾರ

ರಾಜ್ಯ ಸರಕಾರವು ಡಿಜಿಟಲ್ ಮಾಧ್ಯಮ ಉದ್ಯಮಕ್ಕೆ ಶಕ್ತಿಯನ್ನು ತುಂಬುವ ಕಾರ್ಯದಲ್ಲಿ ನಿರತವಾಗಿದೆ. ಕೌಶಲಗಳು ಮತ್ತು ಶಿಕ್ಷಣದಿಂದ ಸ್ಟುಡಿಯೋಗಳು, ಸ್ಟಾರ್ಟ್‌ಅಪ್‌ಗಳಿಂದ ಜಾಗತಿಕ ನಾಯಕರು ಹೀಗೆ ರಾಜ್ಯದ ನಾವೀನ್ಯದ ಪರಿಸರ ವ್ಯವಸ್ಥೆಗೆ ಸಾಮರ್ಥ್ಯವನ್ನು ತುಂಬುವ ವಿಶಾಲ ವ್ಯಾಪ್ತಿಯ ಚಟುವಟಿಕೆಗಳನ್ನು ಸರಕಾರವು ಪೋಷಿಸುತ್ತಿದೆ. ಈ ವಲಯವನ್ನು ಪರಿವರ್ತಿಸುವ ವಿಧಗಳಲ್ಲಿ ಮಾನವ ಸೃಷ್ಟಿಶೀಲತೆ ಮತ್ತು ಎಐ ಸಾಧನಗಳ ಮೇಳವನ್ನು ಪೋಷಿಸುವ ವೇಗವರ್ಧಕವಾಗಿ ನಾವು ಸರಕಾರದ ಪಾತ್ರವನ್ನು ಪರಿಭಾವಿಸುತ್ತೇವೆ, ಬೆಂಗಳೂರು ಗೆಫೆಕ್ಸ್ 2025ರಲ್ಲಿ ನಾವು ಭಾರತದ ಅತ್ಯುತ್ಕೃಷ್ಟ ಪ್ರತಿಭೆ ಮತ್ತು ಹೂಡಿಕೆ ಅಭ್ಯರ್ಥಿಗಳನ್ನು ಪ್ರಸ್ತುತಪಡಿಸುತ್ತಿದ್ದು ಇದರಿಂದಾಗಿ ಈ ಸಮ್ಮೇಳನವು ದೃಶ್ಯ ತಲ್ಲೀನತೆ, ಮತ್ತು ಕಥಾನಿರೂಪಣೆಯಲ್ಲಿ ಎವಿಜಿಸಿ-ಎಕ್ಸ್‌ಆರ್‌ನ ಮೂಲ ವೇದಿಕೆಯಾಗಿ ಹೊರಹೊಮ್ಮಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ಮಧ್ಯಾಹ್ನದ ಊಟದ ಬಳಿಕ ಶಾಸಕರಿಗೆ ವಿಧಾನಸೌಧದಲ್ಲೇ ರೆಸ್ಟ್
ಸುದ್ದಿ

ಕಲಾಪಕ್ಕೇಂತ ಹೋಗಿ, ಇಡೀ ದಿನ ಆ ರೆಸ್ಟ್ ರೂಮಲ್ಲೇ ಗೊರಕೆ ಹೊಡಿತಿದ್ರಲ್ರೀ... ಟಿವಿಯಲ್ಲಿ ಪದೇ ಪದೇ ತೋರಿಸ್ತಿದ್ರು...!!

15 ಜನರಿಗೆ ಅವಕಾಶ ಕೊಟ್ಟ ಕೋರ್ಟ್

ರಾಘವ ಚೈತನ್ಯ ಶಿವಲಿಂಗಕ್ಕೆ ಪೂಜೆ: ಹೈಕೋರ್ಟ್ ಅನುಮತಿ

ಕಲಬುರಗಿ: ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶ್ರೀ ರಾಘವ ಚೈತನ್ಯ ಶಿವಲಿಂಗಕ್ಕೆ ಪೂಜೆಸಲ್ಲಿಸುವ ವಿಚಾರವಾಗಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಮಹಾಶಿವರಾತ್ರಿ ಅಂಗವಾಗಿ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶಿವಲಿಂಗ ಪೂಜೆಗೆ ಅನುಮತಿ ನೀಡುವಂತೆ ಹಿಂದು ಸಂಘಟನೆಗಳು ಹೈಕೋರ್ಟ್ ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದವು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ಕಲಬುರಗಿ ಪೀಠ ತನ್ನ ತೀರ್ಪು ನೀಡಿದೆ.

ಬುಧವಾರ ಮಧ್ಯಾಹ್ನ 2 ರಿಂದ ಸಾಯಂಕಾಲ 6 ಗಂಟೆ ವರೆಗೆ ಲಾಡ್ಲೆ ಮಶಾಕ್ ದರ್ಗಾದಲ್ಲಿರುವ ರಾಘವ ಚೈತನ್ಯ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅನುಮತಿ ನೀಡಿ ಆದೇಶ ಹೊರಡಿಸಿದೆ. ಆಂದೋಲಾ ಸಿದ್ದಲಿಂಗ ಸ್ವಾಮೀಜಿ ಹೊರತುಪಡಿಸಿ 15 ಹಿಂದು ಮುಖಂಡರಿಗೆ ಮಾತ್ರ ಶಿವಲಿಂಗ ಪೂಜೆ ನೆರವೇರಿಸಲು ಅವಕಾಶ ನೀಡಿದೆ. ಕಳೆದ ಬಾರಿ ನ್ಯಾಯಾಲಯ ಎರಡು ಸಮುದಾಯದ 15 ಜನರಿಗೆ ಪೂಜೆ ಮತ್ತು ಪ್ರಾರ್ಥನೆಗೆ ಅವಕಾಶ ನೀಡಿತ್ತು. ಬಳಿಕ ಕೋಮು ಗಲಭೆ ಮರುಕಳಿಸದಂತೆ ಕಲಬುರಗಿ ಜಿಲ್ಲಾ ಪೊಲೀಸರು ವ್ಯಾಪಕ ಬಂದೋಬಸ್ತ್ ಕೈಗೊಂಡಿದ್ದರು.

ಫೆ. 28 ರಿಂದ ಮಾ.2 ರವರೆಗೆ ಉತ್ಸವ ಆಯೋಜನೆ | ಸಿಎಂ ಸಿದ್ದರಾಮಯ್ಯ ಉದ್ಘಾಟನೆ

ಹಂಪಿ ಉತ್ಸವ: ಅಂತಿಮ ಹಂತದ ಸಿದ್ಧತೆ

ಅನಂತ ಪದ್ಮನಾಭ ರಾವ್ ಹೊಸಪೇಟೆ

ಹಂಪಿ ಉತ್ಸವಕ್ಕಾಗಿ ವಿಜಯನಗರ ವಾಸ್ತುಶಿಲ್ಪ ಮಾದರಿಯಲ್ಲಿ ಅದ್ದೂರಿಯಾಗಿ ನಿರ್ಮಾಣಗೊಳ್ಳುತ್ತಿರುವ ಪ್ರಾಚೀನ ಸ್ಮಾರಕಗಳುಳ್ಳ ಪ್ರಧಾನ ವೇದಿಕೆ.

ವಿಶ್ವವಿಖ್ಯಾತ ಹಂಪಿ ಗತವೈಭವವನ್ನು ನೆನಪಿಸುವ ಹಂಪಿ ಉತ್ಸವಕ್ಕೆ ಸಿದ್ಧತೆ ಕಾರ್ಯ ಭರದಿಂದ ಸಾಗಿದೆ. ಉತ್ಸವ ನಿಮಿತ್ತ ಐದು ವೇದಿಕೆಗಳ ನಿರ್ಮಾಣ ಕಾರ್ಯ ಈಗಾಗಲೇ ಭರದಿಂದ ಸಾಗಿದೆ. ಈ ಬಾರಿ ಹಂಪಿ ಉತ್ಸವದಲ್ಲಿ ಖ್ಯಾತ ಕಲಾವಿದರು ಸೇರಿದಂತೆ ಸ್ಥಳೀಯ ಕಲಾವಿದರಿಗೂ ವೇದಿಕೆ ಕಲ್ಪಿಸಲಾಗುತ್ತಿದೆ.

ಹಂಪಿ ಉತ್ಸವ ಫೆ.28, ಮಾ.2ರವರೆಗೆ 3 ದಿನಗಳ ಕಾಲ ನಡೆಯಲಿದೆ. ಫೆ. 28ರಂದು ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮ ಯ್ಯ ಅವರು ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ರಿದಂತೆ ಶಾಸಕರು ಉತ್ಸವದಲ್ಲಿ ಭಾಗಿಯಾಗಲಿದ್ದಾರೆ. ಶಾಸಕ ಎಚ್. ಆರ್. ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಅತ್ಯಾಕರ್ಷಕ ಪ್ರಧಾನ ವೇದಿಕೆ: ಬೆಂಗಳೂರಿನ ಉಡುಪಾಸ್ ಸಂಸ್ಥೆ ಹಾಗೂ ವಿಜಯನಗರ ಜಿಲ್ಲಾಡಳಿತ ವಿಜಯನಗರ ವಾಸ್ತುಶಿಲ್ಪ ಮಾದರಿಯಲ್ಲಿ ಹಂಪಿ ಸ್ಮಾರಕಗಳ ಗುಚ್ಛವನ್ನು ಬಳಸಿಕೊಂಡು ಅತ್ಯಾಕರ್ಷಕ ವೇದಿಕೆ ನಿರ್ಮಾಣ ಮಾಡುತ್ತಿವೆ. ವಿಜಯನಗರ ವಾಸ್ತುಶಿಲ್ಪ ರಚನೆಯಲ್ಲಿ ವಿಜಯವಿಠಲ ದೇವಾಲಯದ ಸಪ್ತಸ್ವರ ಕಂಬಗಳು, ಕುದುರೆಗೊಂಬೆ ಮಂಟಪದ ಕಂಬಗಳನ್ನು ಬಳಸಿಕೊಂಡು ಆಕರ್ಷಕ ಮಂಟಪ ನಿರ್ಮಿಸಲಾಗಿದೆ. ಈ ಮಂಟಪದ ಮೇಲೆ ಕಮಲ ಮಹಲ್ ಸೃಜನೆ ಮಾಡಲಾಗುತ್ತಿದೆ. ಜತೆಗೆ ವಿಜಯನಗರ ಸಾಮ್ರಾಜ್ಯದ ರಾಜಲಾಂಛನ ವರಾಹ ಕೆತ್ತನೆ ಮೂಡಿಬರಲಿದೆ. ಮಧ್ಯದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಸ್ಮಾರಕದ ಅಕ್ಕಪಕ್ಕ ರಾಣಿ ಸ್ನಾನಗೃಹ ಸೃಜಿಸಲಾಗುತ್ತಿದೆ. ರಾಣಿ ಸ್ನಾನಗೃಹದ ಮೇಲೆ ವಿರೂಪಾಕ್ಷೇಶ್ವರ ದೇವಾಲಯದ ರಾಯಗೋಪುರ ನಿರ್ಮಿಸಲಾಗುತ್ತಿದೆ.

ಆಕರ್ಷಕ ಲೈಟಿಂಗ್ ವ್ಯವಸ್ಥೆ: 120 ಅಡಿ ಅಗಲ 80 ಉದ್ದ ಅಳತೆಯಲ್ಲಿ ಪ್ರಧಾನ ವೇದಿಕೆ ನಿರ್ಮಿಸಲಾಗುತ್ತಿದೆ. ಜತೆಗೆ ಆಕರ್ಷಕ ಲೈಟಿಂಗ್ ವ್ಯವಸ್ಥೆ ಕೂಡ ಮಾಡಲಾತ್ತಿದೆ. ಎಲ್‌ಇಡಿ ಪರದೆ ಕೂಡ ಅಳವಡಿಕೆ ಮಾಡಲಾಗುತ್ತಿದ್ದು, ವೇದಿಕೆ ಮುಂಭಾಗದಲ್ಲಿ 70 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ. ವಿಐಪಿ ಹಾಗೂ ವಿವಿಐಪಿ ಆಸನಗಳನ್ನು ಕೂಡ ವ್ಯವಸ್ಥೆ ಮಾಡಲಾಗುತ್ತಿದ್ದು, ಕಲಾವಿದರು, ಗಣ್ಯಾತಿಗಣ್ಯರಿಗಾಗಿ ಗ್ರೀನ್ ರೂಂ ನಿರ್ಮಾಣ ಮಾಡಲಾಗುತ್ತಿದೆ. ಹಂಪಿ ಉತ್ಸವದಲ್ಲಿ ಈ ಬಾರಿ ಭಾರಿ ಗಾತ್ರದಲ್ಲಿ ಜರ್ಮನ್ ಟೆಂಟ್ ನಿರ್ಮಾಣ ಮಾಡಲಾಗುತ್ತಿದೆ. ಇದರಲ್ಲಿ ಗಣ್ಯಾತಿಗಣ್ಯರು, ಕಲಾವಿದರಿಗಾಗಿ ವ್ಯವಸ್ಥೆ ಮಾಡಲಾಗುತ್ತಿದೆ. ಇದು ಸಂಪೂರ್ಣ ಹವಾನಿಯಂತ್ರಿತ ಕೊಠಡಿ ಆಗಿರಲಿದೆ.

ಫೆ.28 ರ ಸಂಜೆ 6 ಗಂಟೆಗೆ ಗಾಯತ್ರಿ ಪೀಠದ ಬಳಿ ನಿರ್ಮಿಸಲಾಗಿರುವ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಹಂಪಿ ಉತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ವೇದಿಕೆಗಳ ಕಾರ್ಯ ಭರದಿಂದ ಸಾಗಿದೆ. ಫೆ.26ರ ಸಂಜೆ 6 ಗಂಟೆಗೆ ಹಂಪಿ ವಿರೂಪಾಕ್ಷ ದೇವಸ್ಥಾನದ ಹತ್ತಿರದ ತುಂಗಭದ್ರಾ ನದಿತಟದಲ್ಲಿ ತುಂಗಾರತಿ ನಡೆಯಲಿದೆ. ಹಲವು ಖ್ಯಾತ ಕಲಾವಿದರು ಭಾಗವಹಿಸಲಿದ್ದಾರೆ.

-ಎಂ.ಎಸ್. ದಿವಾಕರ್, ವಿಜಯನಗರ ಜಿಲ್ಲಾಧಿಕಾರಿ

ಕಲ್ಲಿನತೇರು ಮಂಟಪದ ಆಕರ್ಷಣೆ

ವೇದಿಕೆ ಅಡಿಪಾಯದಲ್ಲಿ ಹಜಾರ ರಾಮ ದೇವಾಲಯ, ಮಹಾನವಮಿ ದಿಬ್ಬದ ಮಾದರಿಯಲ್ಲಿ ಆನೆ, ಕುದುರೆಗಳನ್ನು ಕೆತ್ತನೆ ಮಾಡುವ ಮೂಲಕ ಆಕರ್ಷಕ ಮಂಟಪ ಸೃಜಿಸಲಾಗುತ್ತಿದೆ. ಈ ವೇದಿಕೆಯ ಎರಡು ಬದಿಯಲ್ಲಿ ಸಾಲು ಮಂಟಪದ ಕಂಬಗಳನ್ನು ಬಳಸಿ ಆಕರ್ಷಕ ಮಂಟಪ ಸೃಜಿಸಲಾಗುತ್ತಿದೆ. ಅವುಗಳ ಮೇಲೆ ಅಂಜನಾದ್ರಿಯ ಅಂಜನೇಯ ಮತ್ತು ಸಾಸಿವೆಕಾಳು ಗಣಪತಿಯನ್ನು ಸೃಜಿಸಲಾಗುತ್ತಿದೆ. ಇನ್ನೂ ವೇದಿಕೆಯ ಎರಡೂ ಬದಿಯಲ್ಲಿ ವಿಜಯವಿಠಲ ದೇವಾಲಯದ ಆವರಣದ ಕಲ್ಲಿನ ತೇರು ಮಂಟಪ ಸೃಜಿಸಿ ಇದರಲ್ಲಿ ಎಲ್‌ಇಡಿಗೆ ವ್ಯವಸ್ಥೆ ಮಾಡುವ ಕಾರ್ಯವೂ ನಡೆಯುತ್ತಿದೆ.

ವಿಶ್ವವಾಣಿ

ಸಂಪಾದಕೀಯ

ಇನ್ನೂ ತೀರಿಲ್ಲವೇ ರಕ್ತದಾಹ?

ಐರೋಪ್ಯ ದೇಶಗಳ 'ನ್ಯಾಟೊ' ಒಕ್ಕೂಟವನ್ನು ಸೇರಿಕೊಳ್ಳಲು ಉಕ್ರೇನ್ ದೇಶವು ತವಕಿಸಿದ್ದನ್ನೇ ಮುಂದುಮಾಡಿಕೊಂಡು ಅದರ ವಿರುದ್ಧ ರಷ್ಯಾ ತೊಡೆತಟ್ಟಿದ್ದು ಈಗಾಗಲೇ ಜಗಜ್ಜಾಹೀರು. ರಷ್ಯಾ ಅಧ್ಯಕ್ಷ ಪುಟಿನ್ ಅವರು ಈ ಕುಂಟುನೆಪವಿಟ್ಟುಕೊಂಡು ಉಕ್ರೇನ್‌ನ ಮೇಲೆ ಶುರುಹಚ್ಚಿಕೊಂಡ ಯುದ್ಧಕ್ಕೆ ಮೊನ್ನೆಗೆ 3 ವರ್ಷಗಳು ತುಂಬಿವೆ. ಇಷ್ಟಾಗಿಯೂ ಯುದ್ಧವನ್ನು ನಿಲ್ಲಿಸಲು ಉಭಯ ದೇಶಗಳೂ ಮನಸ್ಸು ಮಾಡದಿರುವುದು ವಿಷಾದನೀಯ. ಈ ಸುದೀರ್ಘ ಸಂಘರ್ಷದಲ್ಲಿ ಉಕ್ರೇನ್ ದೇಶದ ಐದನೇ ಒಂದರಷ್ಟು ಭಾಗವನ್ನು ರಷ್ಯಾ ತನ್ನ ತೆಕ್ಕೆಗೆ ತೆಗೆದುಕೊಂಡಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಎರಡೂ ಬಣಗಳಲ್ಲಿ ಆಗಿರುವ ಗಣನೀಯ ಪ್ರಮಾಣದ ಸಾವು-ನೋವುಗಳು ಯುದ್ಧದ ಭೀಕರತೆಯನ್ನು ಸಾರಿ ಹೇಳುವಂತಿವೆ. ಇಷ್ಟಾಗಿಯೂ ಯುದ್ಧವನ್ನು ಇನ್ನೂ ಮುಂದುವರಿಸಿಕೊಂಡು ಹೋಗುವ ರಣೋತ್ಸಾಹವನ್ನು ಈ ದೇಶಗಳು ತೋರುತ್ತಿರುವುದೇಕೆ? ರಕ್ತದ ದಾಹ ಇನ್ನೂ ತೀರಿಲ್ಲವೇ? ಎಂಬುದು ಉತ್ತರ ಸಿಗದ ಪ್ರಶ್ನೆಗಳು. ಭೀಕರ ಯುದ್ಧವೊಂದರ ದುಷ್ಪರಿಣಾಮವು ಕೆಲವೇ ದಿನಗಳಲ್ಲಿ ತಗ್ಗಿಬಿಡುವುದಿಲ್ಲ, ವರ್ಷಗಳವರೆಗೆ ಅದು ಕಾಡುತ್ತಲೇ ಇರುತ್ತದೆ ಎಂಬುದಕ್ಕೆ ಜಪಾನ್ ದೇಶವೇ ಸಾಕ್ಷಿ. ಇದಕ್ಕೆ ಕಾರಣವಾಗಿದ್ದು 2ನೇ ಮಹಾ ಯುದ್ಧ. 1945ರ ಆಗಸ್ಟ್ 6 ಮತ್ತು 9ರಂದು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಮೆರಿಕವು ಅಣುಬಾಂಬ್ ದಾಳಿಯನ್ನು ಮಾಡಿದಾಗ ಒಟ್ಟಾರೆಯಾಗಿ ಸತ್ತವರ ಸಂಖ್ಯೆ ಹತ್ತತ್ತಿರ ಎರಡೂವರೆ ಲಕ್ಷದಷ್ಟು. ಮಾತ್ರವಲ್ಲದೆ, ತರುವಾಯದಲ್ಲಿ ಹುಟ್ಟಿದ ಗಣನೀಯ ಸಂಖ್ಯೆಯ ಮಕ್ಕಳಲ್ಲಿ ಅಂಗವೈಕಲ್ಯ ಕಾಣುವಂಥ ಪರಿಸ್ಥಿತಿಗೂ ಇಲ್ಲಿನವರು ಸಾಕ್ಷಿಯಾಗಬೇಕಾಯಿತು. ಯುದ್ಧದ ಪರಿಣಾಮ ಅದೆಷ್ಟು ಘೋರವಾಗಿರುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ. ಇಂಥದೊಂದು ಭೀಕರ ಇತಿಹಾಸದಿಂದ ಕೆಲವರು ಪಾಠವನ್ನೇ ಕಲಿಯುವುದಿಲ್ಲ ಎಂಬುದಕ್ಕೆ ರಷ್ಯಾ ಮತ್ತು ಉಕ್ರೇನ್ ನಡುವೆ ಈಗಲೂ ಮುಂದುವರಿದಿರುವ ಯುದ್ಧವೇ ಸಾಕ್ಷಿ. ಭೂರಾಜಕೀಯದ ಹಮ್ಮು ಮತ್ತು ಅಮಲು ಏರಿದವರಿಗೆ ಕೆಲವೊಂದು ಸೂಕ್ಷ್ಮಗಳು ಮತ್ತು ಸಂಕಟಗಳು ಅರ್ಥವಾಗುವುದಿಲ್ಲ ಎಂಬುದನ್ನೂ ಈ ಸಂಘರ್ಷ

ಸೊಂಪಾದಕೀಯ

ಫಿಟ್ ಇಂಡಿಯಾ ಚಳವಳಿ

ನಮ್ಮ ಪ್ರಧಾನಿ ಮೋದಿ ಆಗಾಗ ಇಂಟರೆಸ್ಟಿಂಗ್ ಹೆಸರುಗಳಿರುವ ಯೋಜನೆಗಳನ್ನು ಘೋಷಣೆ ಮಾಡೋದು ಕಾಮನ್. ಹಾಗಂತ ಇವು ಜನಗಳ ಅಭಿವೃದ್ಧಿ ಮಾಡುವಂಥ ಸರಕಾರಿ ಯೋಜನೆಗಳಲ್ಲ. ಬದಲಾಗಿ ನಾಮ್-ಕೆ-ವಾಸ್ತೆ ಮಾಡುವಂಥ ಕೆಲಸಗಳು. ಅದರ ಭಾಗವಾಗಿ ಈಗ 'ಫಿಟ್ ಇಂಡಿಯಾ' ಅನ್ನೋ ಮಾತು ಶುರುವಾಗಿದೆ. ಭಾರತಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ಬೇಕಾದಾಗ ನಮ್ಮ ಹೋರಾಟಗಾರರು 'ಕ್ವಿಟ್ ಇಂಡಿಯಾ' ಚಳವಳಿ ಮಾಡಿದ್ದರು. ಈಗ ಮೋದಿ 'ಫಿಟ್ ಇಂಡಿಯಾ' ಮಂತ್ರ ಜಪಿಸುತ್ತಿದ್ದಾರೆ. ಯುವಜನಾಂಗ ಬೊಜ್ಜಿನ ಸಮಸ್ಯೆಯಿಂದ ನರಳುತ್ತಿದೆ. ಹಾಗಾಗಿ ಫಿಟ್‌ನೆಸ್ ಮುಖ್ಯ ಅಂತಿದ್ದಾರೆ ಮೋದಿ. ಹೇಳಿ-ಕೇಳಿ ಪ್ರಪಂಚದಲ್ಲಿ ಬೊಜ್ಜು ಜಾಸ್ತಿ ಇರೋ ದೇಶಗಳಲ್ಲಿ ಭಾರತಕ್ಕೆ ಮೂರನೇ ಸ್ಥಾನ ಅಂತೆ. ಬೊಜ್ಜು ಬಂದರೆ ಮಧುಮೇಹ, ಹೃದ್ರೋಗದಂಥ ಹಲವು ಕಾಯಿಲೆಗಳಿಗೆ ಅದು ದಾರಿ ಮಾಡಿಕೊಡುತ್ತದೆ. ಅದನ್ನು ನಿವಾರಿಸುವ ಇರಾದೆ ಮೋದಿ ಅವರದ್ದು. ಆದರೆ ಮೋದಿ ಬರೀ 'ಫಿಟ್ ಇಂಡಿಯಾ' ಅಭಿಯಾನ ಘೋಷಣೆ ಮಾಡಿ ಸುಮ್ಮನೇ ಆಗಿಲ್ಲ. ಇದಕ್ಕೆ ಹಲವಾರು ಭಾರತೀಯ ಸೆಲೆಬ್ರಿಟಿಗಳನ್ನು ನಾಮನಿರ್ದೇಶನ ಮಾಡಿದ್ದಾರೆ. ಅದರಲ್ಲಿ ಒಮರ್ ಅಬ್ದುಲ್ಲಾ, ಆನಂದ್ ಮಹೀಂದ್ರ, ಮನು ಭಾಕರ್, ಮೋಹನ್ ಲಾಲ್, ಮಾಧವನ್, ಸುಧಾ ಮೂರ್ತಿ, ಶ್ರೇಯಾ ಘೋಷಾಲ್ ಮುಂತಾದ ಘಟಾನುಘಟಿಗಳು ಇದ್ದಾರೆ. ಇವರಲ್ಲಿ ಒಬ್ಬೊಬ್ಬರೂ ಮೋದಿ ಅವರಂತೆ ಮತ್ತೆ ಹತ್ತು ಜನರನ್ನು ನಾಮನಿರ್ದೇಶನ ಮಾಡಿ ಈ ಅಭಿಯಾನವನ್ನು ಮುಂದುವರಿಸಬೇಕಂತೆ. ಇದನ್ನು ಕೇಳಿದ್ರೆ, ಮೋದಿ ಏನು 'ಫಿಟ್ ಇಂಡಿಯಾ' ಅಭಿಯಾನ ಮಾಡ್ತಾ ಇದ್ದಾರಾ ಅಲ್ಲ 'ನೆಟ್ವರ್ಕ್ ಮಾರ್ಕೆಟಿಂಗ್' ಮಾಡ್ತಾ ಇದ್ದಾರಾ ಅನ್ನೋ ಅನುಮಾನ ಬಂದು 'ಎಂಥ ಬೊಜ್ಜ ಇದು?' ಅಂತ ಕೇಳ್ತಾ ಇದ್ದಾರೆ ಜನ. ಇನ್ನು ಈ 'ಫಿಟ್ ಇಂಡಿಯಾ' ಅಭಿಯಾನದ ಭಾಗವೇನೋ ಎನ್ನುವಂತೆ ಶೇ.10ರಷ್ಟು ಅಡುಗೆ ಎಣ್ಣೆ ಬಳಕೆ ಕಮ್ಮಿ ಮಾಡಿ ಅಂತಲೂ ದೇಶದ ಜನತೆಗೆ ಕರೆ ಕೊಟ್ಟಿದ್ದಾರೆ ಮೋದಿ. ಆದರೆ ಇದಕ್ಕೂ ಮುನ್ನ ತೆಂಗಿನ ಎಣ್ಣೆ ಲೀಟರ್‌ಗೆ 300 ರುಪಾಯಿ ಆಗಿರೋದು, ಸನ್ ಫ್ಲವರ್ ಎಣ್ಣೆ 10ರಿಂದ 20 ರುಪಾಯಿ ಜಾಸ್ತಿ ಆಗಿರೋ ಸುದ್ದಿ ಕೇಳಿದ್ರೆ, ಮೋದಿ ಅಭಿಯಾನ ನಡೆಸ್ತಾ ಇದ್ದಾರಾ ಇಲ್ಲ ಜನರ ಕಿವಿಗೆ ಫ್ಲವರ್ ಮುಡಿಸ್ತಾ ಇದ್ದಾರಾ ಅಂತ ಅನುಮಾನ ಬಂದರೆ ಅಚ್ಚರಿಯೇನಿಲ್ಲ.

ಸಂಪಾದಕರ ಸದ್ಯಶೋಧನೆ

ಚಿಕ್ಕ ಮನೆ, ದೊಡ್ಡ ಮನಸ್ಸು

ಜುನಿಚಿರೋ ಟಾನಿಜಾಕಿ (1886 -1965) ಎಂಬ ಜಪಾನಿನ ಕಾದಂಬರಿಕಾರ 'The Maids' ಎಂಬ ಕೃತಿಯಲ್ಲಿ 20ನೇ ಶತಮಾನದ ಜಪಾನಿನ ಜನಜೀವನವನ್ನು ಸ್ವಾರಸ್ಯವಾಗಿ ಚಿತ್ರಿಸಿದ್ದಾನೆ. ಆ ದಿನಗಳಲ್ಲಿ ಟೋಕಿಯೋ ನಗರದಲ್ಲಿ 10 ಅಡಿ ಅಗಲ ಮತ್ತು 7 ಅಡಿ ಉದ್ದದ ಅಂದರೆ 70 ಚದರಡಿಯ ಒಂದು ಸಣ್ಣ ಕೋಣೆಯಲ್ಲಿ ಏಳಕ್ಕಿಂತ ಹೆಚ್ಚು ಕೆಲಸದಾಳುಗಳು ಅಥವಾ ಸೇವಕಿಯರು ಸಂತೋಷದಿಂದ ಜೀವಿಸುತ್ತಿದ್ದರಂತೆ (ಅದೇ ಆ ದಿನಗಳಲ್ಲಿ ಅಮೆರಿಕದ ರಾಜಧಾನಿ ವಾಷಿಂಗ್ಟನ್‌ನಲ್ಲಿ 300 ಚದರಡಿ ವಿಶಾಲ ಕೋಣೆಯಲ್ಲಿ ಒಬ್ಬಳೇ ಸೇವಕಿ ವಾಸಿಸುತ್ತಿದ್ದಳಂತೆ). ಜಪಾನಿ ಸೇವಕಿಯರ ಪೈಕಿ ಯಾರೂ ತಾವು ಒತ್ತಡದ ಅಥವಾ ಕಮ್ಮಿ ಜಾಗದ ಕೋಣೆಯಲ್ಲಿ ವಾಸಿಸುತ್ತಿದ್ದೇವೆ, ಇದರಿಂದ ತಮ್ಮ ಖಾಸಗಿತನಕ್ಕೆ ಧಕ್ಕೆಯಾಗುತ್ತಿದೆ ಎಂದು ಅಂದುಕೊಳ್ಳುತ್ತಿರಲಿಲ್ಲವಂತೆ. ಆ ಕಿರುಕೋಣೆ ಅವರ ನೆಮ್ಮದಿಗೆ ಯಾವ ರೀತಿಯಲ್ಲೂ ಸಂಚಕಾರ ತಂದಿರಲಿಲ್ಲ. 1937ರ ಹೊತ್ತಿಗೆ, ಜಪಾನ್ ಹೆಚ್ಚು ಆಧುನಿಕಗೊಳ್ಳುತ್ತಿದ್ದರೂ, ಬಹುತೇಕ ನಾಗರಿಕರು ತೀರಾ ಸೀಮಿತವಾದ ಜಾಗದಲ್ಲಿ ಜೀವನ ನಡೆಸುತ್ತಿದ್ದರು. ವಿಶೇಷವಾಗಿ ಟೋಕಿಯೊ, ಒಸಾಕಾದಂಥ ದೊಡ್ಡ ನಗರಗಳಲ್ಲಿ, ಜನಸಂಖ್ಯೆ ಹೆಚ್ಚಿದಂತೆ ಮನೆಗಳ ಗಾತ್ರ ಕುಗ್ಗತೊಡಗಿತು. ಜಪಾನಿಯರಿಗೆ ದೊಡ್ಡ ಮನೆ ಬೇಡವೇ ಬೇಡ. 10 ಅಡಿ ಅಗಲ-15 ಅಡಿ ಉದ್ದದ ಜಾಗ ಸಿಕ್ಕರೆ ಅವರು ಸಿಂಗಲ್ ಬೆಡ್‌ರೂಮ್ ಮನೆಯನ್ನು ಸೊಗಸಾಗಿ ನಿರ್ಮಿಸಬಲ್ಲರು. ಅಚ್ಚರಿಯೆನಿಸಬಹುದು, ಟೋಕಿಯೋದಲ್ಲಿ ಕೇವಲ 914 ಚದರಡಿ ಜಾಗದಲ್ಲಿ 21 ಮಹಡಿ ಕಟ್ಟಡ ನಿರ್ಮಿಸಿದ್ದಾರೆ! 10 ಅಡಿ ಅಗಲ- 20 ಅಡಿ ಉದ್ದದ ನಿವೇಶನ ಸಿಕ್ಕರೆ ಜಪಾನಿಯರು ಆರಾಮಾಗಿ 2-3 ಬೆಡ್ ರೂಮುಗಳಿರುವ ಮನೆಯನ್ನು ನಿರ್ಮಿಸಬಲ್ಲರು. ಅವರಿಗೆ ಚಿಕ್ಕ ಜಾಗದಲ್ಲಿ ಚೊಕ್ಕ ಸಂಸಾರ ಮಾಡುವುದು ಕರಗತ. ಅಷ್ಟೇ ಅಲ್ಲ, ಅದನ್ನು ಅವರು ಇಷ್ಟಪಡುತ್ತಾರೆ ಕೂಡ. ಜಪಾನಿಯರ ಮನೆಗಳಲ್ಲಿ ಅನಗತ್ಯವಾದ ಯಾವ ವಸ್ತುವೂ ಇರುವುದಿಲ್ಲ. ಅವರು ಒಂದು ವಸ್ತುವನ್ನು ಒಂದು ಉದ್ದೇಶಕ್ಕಾಗಿ ಮಾತ್ರ ಬಳಸುವುದಿಲ್ಲ. ಓದಲು, ಊಟ ಮಾಡಲು, ಮಲಗಲು, ತರಕಾರಿ ಕತ್ತರಿಸಲು... ಹೀಗೆ ಒಂದು ಟೇಬಲ್ ಹತ್ತಾರು ಬೇರೆ ಬೇರೆ ಉದ್ದೇಶಗಳಿಗೆ ಬಳಕೆಯಾಗುತ್ತದೆ. ಜಪಾನಿಯರಿಗೆ ಮನೆಯೆಂದರೆ ದೊಡ್ಡ ಸಭಾಂಗಣ ಅಲ್ಲ, ಆದರೆ ಚಿಕ್ಕ ಕೊಠಡಿಗಳ ಸಮೂಹ. ಅಲ್ಲಿನ ಜನ ಸಾಮಾನ್ಯವಾಗಿ ಒಂದು ಕೋಣೆಯನ್ನು ವಿವಿಧ ಉದ್ದೇಶಗಳಿಗೆ ಬಳಸುತ್ತಾರೆ. ಕೊಠಡಿಗಳನ್ನು ಬೇರ್ಪಡಿಸಲು ತಾತಾಮಿ ಚಾಪೆಗಳು ಮತ್ತು ಫ್ಯೂಸೂಮಾ ಎಂಬ ಮಡಚಬಹುದಾದ ಬಾಗಿಲು ಅಥವಾ ಪೀಠೋಪಕರಣಗಳನ್ನು ಬಳಸುತ್ತಾರೆ. ಗಂಡ-ಹೆಂಡತಿ ಮತ್ತು ಇಬ್ಬರು ಮಕ್ಕಳಿರುವ ಪೂರ್ತಿ ಕುಟುಂಬಕ್ಕೆ, 25 ಚದರಡಿ ಅಥವಾ ಅದಕ್ಕಿಂತ ಸ್ವಲ್ಪ ದೊಡ್ಡ ಸ್ಥಳ ಸಾಕು. ಹಗಲು ಹೊತ್ತಿನಲ್ಲಿ ಹಾಸಿಗೆಗಳನ್ನು ಮಡಚಿಟ್ಟು, ಅದೇ ಸ್ಥಳವನ್ನು ಊಟ ಮಾಡಲು, ಮಲಗಲು ಅಥವಾ ಇತರ ಚಟುವಟಿಕೆಗಳಿಗೆ ಬಳಸಬಲ್ಲರು. ಐವತ್ತು ವರ್ಷಗಳ ಹಿಂದಿನವರೆಗೂ ಒಂದೇ ಬಾತ್‌ರೂಮನ್ನು 10 ಮನೆಯವರು ಹಂಚಿಕೊಳ್ಳುವ ಪದ್ಧತಿಯಿತ್ತು. ಜಪಾನಿಯರು ಯಾವುದೇ ವಸ್ತುವನ್ನು ಮರುಬಳಕೆ ಮಾಡುವುದರಲ್ಲೂ ನಿಸ್ಸೀಮರು. ಕಡಿಮೆ ಜಾಗದಲ್ಲಿ ಹೆಚ್ಚು ಪ್ರಯೋಜನ ಪಡೆಯುವುದು ಹೇಗೆಂಬುದು ಅವರಿಗೆ ಗೊತ್ತು. ಜಪಾನಿನ ಮನೆಗಳಲ್ಲಿ ರೂಮುಗಳು ಖಾಲಿ ಖಾಲಿಯಾಗಿದ್ದರೆ ಅದು ಲಕ್ಸುರಿಯ ಅಥವಾ ಅಲಂಕಾರಿಕೆಯ ಸಂಕೇತ. ಅತಿ ಕಡಿಮೆ ಸಾಮಾನುಗಳಿರುವ ಮನೆ ಕಲಾತ್ಮಕವಾಗಿ ಸುಂದರ. ಅಲ್ಲಿನ ಸಾಮಾನ್ಯ ಕಿರಾಣಿ ಅಂಗಡಿಗಳು ಹೆಚ್ಚೆಂದರೆ ಒಂದು ನೂರು ಚದರಡಿ ವಿಸ್ತೀರ್ಣವುಳ್ಳದ್ದಿರಬಹುದು. ಆ ಜಾಗದಲ್ಲಿ ಎರಡೂವರೆ-ಮೂರು ಸಾವಿರ ಐಟಮ್ಮುಗಳನ್ನು ಇಡಬಲ್ಲರು. ಖ್ಯಾತ ವ್ಯಂಗ್ಯಚಿತ್ರಕಾರನೊಬ್ಬ ಜಪಾನಿನ ಮನೆಗಳನ್ನು ಒಂದೇ ವಾಕ್ಯದಲ್ಲಿ ಹೀಗೆ ಬಣ್ಣಿಸಿದ್ದ- When I have guests over, we play a fun game called Find the Chair'. 'ನಮ್ಮ ಮನೆಯಲ್ಲಿರುವ ಯಾವುದೇ ವಸ್ತುಗಳಿಗೆ ಕೈ-ಕಾಲುಗಳನ್ನು ತಾಕಿಸದೇ, ಯಾವ ವಸ್ತುಗಳನ್ನೂ ಬೀಳಿಸದೇ ಅಥವಾ ಅವನ್ನು ಒಡೆಯದೇ ಮಾಡುವ ಕ್ರಿಯೆಗೆ ಯೋಗ ಅಂತಾರೆ' ಎಂದು ಜಪಾನಿ ಲೇಖಕನೊಬ್ಬ ಬರೆದಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಂದ ಹಾಗೆ ಅವರ ಮನೆ ಚಿಕ್ಕದಿರಬಹುದು, ಮನಸ್ಸು ಅಥವಾ ಯೋಚನೆ ಮಾತ್ರ ದೊಡ್ಡದು.

ಬಣ್ಣ ಬಣ್ಣದ, ರುಚಿ ರುಚಿಯಾದ, ಸುವಾಸನಾಭರಿತ ಅಕ್ಷರಗಳು

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ನನ್ನ ಬಿ.ಎಸ್ಸಿ ಪದವಿಯ ದಿನಗಳು. ನನ್ನ ಸಂಪರ್ಕಕ್ಕೆ ಬರುವ ಎಲ್ಲ ರೀತಿಯ ಪುಸ್ತಕಗಳನ್ನು ಓದುತ್ತಿದ್ದೆ. ಒಂದು ಪುಸ್ತಕವು ಓದಲು ಅರ್ಹವೇ, ಅದರಿಂದ ನನಗೇನಾದರೂ ಪ್ರಯೋಜನವಾಗಬಹುದೇ ಎನ್ನುವುದನ್ನು ತಿಳಿಯಲು ಕನಿಷ್ಠ ಮೊದಲ 30 ಪುಟಗಳನ್ನು ಓದುತ್ತಿದ್ದೆ. ನನಗೆ ಉಪಯುಕ್ತವಲ್ಲ ಅಥವಾ ವಿಷಯವು ನನ್ನ ತಿಳಿವಿಗೆ ಮೀರಿದ್ದು ಎಂದೆನಿಸಿದಾಗ ಆ ಪುಸ್ತಕವನ್ನು ತೆಗೆದು ಪಕ್ಕಕ್ಕೆ ಇಡುತ್ತಿದ್ದೆ. ಹೀಗೆ ನಾನು 'ತಂತ್ರಶಾಸ್ತ್ರ'ಕ್ಕೆ ಸಂಬಂಧಿಸಿದ ಒಂದು ಪುಸ್ತಕವನ್ನು ಓದುತ್ತಿದ್ದೆ. ಅಲ್ಲಿ ಪ್ರತಿಯೊಂದು ಅಕ್ಷರಕ್ಕೂ ಒಂದೊಂದು ಬಣ್ಣವಿರುತ್ತದೆ. ಪ್ರತಿಯೊಂದು ಮಂತ್ರವನ್ನು ಪಠಿಸಿದಾಗ, ಆ ಅಕ್ಷರಗಳು ವಿವಿಧ ಬಣ್ಣಗಳನ್ನು ತಳೆದು ಕಣ್ಣ ಮುಂದೆ ಕುಣಿಯುತ್ತವೆ ಇತ್ಯಾದಿ ವಿವರಗಳಿದ್ದವು. ಅವುಗಳಲ್ಲಿ ಈಗಲೂ ನನ್ನ ನೆನಪಿನಲ್ಲಿರುವ ನುಡಿ 'ಓಂ'. ಓಂಕಾರವನ್ನು ಸರಿಯಾದ ವಿಧಾನದಲ್ಲಿ ನುಡಿದರೆ, ಅದು ಬಂಗಾರ ವರ್ಣದಲ್ಲಿ ಕಾಣಿಸಿಕೊಳ್ಳುತ್ತದೆ ಎನ್ನುವ ವರ್ಣನೆಯಿತ್ತು. ಇದನ್ನೆಲ್ಲ ಓದಿದಾಗ, ಇವೆಲ್ಲವೂ 'ಅವೈಜ್ಞಾನಿಕ' ಎಂದೆನಿಸಿತು. ಅದಕ್ಕೆ ಕಾರಣವಿದೆ. ಶಬ್ದ ಎನ್ನುವುದು ಕಂಪನ. ಕಂಪನವು ಸಾಗಲು ಒಂದು ಮಾಧ್ಯಮವು ಬೇಕು. ನಾವು ಮಾತನಾಡುವಾಗ ಶಬ್ದವು ಗಾಳಿಯ ಮೂಲಕ ಸಾಗುತ್ತದೆ. ಇದರ ವ್ಯಾಪ್ತಿಯು 85 ಹರ್ಟ್ಜ್ ಇಂದ 8000 ಹರ್ಟ್ಜ್‌ವರೆಗೆ ವ್ಯಾಪಿಸಬಹುದು. ಸೂರ್ಯನಿಂದ ಬರುವ ಬೆಳಕು ಸಾಗಲು ಯಾವುದೇ ಮಾಧ್ಯಮವು ಬೇಕಿಲ್ಲ. ಇದನ್ನು ವಿದ್ಯುದಯಸ್ಕಾಂತ ರೋಹಿತ ರೂಪದ (ಎಲೆಕ್ಟ್ರೋಮ್ಯಾಗ್ನೆಟಿಕ್ ಸ್ಪೆಕ್ಟ್ರಮ್) ಸೀಮಿತ ಭಾಗ, ಅಂದರೆ 380 ಟೆರಾಹರ್ಟ್ಜ್‌ನಿಂದ 790 ಟೆರಾಹರ್ಟ್ಜ್ ನಡುವಿನ ಬೆಳಕನ್ನು ಅವುಗಳ ಆವರ್ತನವನ್ನಾಧರಿಸಿ ವಿವಿಧ ಬಣ್ಣಗಳಲ್ಲಿ ನೋಡಬಹುದು. ಉದಾಹರಣೆಗೆ 400-484 ಟೆರಾ ಹರ್ಟ್ಜ್ ನಡುವಿನ ಬೆಳಕು ಕೆಂಪಗೆ ಕಂಡರೆ 668-790 ಟೆರಾಹರ್ಟ್ಜ್ ಬೆಳಕು ನೇರಳೆ ಬಣ್ಣಕ್ಕೆ ಕಾಣುತ್ತದೆ. ವಾಸ್ತವದಲ್ಲಿ ಶಬ್ದ ಮತ್ತು ಬಣ್ಣಗಳ ನಡುವೆ ನೇರ ಸಂಬಂಧವೇ ಇಲ್ಲ ಎಂದು ಅನಿಸಿತು. ಈ ವಿಚಾರವನ್ನು ಅಂದೇ ನಾನು ಮರೆತುಬಿಟ್ಟೆ. ಆದರೆ ವೈದ್ಯಕೀಯ ಶಿಕ್ಷಣವನ್ನು ಸೇರಿದ ಮೇಲೆ, 'ಮಿಶ್ರ ಸಂವೇದನೆ' ಅಥವಾ 'ಸೈನಿಸ್ಥೀಸಿಯ' ಎಂಬ ಮನುಷ್ಯನ ಅನುಭವದ ಬಗ್ಗೆ ತಿಳಿಯುತ್ತಲೇ ಪೂರ್ಣವಾಗಿ ಗೊಂದಲದಲ್ಲಿ ಮುಳುಗಿದೆ. ನನಗೆ ಆದ ಗೊಂದಲವನ್ನು ಈಗ ನಿಮಗೆ ವರ್ಗಾಯಿಸುತ್ತಿದ್ದೇನೆ.

ನಾನು '5' ಎಂದು ಬರೆದ ಅಂಕಿಯನ್ನು ತಾವು ಓದುತ್ತಿದ್ದೀರಿ. ಈ 5 ಎಂಬ ಅಂಕೆಯ ಬಣ್ಣ ಯಾವುದು? ಕಪ್ಪು! ಕಪ್ಪೇ ಏಕೆಂದರೆ ಮುದ್ರಣದಲ್ಲಿ, ಕಾಗದದ ಬಿಳಿಯ ಹಿನ್ನೆಲೆಯಲ್ಲಿ ಕಪ್ಪು ಅಕ್ಷರಗಳು ಎದ್ದು ಕಾಣುತ್ತವೆ. ಈ 5 ಎಂಬ ಅಂಕಿಯು ಕಪ್ಪಗೆ ಕಾಣುವ ಬದಲು (ಕಪ್ಪು ಬಣ್ಣದಲ್ಲಿಯೇ ಅದನ್ನು ಮುದ್ರಿಸಿದ್ದಾರೆ) ಕೆಂಪು ಅಥವಾ ನೀಲಿ ಇಲ್ಲವೇ ಹಸಿರು ಬಣ್ಣದಲ್ಲಿ ಕಾಣಿಸಿದರೆ?!.. ಆಗ ನಿಮಗೇನು ಅನಿಸುತ್ತದೆ. ನನಗೆ ಹುಚ್ಚು ಹಿಡಿದಿರಬಹುದು ಎಂದು ಅನಿಸುತ್ತದೆಯಲ್ಲವೆ! ಹಾಗೆಯೇ ಅಕ್ಷರಗಳು ವಿವಿಧ ಬಣ್ಣಗಳನ್ನು ತಳೆದರೆ? ಅಂಕಿಗಳು ಹಾಗೂ ಅಕ್ಷರಗಳು ವಿವಿಧ ವಾಸನೆಯನ್ನು ಹೊರಡಿಸಿದರೆ? ಅಂಕಿಗಳು ಹಾಗೂ ಅಕ್ಷರಗಳು ವೈವಿಧ್ಯಮಯ ಸ್ವಾದವನ್ನು ನೀಡಿದರೆ? ಸಂಗೀತದ ಅಲೆಗಳು ಮೂರ್ತವೆತ್ತಿ ನಿಮ್ಮ ಮುಂದೆ ನರ್ತಿಸಲು ಆರಂಭಿಸಿದರೆ? '9' ಕೋಪವನ್ನು ವ್ಯಕ್ತಪಡಿಸಿದರೆ? 'ಜ' ಸಂತಸದ ಪ್ರತೀಕವಾದರೆ? ಅಲ್ಲಿ ಯಾರೋ ಹುಡುಗಿ ತನ್ನ ಗೆಳೆಯನ್ನು ಸ್ಪರ್ಶಿಸಿದರೆ, ಆ ಸ್ಪರ್ಶಾನುಭವ ನನಗೆ ಆದರೆ... ನಿಮಗೆ ಅರೆ ಹುಚ್ಚಲ್ಲ, ಪೂರ್ತಿ ಹುಚ್ಚು ಹಿಡಿದಿದೆ ಎಂದು ಖಚಿತವಾಗುತ್ತದೆ ಸರ್ ಎಂದು ನೀವು ಉದ್ಗಾರವನ್ನು ಎಳೆಯಬಹುದು. ಆದರೆ ಇದು ಕಲ್ಪನೆಯಲ್ಲ, ಕಟ್ಟುಕಥೆಯಲ್ಲ. ವಾಸ್ತವ. ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮಿಶ್ರ ಸಂವೇದನೆಯ ರೋಚಕ ಲೋಕವನ್ನು ಪ್ರವೇಶಿಸಬೇಕಾಗುತ್ತದೆ.

- **ತಾಂತ್ರಿಕ ಪದಗಳು:** ಕೆಲವು ತಾಂತ್ರಿಕ ಪದಗಳನ್ನು ತಿಳಿದುಕೊಳ್ಳೋಣ. 5 ಎನ್ನುವುದು ದೃಶ್ಯ ಸಂವೇದನೆ. ಇದನ್ನು 'ಪ್ರಾಥಮಿಕ ಸಂವೇದನೆ' ಎನ್ನುತ್ತೇವೆ. ಈ 5 ಎನ್ನುವ ಸಂಖ್ಯೆಯು ಕಪ್ಪು ಬಣ್ಣದಲ್ಲಿ ಕಾಣುವ ಬದಲು ಇತರ ಬಣ್ಣಗಳಲ್ಲಿ ಕಂಡರೆ ಅದನ್ನು 'ದ್ವಿತೀಯಕ ಸಂವೇದನೆ' ಎಂದು ಕರೆಯುತ್ತೇವೆ. ಇಲ್ಲಿ ಪ್ರಾಥಮಿಕ ಸಂವೇದನೆಯು ದ್ವಿತೀಯಕ ಸಂವೇದನೆಗೆ ಕಾರಣವಾಗುವ ಕಾರಣ, ಈ ಪ್ರಾಥಮಿಕ ಸಂವೇದನೆಯನ್ನು 'ಪ್ರಚೋದಕ' ಅಥವಾ 'ಇಂಡ್ಯೂಸರ್' ಎಂದು ಕರೆಯಬಹುದು. ಈ ಪ್ರಾಥಮಿಕ ಪರಿಚಯದೊಡನೆ, ಮಿಶ್ರ ಸಂವೇದನೆ ಅಥವ ಸೈನಿಸ್ಥೀಸಿಯ ಎಂಬ ಪದದ ಅರ್ಥವನ್ನು ತಿಳಿದುಕೊಳ್ಳೋಣ. ಇದು ಎರಡು ಗ್ರೀಕ್ ಶಬ್ದಗಳಿಂದ ರೂಪುಗೊಂಡಿದೆ. 'ಸಿನ್' + ಏಸ್ಥೆಸಿಸ್ = ಸೈನಿಸ್ಥೀಯ. 'ಸಿನ್' ಎಂದರೆ ಜತೆಗೆ ಅಥವಾ 'ಒಟ್ಟೊಟ್ಟಿಗೆ' ಎಂದರ್ಥ. 'ಏಸ್ಥೆಸಿಸ್' ಎಂದರೆ 'ಸಂವೇದನೆಗಳ ಗ್ರಹಿಕೆ' ಎನ್ನಬಹುದು. ಈ ಅರ್ಥವನ್ನು ಹೊಮ್ಮಿಸುವ 'ಮಿಶ್ರ ಸಂವೇದನೆ' ಎನ್ನುವ ಶಬ್ದವನ್ನು ಕನ್ನಡದಲ್ಲಿ ಬಳಸ ಬಹುದು. 'ಒಂದು ಸಂವೇದನೆಯ ಅನುಭವವಾಗು ವಾಗಲೇ ಮತ್ತೊಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಂವೇದನೆಗಳ ಅನುಭವವಾಗುವಿಕೆ' ಎಂದು ಸ್ಥೂಲವಾಗಿ ವಿವರಿಸಬಹುದು. ಸೈನಿಸ್ಥೀಸಿಯ ಎಂಬ ಪದವನ್ನು ಮೇರಿ ವಿಟನ್ ಕ್ಯಾಲ್ಕಿನ್ಸ್ (1863-1930) ಎಂಬಾಕೆ ತನ್ನ ಪ್ರಬಂಧದಲ್ಲಿ ಬಳಸುವ ಮೂಲಕ ಜನಪ್ರಿಯಗೊಳಿಸಿ ದಳು. ಇಂಥ ವಿಶಿಷ್ಟ ಸಾಮರ್ಥ್ಯವಿರುವ ವ್ಯಕ್ತಿಯನ್ನು 'ಸೈನೆಸ್ಥೆಟಿಸ್ಟ್' ಅಥವ 'ಮಿಶ್ರ ಸಂವೇದಿ' ಎಂದು ಕರೆಯಬಹುದು.
- **ನಮೂನೆಗಳು:** 2020ರ ಅನ್ವಯ ಸುಮಾರು 100 ನಮೂನೆಯ ಮಿಶ್ರ ಸಂವೇದನೆಗಳನ್ನು ಗುರುತಿಸಲಾಗಿದೆ. ಹಾಗೆಯೇ ಸುಮಾರು 200 ಮಿಶ್ರ ಸಂವೇದಿಗಳು ಜಗತ್ತಿನಲ್ಲಿ ಇದ್ದಾರೆ ಎನ್ನಲಾಗಿದೆ. ಪ್ರಸ್ತುತ ಮುಖ್ಯವಾದ ಕೆಲವು ಮಿಶ್ರ ಸಂವೇದನೆಗಳನ್ನು ತಿಳಿದುಕೊಳ್ಳೋಣ.
  - **ಗ್ರಾಫೀಮ್-ಕಲರ್ ಸೈನಿಸ್ಥೀಸಿಯ:** ಇದು ಸರ್ವೇ ಸಾಮಾನ್ಯವಾದ ಮಿಶ್ರ ಸಂವೇದನೆ. ಇವರಿಗೆ ಪ್ರತಿಯೊಂದು ಅಕ್ಷರವು ಅಥವಾ ಪ್ರತಿಯೊಂದು ಸಂಖ್ಯೆಯು ಒಂದು ನಿರ್ದಿಷ್ಟ ಬಣ್ಣದಲ್ಲಿ ಕಾಣುತ್ತದೆ.
  - **ಕ್ರೋಮೆಸ್ಥೀಸಿಯ:** ಒಬ್ಬರು ಮಾತನಾಡುವುದನ್ನು ಕೇಳಿದಾಗ ಇಲ್ಲವೇ ಸಂಗೀತವನ್ನು ಆಲಿಸಿದಾಗ, ಆ ನಾದವು ಬಣ್ಣ ಬಣ್ಣಗಳ ರೂಪದಲ್ಲಿ ಕಾಣುತ್ತದೆ.
  - **ಲೆಕ್ಸಿಕಲ್-ಗಸ್ಟೇಟರಿ ಸೈನಿಸ್ಥೀಸಿಯ:** ಶಬ್ದಗಳನ್ನು ಕೇಳಿದಾಗ, ಇವರಿಗೆ ವಿವಿಧ ರುಚಿಗಳ ಅನುಭವವಾಗುತ್ತದೆ.
  - **ಸ್ಪೇಶಿಯಲ್ ಸೀಕ್ವೆನ್ಸ್ ಸೈನಿಸ್ಥೀಸಿಯ:** ಸಂಖ್ಯೆಗಳು, ದಿನಾಂಕಗಳು ಅವಕಾಶದ (ಸ್ಪೇಸ್) ನಿರ್ದಿಷ್ಟ ಸ್ಥಾನದಲ್ಲಿ ನಿಂತಿರುವಂತೆ ಭಾಸವಾಗುತ್ತದೆ.
  - **ಆಡಿಟರಿ-ಟಾಕ್ಟೈಲ್ ಸೈನಿಸ್ಥೀಸಿಯ:** ಶಬ್ದಗಳನ್ನು ಇಲ್ಲವೇ ಸಂಗೀತವನ್ನು ಆಲಿಸಿದರೆ, ಅವು ಬಂದು ತಮ್ಮನ್ನು ಸ್ಪರ್ಶಿಸುವ ಅನುಭವವಾಗುತ್ತದೆ.
  - **ಮಿರರ್-ಟಚ್ ಸೈನಿಸ್ಥೀಸಿಯ:** ಯಾರೋ ಒಬ್ಬರು ಪರಸ್ಪರ ಸ್ಪರ್ಶಿಸಿಕೊಂಡರೆ, ಆ ಸ್ಪರ್ಶಾನುಭವ ಇವರಿಗೆ ಆಗುತ್ತದೆ.
  - **ಇತರೆ ನಮೂನೆಗಳು:** ಮೇಲಿನ ಅನುಭವಗಳ ವಿವಿಧ ಕ್ರಮಪಲ್ಲಟನೆ ಹಾಗೂ ಸಂಯೋಜನೆಗಳ ಮೂಲಕ ವೈವಿಧ್ಯಮಯ ಸಂವೇದನೆಗಳು ಏರ್ಪಡುತ್ತವೆ.
- **ಕಾರಣಗಳು:** ಮಿಶ್ರ ಸಂವೇದನೆಯು ಏಕೆ ಸಂಭವಿಸುತ್ತದೆ ಅಥವಾ ಹೇಗೆ ಸಂಭವಿಸುತ್ತದೆ ಎನ್ನುವ ಪ್ರಶ್ನೆಗೆ 'ಇದಮಿತ್ಥಂ' ಎನ್ನುವ ಉತ್ತರವು ದೊರೆತಿಲ್ಲ. ಆದರೂ ತಾರ್ಕಿಕವಾಗಿ ಸರಿಯೆನಿಸಬಹುದಾದ ಸಿದ್ಧಾಂತಗಳನ್ನು ಮಂಡಿಸಿರುವುದುಂಟು. ಅವುಗಳನ್ನು ಸ್ಥೂಲವಾಗಿ ಗಮನಿಸೋಣ.

ನಮ್ಮ ಮಿದುಳಿನಲ್ಲಿ ಸುಮಾರು 52ಕ್ಕೂ ಹೆಚ್ಚಿನ ವಿಶಿಷ್ಟ ಕ್ಷೇತ್ರಗಳು ಇರುವುದಾಗಿ ಕೋರ್ಬಿನಿಯನ್ ಬ್ರಾಡ್ಮನ್ (1868-1918) 20ನೆಯ ಶತಮಾನದಲ್ಲಿ ತಿಳಿಸಿದ್ದ. ಈ ಒಂದೊಂದು ಕ್ಷೇತ್ರವೂ ಒಂದೊಂದು ವಿಶಿಷ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತವೆ. ಉದಾ: ನಾವು ನೋಡುವ ನೋಟವನ್ನು ಅರ್ಥೈಸುವ ದೃಶ್ಯ ಕ್ಷೇತ್ರ ಅಥವಾ ನಾವು ಕೇಳುವ ಶಬ್ದಗಳನ್ನು ಅರ್ಥೈಸುವ ಶ್ರವಣ ಕ್ಷೇತ್ರಗಳು ಇತ್ಯಾದಿ. ಈಗ ಫಂಕ್ಷನಲ್ ಎಂಆರ್‌ಐ ಹಾಗೂ ಡಿಫ್ಯೂಶನ್ ಟೆನ್ಸಾರ್ ಇಮೇಜಿಂಗ್ ಮುಂತಾದ ಹೊಸ ತಪಾಸಣಾ ಅನುಕೂಲತೆಗಳು ದೊರೆತಿರುವ ಕಾರಣ 52 ಎನ್ನುವ ಹಳೆಯ ಸಂಖ್ಯೆಯು 180ಕ್ಕೆ ಹೆಚ್ಚಿದೆ. ಒಂದು ಅರೆಗೋಳದಲ್ಲಿ 180 ಕೇಂದ್ರಗಳೆಂದರೆ, ಎರಡೂ ಅರೆಗೋಳಗಳಲ್ಲಿ ಒಟ್ಟು 360 ಕೇಂದ್ರಗಳಿವೆ ಎಂದಾ ಯಿತು. ಈ ಎಲ್ಲ ಕೇಂದ್ರಗಳು ಮಿದುಳಿನ ತೊಗಟೆಯಲ್ಲಿ (ಕಾರ್ಟೆಕ್ಸ್) ಇವೆ. ತೊಗಟೆಯ ತಳದಲ್ಲಿ ಇರುವ ಹೈಪೋಥಲಾಮಸ್, ಬೇಸಲ್ ಗ್ಯಾಂಗ್ಲಿಯ, ಹಿಪ್ಪೋಕ್ಯಾಂ ಪಸ್, ಅಮಿಗ್ಡಲ ಮುಂತಾದ ಅಂಗಗಳಲ್ಲಿರುವ ಕ್ಷೇತ್ರಗಳನ್ನು/ನರಕೇಂದ್ರಗಳನ್ನು ಇದರಲ್ಲಿ ಸೇರಿಸಿಲ್ಲ. ಅವು ಎಷ್ಟಿವೆ ಎನ್ನುವುದರ ಬಗ್ಗೆ ಸಂಶೋಧನೆಗಳು ಇಂದಿಗೂ ನಡೆ ಯುತ್ತಿವೆ. ಜ್ಞಾನೇಂದ್ರಿಯಗಳಿಂದ ನರಗಳು ಈ ಕ್ಷೇತ್ರ ಗಳಿಗೆ ನರಗಳು ಬರುವ ಹಾಗೆ, ಈ ಕ್ಷೇತ್ರದಿಂದ ಜ್ಞಾನೇಂದ್ರಿಯಗಳಿಗೂ ನರಗಳು ಸಾಗುತ್ತವೆ. ಇವನ್ನು ನರಪಥಗಳು (ನ್ಯೂರಲ್ ಪಾಥ್) ಎಂದು ಕರೆಯುತ್ತೇವೆ.

- **ಬೆರಕೆಯ ಪ್ರಚೋದನೆಯ ಸಿದ್ಧಾಂತ (ಕ್ರಾಸ್ ಆಕ್ಟಿವೇಶನ್ ಥಿಯರಿ):** ಒಂದು ಕ್ಷೇತ್ರವು ಮತ್ತೊಂದು ಕ್ಷೇತ್ರದೊಡನೆ ಹರಟೆ ಹೊಡೆಯುವುದು. ಗ್ರಾಫೀಮ್-ಕಲರ್ ಸೈನೆಸ್ಥೀಸಿಯವನ್ನು ಪರಿಶೀಲಿಸೋಣ. ಮಿದುಳಿನಲ್ಲಿ ಅಕ್ಷರಗಳನ್ನು ಹಾಗೂ ಸಂಖ್ಯೆಗಳನ್ನು ಗುರುತಿಸುವ ಕೇಂದ್ರವು ಮಿದುಳಿನ 'ಫ್ಯೂಸಿಫಾರಂ ಗೈರಸ್' ಎಂಬ ಭಾಗದಲ್ಲಿರುತ್ತದೆ. ಇದಕ್ಕೆ ಅತ್ಯಂತ ಸನಿಹದಲ್ಲಿಯೇ ಬಣ್ಣಗಳನ್ನು ತಿಳಿಸುವ 'ವಿ 4' ಎಂಬ ಕೇಂದ್ರವಿದೆ. ಈ ಎರಡೂ ಕೇಂದ್ರಗಳು ನರಗಳು ಪರಸ್ಪರ ಬೆರೆತುಕೊಂಡರೆ, ಒಂದು ಮತ್ತೊಂದನ್ನು ಪ್ರಚೋದಿಸಬಲ್ಲುದು. ಅಕ್ಷರಗಳು, ಅಂಕಿ ಸಂಖ್ಯೆಗಳೆಲ್ಲ ಬಣ್ಣ ಬಣ್ಣವಾಗಿ ಕಾಣುತ್ತವೆ.
- **ನಿಯಂತ್ರಣ ರಹಿತ ಪ್ರತಿಕ್ರಿಯಾ ಸಿದ್ಧಾಂತ:** ನಮ್ಮ ದೇಹದಲ್ಲಿ ಎರಡು ಕ್ರಿಯೆಗಳು ಪರಸ್ಪರ ಸಹಕಾರದೊಡನೆ ಕೆಲಸವನ್ನು ಮಾಡುತ್ತವೆ. ನಾನು ಮೊಳಕೈಯನ್ನು ಮಡಚಬಲ್ಲೆ. ಮಡಚಿದ ಕೈಯನ್ನು ನೀಟಬಲ್ಲೆ. ಮಡಚಲು ಹಾಗೂ ನೀಟಲು ವಿಶಿಷ್ಟ ಗುಂಪಿನ ಸ್ನಾಯುಗಳಿವೆ. ನಾನು ಕೈಯನ್ನು ಮಡಚುವಾಗ, ನೀಟಿಸುವ ಸ್ನಾಯುಗಳು ವಿಶ್ರಾಂತ ಸ್ಥಿತಿಯಲ್ಲಿ ಇರಬೇಕಾಗುತ್ತದೆ. ಹಾಗೆ ನೀಟುವಾಗ ಮಡಚುವ ಸ್ನಾಯುಗಳು ವಿಶ್ರಾಂತಿಯನ್ನು ಪಡೆಯಬೇಕಾಗುತ್ತದೆ. ಒಂದು ವೇಳೆ ಎರಡೂ ಸ್ನಾಯುಗಳು ಒಟ್ಟಿಗೆ ಸಕ್ರಿಯವಾದರೆ!? ಇಂತಹದ್ದೆ ಪ್ರಕ್ರಿಯೆ ಮಿದುಳಿನ ನರಗಳಲ್ಲಿ ನಡೆಯುತ್ತದೆ. ಹಾಗಾಗಿ ವಿ-4 ಜಾಗೃತವಾಗಿ ದ್ದಾಗ, ಫ್ಯೂಸಿಫಾರಂ ಗೈರಸ್ ವಿಶ್ರಾಂತವಾಗಿರಬೇಕು. ಆ ನಿಯಂತ್ರಣವು ತಪ್ಪಿದರೆ, ಎರಡೂ ಭಾಗಗಳು ಜಾಗೃತವಾಗಿ ಅಕ್ಷರಗಳು ಬಣ್ಣ ಬಣ್ಣವಾಗಿ ಕಾಣುತ್ತವೆ.

ಇವಲ್ಲದೆ ನರತಂತುಗಳ ಸಂಖ್ಯೆಯಲ್ಲಿ ಅಸಹಜ ಹೆಚ್ಚಳ ಹಾಗೂ ಹೆಚ್ಚಿದ ಚಟುವಟಿಕೆ (ಎನ್‌ಹಾನ್ಸ್‌ಡ್ ಕನೆಕ್ಟಿವಿಟಿ), ನಾವು ಉದ್ಯಾನದಲ್ಲಿ ಬಾತುಕೋಳಿಯನ್ನು ಹೋಲುವ ಗಿಡವನ್ನು ಬೆಳೆಸಬೇಕಾದರೆ, ಅ ಗಿಡವನ್ನು ಕಾಲಕಾಲಕ್ಕೆ ಸವರುತ್ತಿರಬೇಕಾಗುತ್ತದೆ (ಪ್ರೂನಿಂಗ್). ನಾವು ಬೆಳೆಯುತ್ತಿರುವಂತೆಯೇ ನಮ್ಮ ಮಿದುಳಿನಲ್ಲಿ ಅನಗತ್ಯ ನರಗಳನ್ನು 'ಸವರುವ' ವ್ಯವಸ್ಥೆಯು ಇರುತ್ತದೆ. ಇದು ಸಮರ್ಪಕವಾಗಿ ನಡೆಯದಿದ್ದರೆ, ಅದು ಮಿಶ್ರ ಸಂವೇದನೆಗೆ ಕಾರಣವಾಗುತ್ತವೆ. ಇದು ಆನುವಂಶಿಕ ವಾಗಿ ಕೆಲವು ಕುಟುಂಬಗಳಲ್ಲಿ ಕಂಡುಬರುತ್ತದೆ. ನರರಾ ಸಾಯನಿಕಗಳು ಉದಾ: ಸೆರಟೋನಿನ್ ಏರುಪೇರಿ ನಿಂದಲೂ ಹೀಗಾಗಬಹುದೆಂಬ ಸಿದ್ಧಾಂತವಿದೆ. ಆದರೆ ಯಾವುದೂ ಪರಿಪೂರ್ಣವಾಗಿ ಋಜುವಾತಾಗಿಲ್ಲ.

- **ಸೃಜನಶೀಲತೆ:** ಕವಿಗಳು, ಸಾಹಿತಿಗಳು, ಕಲಾವಿದರು, ಸಂಗೀತಗಾರರು ಮುಂತಾದ ಸೃಜಶೀಲ ಕ್ಷೇತ್ರಗಳಲ್ಲಿ ತೊಡಗಿಕೊಂಡವರಲ್ಲಿ ಮಿಶ್ರ ಸಂವೇದನೆಯು ಹೆಚ್ಚಿಗೆ ಕಂಡುಬರುವುದನ್ನು ಮೊದಲಿನಿಂದಲೂ ಗಮನಿಸಲಾಗಿದೆ. ಈ ಮಿಶ್ರಸಂವೇದನೆಯನ್ನು ಕೃತಕವಾಗಿ ಉದ್ದೀಪಿಸಿ, ಏಕಕಾಲಕ್ಕೆ ಹಲವು ಕೆಲಸಗಳನ್ನು ನಿರ್ವಹಿಸಬಲ್ಲ ದಿಶೆಯಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಇದು ಒಂದು ಲಕ್ಷ ಜನರಲ್ಲಿ ಒಂದರಿಂದ ನಾಲ್ವರಲ್ಲಿ ಕಂಡುಬರಬಹುದು ಎನ್ನಲಾಗಿದೆ. ಇದು ಕಾಯಿಲೆಯಲ್ಲ. ಹಾಗಾಗಿ ಚಿಕಿತ್ಸೆಯ ಅಗತ್ಯವಿಲ್ಲ. ಇದೊಂದು ಅಂಗರಚನಾ ಹಾಗೂ ಅಂಗಕ್ರಿಯಾ ವೈಪರೀತ್ಯ ಎನ್ನಬಹುದು. ಕೆಲವು ಔಷಧಗಳ ಸೇವನೆ ಹಾಗೂ ವಶೀಕರಣದ (ಹಿಪ್ನೋಸಿಸ್) ಮೂಲಕ ತಾತ್ಕಾಲಿಕವಾಗಿ ಮಿಶ್ರ ಸಂವೇದನೆಯನ್ನುಂಟುಮಾಡಬಹುದು ಎನ್ನಲಾಗಿದೆ.
- **ಚಿನ್ನದ ಬಣ್ಣ:** ಓಂಕಾರಕ್ಕೆ ಚಿನ್ನದ ಬಣ್ಣವಿದೆ, 'ಕ'ಕಾರಕ್ಕೆ ಕೆಂಪು ಬಣ್ಣವಿದೆ, 'ಚ'ಕಾರಕ್ಕೆ ನೀಲಿ ಬಣ್ಣವಿದೆ, 'ಟ'ಕಾರಕ್ಕೆ ಹಸಿರು ಬಣ್ಣವಿದೆ, 'ಪ'ಕಾರಕ್ಕೆ ಹಳದಿ ಬಣ್ಣವಿದೆ ಎಂಬ ವಿಚಾರವು ತಂತ್ರಶಾಸ್ತ್ರದಲ್ಲಿ ಇರುವ ಬಗ್ಗೆ ವಿವರಿಸಿದ್ದೆ. ಅದು ಮಿಶ್ರ ಸಂವೇದನೆಗೆ ಉದಾಹರಣೆಯೇ ಎಂದು ಕೇಳಿದರೆ, ಖಂಡಿತಾ ಇಲ್ಲವೆನ್ನುತ್ತೇನೆ. ಇದು ಶುದ್ಧ ಅಧ್ಯಾತ್ಮ ಕ್ಷೇತ್ರಕ್ಕೆ ಸಂಬಂಧಿಸಿದ್ದು. ಗುರು ಮಾರ್ಗದರ್ಶನದಲ್ಲಿ ಸಾಧನೆ ಮಾಡಿದವರಿಗೆ ಲಭಿಸುವಂಥದ್ದು ಎಂದು ಕೇಳಿದ್ದೇನೆ. ಆದರೆ ಮಿಶ್ರ ಸಂವೇದನೆಯು ಶುದ್ಧ ವಿಜ್ಞಾನ. ಕೆಲವರಲ್ಲಿ ಮಾತ್ರ ಕಂಡುಬರುವಂಥದ್ದು. ಅವರ ಮಿದುಳಿನಲ್ಲಿರುವ ಸಹಜ ವೈಪರೀತ್ಯಗಳೇ ಈ ಅಸಹಜ ಅನುಭವಗಳಿಗೆ ಕಾರಣವಾಗಿರುತ್ತದೆ.

ಮಾತೃಭಾಷೆ ಎಂಬ ಚಂದದ ಸೇತುವೆ

ಕಸ್ತೂರಿ ಕಂಪು
ಕುಮಾರಸ್ವಾಮಿ ವಿರಕ್ತಮಠ
vveditoped@gmail.com

ವಿಶ್ವ ಮಾತೃಭಾಷೆಯ ದಿನದಂದೇ ಬೆಳಗಾವಿಯಲ್ಲೊಂದು ಕ್ಷುಲ್ಲಕ ಘಟನೆ ನಡೆದಿದ್ದು ವಿಷಾದನೀಯ. ಸರಕಾರಿ ಸಾರಿಗೆ ಬಸ್ಸಿನ ನಿರ್ವಾಹಕರೊಬ್ಬರು, 'ಕನ್ನಡದಲ್ಲಿ ಮಾತನಾಡಿ, ನನಗೆ ನಿಮ್ಮ ಭಾಷೆ ಅರ್ಥವಾಗುವುದಿಲ್ಲ' ಎಂದಿದ್ದಕ್ಕೆ ಅನ್ಯಭಾಷಿಕರು ಅವರ ಮೇಲೆ ಹಲ್ಲೆ ನಡೆಸಿದ್ದು ಖಂಡನೀಯ ವಿಚಾರ. ಇದನ್ನು ಪ್ರತಿಯೊಬ್ಬ ಕನ್ನಡಿಗರೂ ಖಂಡಿಸಲೇಬೇಕು.

ಮನುಷ್ಯ ಭಾವನಾತ್ಮಕ ಜೀವಿಯೂ ಹೌದು, ಸಾಮಾಜಿಕ ಜೀವಿಯೂ ಹೌದು. ಬಾಲ್ಯದಿಂದ ಆರಂಭಗೊಂಡು ವೃದ್ಧಾಪ್ಯದವರೆಗೂ, ಆತನ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಕುಟುಂಬದ ಪಾತ್ರ ಎಷ್ಟು ಮುಖ್ಯವೋ, ಸಮಾಜದಲ್ಲಿ ಆತನ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರ ಪಾತ್ರವೂ ಅಷ್ಟೇ ಮುಖ್ಯ. ಅವರೆಲ್ಲರೂ ಆತನ ಮೇಲೆ ಒಂದಲ್ಲಾ ಒಂದು ರೀತಿಯಲ್ಲಿ ಪರಿಣಾಮ ಬೀರುವಂಥವರೇ. ಆತ ತನ್ನ ಮನದಲ್ಲಿ ಉದಿಸುವ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಸಂವಹನಾ ಮಾಧ್ಯಮವೊಂದು ಬೇಕೇ ಬೇಕಲ್ಲವೇ? ಹೀಗೆ ಪರಸ್ಪರರ ಮಾತುಗಳು ಬೆಸೆದುಕೊಳ್ಳಲು ಸೇತುವೆಯಾಗಿರುವಂಥದ್ದೇ ಭಾಷೆ.

ಭಾಷೆಯೆಂಬುದು ಪರಸ್ಪರ ಸಂವಹನಕ್ಕೆ ಸೃಷ್ಟಿಯಾಗಿರುವ ಒಂದು ಮಾಧ್ಯಮ. ಅದು ಸೃಷ್ಟಿಯಾದದ್ದು ಮಾನವನ ಅಸ್ತಿತ್ವ ಬಂದ ಮೇಲೆಯೇ. ಜನರು ತಮ್ಮ ದಿನನಿತ್ಯದ ಕಾರ್ಯಚಟುವಟಿಕೆಗಳ ಸುಗಮ ನಿರ್ವಹಣೆಗಾಗಿ ಭಾಷೆಯನ್ನು ರಚಿಸಿದರು. ವಿಶ್ವದಲ್ಲಿ 7 ಸಾವಿರಕ್ಕೂ ಅಧಿಕ ಭಾಷೆಗಳಿವೆ; ಈ ಪೈಕಿ ಮಾತೃಭಾಷೆಯಾಗಿ ಅಧಿಕವಾಗಿ ಬಳಸಲ್ಪಡುವಂಥದ್ದು ಇಂಗ್ಲಿಷ್ ಎಂದು ನಾವು ಊಹಿಸಿದರೆ ಅದು ತಪ್ಪು. ಏಕೆಂದರೆ ಜಗತ್ತಿನ 885 ಮಿಲಿಯನ್ ಜನರು ತಮ್ಮ ಮಾತೃಭಾಷೆಯಾಗಿ ಚೀನಾದ ಮ್ಯಾಂಡರಿನ್ ಭಾಷೆಯನ್ನು ಬಳಸುತ್ತಾರೆ. ನಂತರದ ಸ್ಥಾನವನ್ನು ಸ್ಪ್ಯಾನಿಷ್ ಮತ್ತು ಇಂಗ್ಲಿಷ್ ಭಾಷೆಗಳು ಪಡೆದುಕೊಂಡಿವೆ. ಮಿಕ್ಕಂತೆ, 615 ಮಿಲಿಯನ್ ಜನರು ನಮ್ಮ ದೇಶದ ಹಿಂದಿಯನ್ನು ಮಾತೃಭಾಷೆಯಾಗಿ ಬಳಸುತ್ತಿದ್ದಾರೆ.

ನಮ್ಮ ಸಂವಹನಕ್ಕಾಗಿ ನಾವು ಎಷ್ಟೇ ಭಾಷೆಗಳನ್ನು ಕಲಿತರೂ, ನಮ್ಮ ಭಾವನೆಗಳು ಮತ್ತು ಆಲೋಚನೆಗಳು ರೂಪುಗೊಳ್ಳುವುದು ಮಾತೃಭಾಷೆಯಲ್ಲೇ. ಮನಸ್ಸಿನಲ್ಲಿ ಹುಟ್ಟುವ ಚಂದದ ಭಾವನೆಗಳು ಅನುಭೂತಿಯಾಗಿ ಮೈಗೂಡುವುದು ತಾಯ್ನುಡಿಯ ನೆರವಿನಿಂದ ಮಾತ್ರ. ಮಗುವು ಹುಟ್ಟಿದಾರಭ್ಯ ತನ್ನ ತಾಯಿ-ತಂದೆ, ಕುಟುಂಬದ ಮಿಕ್ಕ ಸದಸ್ಯರು ಮತ್ತು ನಿಕಟವರ್ತಿಗಳೊಂದಿಗೆ ಬೆಳೆಯುತ್ತಾ ಹೋದಂತೆ, ಆ ವಲಯದಲ್ಲಿ ಬಳಸುವ ಮತ್ತು ರೂಢಿಸಿಕೊಳ್ಳುವ ಭಾಷೆ ಮಾತೃಭಾಷೆಯಾಗಿರುತ್ತದೆ. ಒಟ್ಟಾರೆ ಹೇಳುವುದಾದರೆ, ವ್ಯಕ್ತಿಯೊಬ್ಬನ ವಿಕಸನಕ್ಕೆ ಮಾತೃಭಾಷೆಯೇ ಮೂಲವಾಗಿರುತ್ತದೆ. ನಾವು ಬಾಲ್ಯಾವಸ್ಥೆಯಲ್ಲಿ ಎಲ್ಲವನ್ನೂ ಕಲಿಯುವುದು ಮಾತೃಭಾಷೆಯ ನೆರವಿನಿಂದಲೇ. ಮಾತೃಭಾಷೆಯಲ್ಲಿ ಸರಳವಾಗಿ ವ್ಯಕ್ತಪಡಿಸುವ ಭಾವನೆಗಳನ್ನು ಅಷ್ಟೇ ಸರಳವಾಗಿ ಮತ್ತೊಂದು/ಪರಕೀಯ ಭಾಷೆಯಲ್ಲಿ ತೋರ್ಪಡಿಸಲಾಗುವುದಿಲ್ಲ. ಜೀವನದ ಸುಖ-ದುಃಖಗಳು, ನೋವು-ನಲಿವುಗಳು ಮೂಡಿಬರುವುದು ನಮ್ಮ ತಾಯ್ನುಡಿಯಲ್ಲಿಯೇ.

ಇಂದು ಪ್ರಪಂಚದಲ್ಲಿ 7 ಸಾವಿರಕ್ಕೂ ಅಧಿಕ ಭಾಷೆಗಳಿದ್ದರೂ, ಅವುಗಳ ಪೈಕಿ ಅರ್ಧದಷ್ಟು ಅವಸಾನದ ಅಂಚಿನಲ್ಲಿವೆ ಎನ್ನುತ್ತದೆ ಸಂಶೋಧನೆಯೊಂದು. ವಿವಿಧ ಭಾಷೆಗಳ ಪೈಪೋಟಿಯ ಮಧ್ಯೆ ಮಾತೃಭಾಷೆಗೆ ಧಕ್ಕೆ ಉಂಟಾಗುತ್ತಿದೆ. ಬಹಳಷ್ಟು ಜನರು ಜಾಗತಿಕ ಮಟ್ಟದ ಭಾಷೆಗಳ ವ್ಯಾಮೋಹಕ್ಕೆ ಸಿಲುಕಿ ಮಾತೃಭಾಷೆ/ ಪ್ರಾದೇಶಿಕ ಭಾಷೆಯನ್ನು ಕೀಳಾಗಿ ಕಾಣುತ್ತಾರೆ, ಮಾತೃಭಾಷೆಯ ಮಹತ್ವವನ್ನು ಅರಿಯದೆಯೇ ಅದನ್ನು ನಿರ್ಲಕ್ಷಿಸುತ್ತಿದ್ದಾರೆ. ಮಾತೃಭಾಷೆ/ಪ್ರಾದೇಶಿಕ ಭಾಷೆಗಳನ್ನು ಉಳಿಸುವುದು ಹೇಗೆ ಎಂಬುದರ ಕುರಿತು ಜಗತ್ತಿನ ಎಲ್ಲ ದೇಶಗಳು ಚಿಂತನೆ ನಡೆಸಬೇಕಾದ ತುರ್ತು ಅಗತ್ಯ ಎದುರಾಗಿದೆ. ಮಾತೃಭಾಷೆಯ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಶಿಕ್ಷಣ ಕ್ಷೇತ್ರದ ಪಾತ್ರ ಬಹಳ ಮಹತ್ವದ್ದಾಗಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಬಹುತೇಕರು ಇಂಗ್ಲಿಷ್ ಭಾಷೆಯ ಮೋಹಕ್ಕೆ ಸಿಲುಕಿದ್ದಾರೆ. ನಾವು ಬೆಳೆಯುತ್ತಾ, ಕುಣಿಯುತ್ತಾ, ಆಡುತ್ತಾ, ನಲಿಯುತ್ತಾ ಮೈಗೂಡಿಸಿಕೊಂಡ ಮಾತೃಭಾಷೆಯನ್ನು ನಿರ್ಲಕ್ಷಿಸುತ್ತಿದ್ದೇವೆ. ಮಾತೃಭಾಷೆಯ ಮೂಲಕ ನಾವು ಪಡೆದುಕೊಂಡ ಅರಿವು ಮತ್ತು ಕಲಿತುಕೊಂಡ ಸಂಸ್ಕೃತಿ, ಸಂಸ್ಕಾರ, ಜೀವನಶೈಲಿ, ಕೌಶಲಗಳು ನಮ್ಮ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿರುತ್ತವೆ. ಅವುಗಳನ್ನು ನಾವು ನಮ್ಮ ಬದುಕಿನ ಕೊನೆಯವರೆಗೂ ಮರೆಯಲು ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ಅವನ್ನು ವರ್ಗಾಯಿಸುವಲ್ಲಿ ಮಾತೃಭಾಷೆಯು ವಹಿಸುವ ಪಾತ್ರ ದೊಡ್ಡದು.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಜ್ಞಾನಭಂಡಾರದ ಬಹುಭಾಗವು ಇಂದು ಇಂಗ್ಲಿಷ್‌ನಲ್ಲೇ ಹುದುಗಿಹೋಗಿದೆ. ಉದ್ಯೋಗ ಸಂಬಂಧಿತ ಶಿಕ್ಷಣವು ಬಹಳಷ್ಟು ಮಟ್ಟಿಗೆ ಇಂಗ್ಲಿಷ್‌ನಲ್ಲೇ ನಡೆಯುತ್ತಿದೆ. ಉದ್ಯೋಗಕ್ಕಾಗಿ ಇಂಗ್ಲಿಷ್ ಬೇಕೇ ಬೇಕೆಂಬ ಗ್ರಹಿಕೆ ಜನರಲ್ಲಿ ಮನೆಮಾಡಿದೆ ಮತ್ತು ಬಹುತೇಕ ಉದ್ಯೋಗದಾತರು ಕೂಡ ಅದು ಕಡ್ಡಾಯ ಎಂಬ ಅಲಿಖಿತ ನಿಯಮವನ್ನು ಮುಂದುಮಾಡಿಬಿಟ್ಟಿದ್ದಾರೆ. ಇಂಗ್ಲಿಷ್ ಇಲ್ಲದಿದ್ದರೆ ಜೀವನವೇ ಇಲ್ಲ ಎಂಬ ಪರಿಸ್ಥಿತಿಯಿಂದು ನಿರ್ಮಾಣವಾಗಿರುವುದರಿಂದ, ಹೆಚ್ಚೆಚ್ಚು ಜನರು ಇಂಗ್ಲಿಷ್ ಕಡೆಗೆ ವಾಲುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದ ಬಹುತೇಕ ಮಕ್ಕಳಿಗೆ ತಮ್ಮ ಮಾತೃಭಾಷೆ ಯಾವುದು ಎಂಬುದರ ಕಲ್ಪನೆಯೂ ಇರುವುದಿಲ್ಲ. ಪೂರ್ವ ಪ್ರಾಥಮಿಕ ಹಂತದಲ್ಲೇ ಮಗುವನ್ನು ಆಂಗ್ಲಮಾಧ್ಯಮ ಶಾಲೆಗಳಿಗೆ ಸೇರಿಸಿಬಿಡುವ ಗೀಳು ಜನರಲ್ಲಿ ವ್ಯಾಪಕವಾಗುತ್ತಿದೆ. ಮನೆಯಲ್ಲಿರುವಾಗಲೂ ತಮ್ಮ ಮಗುವು ಇಂಗ್ಲಿಷ್ ಭಾಷೆಯನ್ನು ಮರೆತುಬಿಡಬಾರದು ಎಂಬ ಕಾರಣಕ್ಕೆ ಬಹುತೇಕರು ಅದನ್ನೇ ತಮ್ಮ 'ಬಾಡಿಗೆ ಮಾತೃಭಾಷೆ'ಯನ್ನಾಗಿ ಮಾಡಿಕೊಂಡುಬಿಟ್ಟಿದ್ದಾರೆ. ಮಗುವಿನ ಆರಂಭಿಕ ವಿಷಯ ಕಲಿಕೆಯು ಮಾತೃಭಾಷೆಯಲ್ಲೇ ಇರಬೇಕು ಎಂದು ಬಹಳಷ್ಟು ಭಾಷಾತಜ್ಞರು ಮತ್ತು ಸಮಾಜ ಶಾಸ್ತ್ರಜ್ಞರು ಹೇಳುತ್ತಾರಾದರೂ, ಮಕ್ಕಳ ಪೋಷಕರು ಅದನ್ನು ಸುತರಾಂ ಒಪ್ಪುತ್ತಿಲ್ಲ. ಜಗತ್ತಿನ ಸಾಕಷ್ಟು ರಾಷ್ಟ್ರಗಳು ಮಾತೃಭಾಷೆಯಲ್ಲೇ ಶಿಕ್ಷಣವನ್ನು ನೀಡುತ್ತಿವೆ ಎಂಬುದನ್ನು ಇಂಥವರು ಮರೆತುಬಿಡುತ್ತಾರೆ. ಚೀನಾ ಮತ್ತು ಜಪಾನ್ ದೇಶಗಳೇ ಇದಕ್ಕೆ ದೊಡ್ಡ ಉದಾಹರಣೆ. ಈ ಕಾರಣದಿಂದಲೇ ಅವು ಅಭಿವೃದ್ಧಿ ಪಥದತ್ತ ಸಾಗಿವೆ.

ವರದಿಯೊಂದರ ಪ್ರಕಾರ, ಭಾರತದಲ್ಲಿ 122 ಪ್ರಮುಖ ಭಾಷೆಗಳಿವೆ ಮತ್ತು 1590ಕ್ಕೂ ಹೆಚ್ಚು ಉಪಭಾಷೆಗಳಿವೆ. ನಮ್ಮಲ್ಲಿ ಕೂಡ ಬಹಳಷ್ಟು ಭಾಷೆಗಳು ಅವಸಾನದ ಅಂಚಿಗೆ ತಲುಪಿವೆ. ಈ ಪೈಕಿ ಕೆಲವು ಭಾಷೆಗಳಿಗೆ ಲಿಪಿಯಿದ್ದರೆ, ಮತ್ತೆ ಕೆಲವಕ್ಕೆ ಇಲ್ಲ. ಈ ಎಲ್ಲ ಭಾಷೆಗಳನ್ನು ಉಳಿಸಿ ಬೆಳೆಸುವ ಹೊಣೆಯನ್ನು ಸರಕಾರ ಮಾತ್ರವೇ ಹೊರಬೇಕು ಎಂದು ನಿರೀಕ್ಷಿಸುವುದು ತರವಲ್ಲ. ಜನರೂ ಈ ನಿಟ್ಟಿನಲ್ಲಿ ಕೈಜೋಡಿಸಬೇಕಿದೆ.

ಮಾತೃಭಾಷೆಯಲ್ಲೇ ಶಿಕ್ಷಣ ನೀಡುವಂತಾಗುವ ನಿಟ್ಟಿನಲ್ಲಿ ಸರಕಾರವು ಸಂಬಂಧಪಟ್ಟವರನ್ನು ಪ್ರೋತ್ಸಾಹಿಸಬೇಕಿದೆ ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗ ನೀಡಿಕೆಯಲ್ಲಿ ಆದ್ಯತೆ ನೀಡುವುದು ಈ ಕ್ರಮಗಳಲ್ಲಿ ಒಂದಾಗಬೇಕು. ವ್ಯಕ್ತಿಯೊಬ್ಬ ಮಾತೃಭಾಷೆಯಲ್ಲಿ ಹಿಡಿತವನ್ನು ಸಾಧಿಸಿದಾಗ ಮಾತ್ರವೇ ಮಿಕ್ಕ ಭಾಷೆಗಳನ್ನೂ ಸುಲಭವಾಗಿ ಕಲಿಯುವುದಕ್ಕೆ ಬಲ ಸಿಕ್ಕಂತಾಗುತ್ತದೆ. ಆದ್ದರಿಂದ, ಪೋಷಕರು ತಮ್ಮ ಮಕ್ಕಳೊಂದಿಗೆ ಹೆಚ್ಚೆಚ್ಚು ಸಮಯ ಕಳೆಯಬೇಕು, ಮಾತೃಭಾಷೆಯಲ್ಲೇ ಅವರೊಂದಿಗೆ ಮಾತಾಡುವ, ಕಥೆ-ಕವನ ಹೇಳುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಇದರಿಂದಾಗಿ ಮಾತೃಭಾಷೆಯ ಅಳಿವಿಗೆ ಬಹುಮಟ್ಟಿಗೆ ಲಗಾಮು ಬೀಳುತ್ತದೆ. ಕವಿಗಳು, ಲೇಖಕರು ತಂತಮ್ಮ ಮಾತೃಭಾಷೆಯಲ್ಲಿ ರಚಿಸುವ ಸಾಹಿತ್ಯವು ಪರಿಣಾಮಕಾರಿಯಾಗಿರುವ ನಿದರ್ಶನಗಳು ನಮ್ಮ ಕಣ್ಣ ಮುಂದೆಯೇ ಇವೆ. ಅದು ಮಾತೃಭಾಷೆಯ ತಾಕತ್ತು ಮತ್ತು ಗಮ್ಮತ್ತು.

ನಮ್ಮ ದೇಶದಲ್ಲಿ ನೆಲ, ಜಲ ಮತ್ತು ಭಾಷೆಗಾಗಿ ಸಾಕಷ್ಟು ಹೋರಾಟಗಳು ನಡೆಯುತ್ತವೆ. ಆದರೆ ಅದು ದೇಶದ ಏಕತೆಗೆ ಎಂದೂ ಧಕ್ಕೆಯನ್ನು ತಂದಿಲ್ಲ. ಇನ್ನೊಂದು ಭಾಷೆಯ ಹೇರಿಕೆಯನ್ನು ಯಾರೂ ಅಷ್ಟು ಸುಲಭವಾಗಿ ಒಪ್ಪಿಕೊಂಡಿಲ್ಲ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಸರಕಾರದ ಸಂವಹನಾ ವ್ಯವಹಾರಗಳು ಸೇರಿದಂತೆ ಜನಸಾಮಾನ್ಯರ ದೈನಿಕ ಚಟುವಟಿಕೆಗಳು ಕನ್ನಡದಲ್ಲೇ ನಡೆಯುವಂತಾಗಬೇಕು. ಬೇರೆ ಭಾಷೆಯವರು ಬಂದು ಇಲ್ಲಿ ನೆಲೆಯೂರಿದರೆ ಅವರಿಗೆ ನಾವು ಕನ್ನಡವನ್ನು ಕಲಿಸಬೇಕು.

ಕನ್ನಡ ಮಾಧ್ಯಮದಲ್ಲಿ ಓದಿದವರೆಂದರೆ ಕೆಲವರು ತಾತ್ಸಾರದ ಮನೋಭಾವವನ್ನು ತೋರುವುದಿದೆ, ಇದನ್ನು ತೊಡೆಯಬೇಕಿದೆ. ಕನ್ನಡ ಭಾಷೆಯು ಇನ್ನೂ ಸಮರ್ಥವಾಗಿ ಉಳಿದುಕೊಂಡಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರವೇ; ಹೀಗಾಗಿ ಅಲ್ಲಿನ ಕನ್ನಡ ಶಾಲೆಗಳನ್ನು ಬಲಪಡಿಸಬೇಕಾಗಿದೆ. ಹಾಗೆಂದ ಮಾತ್ರಕ್ಕೆ ನಾವು ಇತರ ಭಾಷೆಗಳನ್ನು ನಿರ್ಲಕ್ಷಿಸಬೇಕು ಎಂದಲ್ಲ; ಪಠ್ಯಕ್ರಮದಲ್ಲಿ ಅವನ್ನು ಒಂದು ವಿಷಯವಾಗಿ ಪರಿಣಾಮಕಾರಿಯಾಗಿ ಕಲಿಸಬೇಕು. ಮಾತೃಭಾಷೆಯು ತಾಯಿ ಕಲಿಸುವ ಮೊದಲ ಭಾಷೆ, ಅದು ಹೃದಯದ ಭಾಷೆ. ಮಾತೃಭಾಷೆಯ ಅಸ್ಮಿತೆಯನ್ನು ಕಾಪಿಟ್ಟುಕೊಳ್ಳುವಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೊಮ್ಮಲಿ ಭಾಷಾಪ್ರೇಮ

ಅಂತಾರಾಷ್ಟ್ರೀಯ 'ಟೆಕ್ ದೈತ್ಯ' ಗೂಗಲ್ ಕಂಪನಿಯು ಬೆಂಗಳೂರಿನಲ್ಲಿ ತನ್ನ ಕಚೇರಿ ತೆರೆಯುತ್ತಿದ್ದು, ಆ ಕ್ಯಾಂಪಸ್ಸಿಗೆ 'ಅನಂತ' ಎಂದೂ, ಸಭಾಂಗಣಕ್ಕೆ 'ಸಭಾ' ಎಂದೂ ಮತ್ತು ಕ್ಯಾಂಪಸ್‌ನಲ್ಲಿ ನಿರ್ಮಿಸಿದ ಕಿರಿದಾದ ಕಾನನಕ್ಕೆ 'ಅರಣ್ಯ' ಎಂದೂ ಹೆಸರಿಸಿದೆ. ತಮ್ಮ ಮನೆ, ವ್ಯವಹಾರ ತಾಣ, ಕಚೇರಿ, ಮಾಲ್ ಮತ್ತು ಅಪಾರ್ಟ್‌ಮೆಂಟ್‌ಗಳಿಗೆ ವಿದೇಶಿ ಹೆಸರು/ಇಂಗ್ಲಿಷ್ ಹೆಸರನ್ನು ಇರಿಸಲು ಹಾತೊರೆಯುವವರಿಗೆ ಮತ್ತು ತಮ್ಮದೇ ಭಾಷೆಯನ್ನು ನಿಕೃಷ್ಟವಾಗಿ ನೋಡುವ ಕನ್ನಡಿಗರಿಗೆ ಗೂಗಲ್ ಕಂಪನಿ ಚಾಟಿಯೇಟು ಕೊಟ್ಟಂತಿದೆ. ಕನ್ನಡಿಗರಲ್ಲಿ ಬಾಡಿಹೋಗಿರುವ ಭಾಷಾ ಮತ್ತು ಸಂಸ್ಕೃತಿಯ ಅಸ್ಮಿತೆಯನ್ನು ಮತ್ತೊಮ್ಮೆ ಅರಳಿಸಲು ಇದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಅಸ್ತ್ರ ಇಲ್ಲವೇನೋ? ಗೂಗಲ್ ತನ್ನ ಈ ಔದಾರ್ಯ ಮತ್ತು ಕನ್ನಡ ಪ್ರೇಮವನ್ನು, ತನ್ನ ಕ್ಯಾಂಪಸ್‌ನಲ್ಲಿ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ತೋರಿಸುವಂತಾಗಲಿ ಎಂಬುದು ಸಹೃದಯಿಗಳ ಆಶಯ ಮತ್ತು ನಿರೀಕ್ಷೆ.

- **ರಮಾನಂದ ಶರ್ಮಾ**, ಬೆಂಗಳೂರು

ತರ್ಕಬದ್ಧವಾಗಿ ಯೋಚಿಸಿ

ಮೆಟ್ರೋ ಬಹಿಷ್ಕಾರ ಅಭಿಯಾನಕ್ಕೆ ಮುಂದಾಗಲು ಕೆಲವರು ನಿರ್ಧರಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಮೆಟ್ರೋ ಟಿಕೆಟ್ ದರಗಳು ಬಹಳ ಹೆಚ್ಚಾಗಿವೆ, ಸಾಮಾನ್ಯ ಜನರ ಕೈಸುಡುತ್ತಿವೆ ಎಂಬುದು ಸತ್ಯ. ಆದರೂ ಇದನ್ನು ಉಪಯೋಗಿಸುವ ಜನರೂ ಸ್ವಲ್ಪ ತರ್ಕಬದ್ಧವಾಗಿ ಆಲೋಚಿ ಸಬೇಕು. ಮೆಟ್ರೋ ಆರಂಭವಾದಾಗಿನಿಂದಲೂ ಇಷ್ಟು ಬೆಲೆ ಏರಿಸಿರುವುದು ಇದೇ ಮೊದಲು. ಮೆಟ್ರೋದಂಥ ದೈತ್ಯ ಸಂಸ್ಥೆಯನ್ನು ನಡೆಸಲು, ಅದರ ದೈನಂದಿನ ಖರ್ಚು-ವೆಚ್ಚಗಳನ್ನು ಸರಿದೂಗಿಸಲು, ಇತರ ಸಂಸ್ಥೆಗಳಂತೆ ಮೆಟ್ರೋ 'ಲಾಸ್ ಮೇಕಿಂಗ್' ಸಂಸ್ಥೆಯಾಗುವುದನ್ನು ತಪ್ಪಿಸಲು ಬೆಲೆಯೇರಿಕೆಯ ಕಠಿಣ ನಿರ್ಧಾರ ಅಗತ್ಯ. ಮೆಟ್ರೋವನ್ನು ಬಹಿಷ್ಕರಿಸಲು ಹೊರಟಿರುವವರು ಯಾರು ಗೊತ್ತೇ- ಉಳ್ಳವರು ಎನಿಸಿಕೊಂಡವರು, ಐಷಾರಾಮಿ ಕಾರುಗಳಲ್ಲಿ ಸಂಚರಿ ಸುವವರು, ಮೆಟ್ರೋ ಬಹಿಷ್ಕಾರದಿಂದ ಮಧ್ಯಮ ವರ್ಗದ ಮೇಲೆ, ಸಂಚಾರ ದಟ್ಟಣೆಯ ಮೇಲೆ ಆಗುವ ವ್ಯತಿರಿಕ್ತ ಪರಿಣಾಮದ ಅರಿವಿಲ್ಲದವರು.

ಈಗಾಗಲೇ ಕುಲಗೆಟ್ಟಿರುವ ರಸ್ತೆ ಟ್ರಾಫಿಕ್ ಮತ್ತಷ್ಟು 'ಬ್ರಹ್ಮಾಂಡ ಸಮಸ್ಯೆ'ಯಾಗಿ ಮಾರ್ಪಟ್ಟರೆ, ಆಗ ಕೂಗಾಡುವವರೂ ಈ 'ಕಾರು ಸಾಹುಕಾರ'ರೇ! ಎಲ್ಲ ಖಾದ್ಯ ಪದಾರ್ಥಗಳ ಬೆಲೆಯೇರಿದೆ, ಹಾಗಂತ ಕೊಳ್ಳುವುದನ್ನು ಬಿಟ್ಟಿದ್ದಾರಾ? ಎಲ್ಲ ಹೋಟೆಲುಗಳಲ್ಲಿ ತಿಂಡಿ-ತಿನಿಸುಗಳ ಬೆಲೆ ಗಗನಕ್ಕೇರಿದೆ, ಹಾಗಂತ ಅಲ್ಲಿ ತಿನ್ನುವುದನ್ನು ಬಹಿಷ್ಕರಿಸಿದ್ದಾರಾ? ಚಿನ್ನ-ಬೆಳ್ಳಿಯ ಬೆಲೆಯೂ ಬ್ರಹ್ಮಾಂಡ ಏರಿದೆ, ಮಧ್ಯಮ ವರ್ಗದವರೂ ಸೇರಿದಂತೆ ಮಿಕ್ಕ ಜನರು ಅದನ್ನು ಖರೀದಿಸುವುದನ್ನು ನಿಲ್ಲಿಸಿದ್ದಾರಾ?! ಹಾಗಾಗಿ, 'ಮೆಟ್ರೋ ಬಹಿಷ್ಕಾರ' ಎಂಬುದು ವ್ಯರ್ಥಪ್ರಲಾಪ ಅಥವಾ ಅರಣ್ಯರೋದನ ಆಗುತ್ತದೆ, ಅಷ್ಟೇ!

ಮೆಟ್ರೋವನ್ನು ಬಿಟ್ಟು ರಸ್ತೆ ಟ್ರಾಫಿಕ್ಕಿಗೆ ಇಳಿದರೆ, ಆ ನರಕದಲ್ಲಿ ಸಿಲುಕಿ, ಕಚೇರಿಗೆ ತಡವಾಗಿ ಹೋಗಿ ಅಲ್ಲಿ ಬಾಸ್‌ರಿಂದ ಪ್ರತಿದಿನ ಮುಖಕ್ಕೆ ಮಂಗಳಾರತಿ ಮಾಡಿಸಿಕೊಳ್ಳಬೇಕಾಗುತ್ತದೆ ಮತ್ತು ನಂತರದಲ್ಲಿ 'ಹಳೇ ಗಂಡನ ಪಾದವೇ ಗತಿ' ಅಂತ ಮೆಟ್ರೋಗೆ ವಾಪಸ್ ಬರಬೇಕಾಗುತ್ತದೆ! ಇಲ್ಲಿ ಮೆಟ್ರೋ ಸಂಸ್ಥೆಯೂ ಒಂದಷ್ಟು ವಿನಾಯಿತಿಯನ್ನು ತೋರಬೇಕಿದೆ. ಕಡೆಯ ಪಕ್ಷ ಮಾಸಿಕ ಪಾಸುಗಳನ್ನು ಅದು ಹಳೆಯ ದರದಲ್ಲೇ ಕೊಟ್ಟು, ಮಿಕ್ಕಂತೆ ಹೆಚ್ಚಿಸಿದ ಬೆಲೆಯನ್ನೇ ಮುಂದುವರಿಸಿದರೆ, ಸಮಸ್ಯೆಯು ತಕ್ಕಮಟ್ಟಿಗಾದರೂ ಪರಿಹಾರವಾಗುತ್ತದೆ.

- **ಸಿ.ಡಿ.ಮುರಳೀಧರ್**, ಬೆಂಗಳೂರು

ವಿಚಾರಣೆಗೆ ಒಳಪಡಿಸಿ

ಸಣ್ಣ ಪುಟ್ಟ ಕಾರಣ ನೀಡಿ/ನೆಪವೊಡ್ಡಿ ಜನರನ್ನು ಅಲೆದಾಡಿಸುವುದು ಸರಕಾರಿ ಕಚೇರಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಬರುವ ಸಂಗತಿ. ಕೆಲವರು ಮಾತ್ರವೇ ವಸ್ತುಸ್ಥಿತಿಯನ್ನು ಅರಿತು ಜನರಿಗೆ ಸೂಕ್ತ ಮಾರ್ಗದರ್ಶನ ನೀಡಿ ನೆರವಾಗುತ್ತಾರೆ. ಆದರೆ, ವಿಜಯಪುರದಲ್ಲಿ 15,000ದಷ್ಟು ಬಾಂಗ್ಲಾ ನುಸುಳುಕೋರರು ಪತ್ತೆಗೂ ಸಿಗದಂತೆ ಸೇರಿಹೋಗಿದ್ದಾರೆ ಎಂಬ ವರದಿಯನ್ನು ಓದಿದಾಗ, ಇದಕ್ಕೆ ಸ್ಥಳೀಯ ರಾಜಕಾರಣಿಗಳ, ಸರಕಾರದ ನಿರ್ಲಕ್ಷ್ಯವೇ ಕಾರಣ ಎನಿಸುವುದು ಖರೆ. ಯಾರೋ ಪ್ರಭಾವಿಗಳ ಆಗ್ರಹ, ಒತ್ತಡ ಅಥವಾ ಬೆದರಿಕೆಗೆ ಮಣಿದು ನುಸುಳುಕೋರರಿಗೆ ಅಗತ್ಯ ದಾಖಲೆಗಳನ್ನು ದಯಪಾಲಿಸಿರುವವರದು ನಿಜಕ್ಕೂ ಬೇಜವಾಬ್ದಾರಿಯ ವರ್ತನೆಯೇ. ಇಂಥವರನ್ನು ವಿಚಾರಣೆಗೆ ಒಳಪಡಿಸಿದರೆ ನುಸುಳುಕೋರರ ಪತ್ತೆಯಾಗಬಹುದು ಹಾಗೂ ಮುಂದೆ ಇಂಥ ಎಡವಟ್ಟುಗಳು ಸಂಭವಿಸುವುದನ್ನು ತಡೆಯಬಹುದು.

- **ರಾಘವೇಂದ್ರ ರಾಯಲಪಾಡು**, ಬೂರಗಮಾಕಲಹಳ್ಳಿ

ಭಟ್ಟರ್ ಸ್ಕಾಚ್

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ದಡ್ಡನಂತೆ ಇರು ದಡ ಸೇರುವವರೆಗೂ ಅಂತ ಹಿರಿಯರೊಬ್ಬರು ಹೇಳ್ತಿರ್ತಾರಲ್ಲ?
- **ಸಮಸ್ಯೆ ಅಂದ್ರೆ ಕೆಲವರು ದಡ ಸೇರಿದ ನಂತರವೂ ಹಾಗೆ ಇದ್ದುಬಿಡ್ತಾರೆ!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನಿಜಜೀವನದಲ್ಲಿ ಗಂಡ-ಹೆಂಡತಿ ಯಾಕೆ ಡುಯೆಟ್ ಹಾಡುವುದಿಲ್ಲ?
- **ಅವನ್ನು ನೋಡಲು, ಕೇಳಲು ಬೇರೆಯವರಿಗೆ ಬಿಡು, ಅವರಿಬ್ಬರಿಗೂ ಪುರುಸೊತ್ತಿರುವುದಿಲ್ಲ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಬೊಜ್ಜಿನ ಸಮಸ್ಯೆ ಪ್ರಧಾನಿಯ ಹೆಗಲ ಮೇಲೆ ಬಿತ್ತಲ್ಲ?
- **ಎಲ್ಲವನ್ನೂ ಹೊಟ್ಟೆಗೆ ಹಾಕಿಕೊಳ್ಳಿ ಅಂದಿದ್ದರ ಫಲವೇ ಬೊಜ್ಜಿನ ಸಮಸ್ಯೆಗೆ ಮೂಲ ಅನ್ನೋದು ಗೊತ್ತಾಗಿದೆಯಂತೆ!**

- **ವಾದಿರಾಜ ದಂಡಿನ** (ಇಮೇಲ್ ಮೂಲಕ)
ಭಟ್ರೇ, ಬಸ್ಸು, ಚಲಿಸುವ ಟ್ರೇನುಗಳಿಗೆ ಕಲ್ಲು ಹೊಡೆಯುವ ವರಿಗೆ ಯಾವ ಶಿಕ್ಷೆ ಕೊಡಬೇಕು?
- **ದೇಶದ ಗಡಿ ಕಾಯುವ ಶಿಕ್ಷೆ ಕೊಟ್ರೆ?**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ನಮ್ಮ ಸ್ನೇಹಿತನ ಜತೆ ಕುಳಿತು ಕುಡಿಯಲು ಬಿಯರೇ ಒಳ್ಳೆಯದಂತೆ?
- **ಹೂಂ.. ಆತ ಅದನ್ನು ಓಪನ್ ಮಾಡಬೇಕು ಮತ್ತು ನಾನು ಕುಡಿಯಬೇಕು!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಬದುಕಿನಲ್ಲಿ ಫೇಸ್‌ಬುಕ್ ಮತ್ತು ಇನ್ಸ್ಟಾ ನೋಡೋದಕ್ಕಿಂತ ಮುಖ್ಯವಾದ ಕೆಲಸ ಇದೆಯಾ?
- **ವಾಟ್ಸಾಪ್ ನಿನಗೆ ಯಾವ ದ್ರೋಹ ಬಗೆದಿತ್ತು!?**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ರಾಹುಲ್ ಗಾಂಧಿ ಹೇಳಿದಂತೆ, ಪ್ರತಿಯೊಬ್ಬ ದಲಿತನೂ ಅಂಬೇಡ್ಕರ್ ಆದ್ರೆ?
- **ಆಗ ಪ್ರತಿ ಕಾಂಗ್ರೆಸ್ಸಿಗನೂ ರಾಹುಲ್ ಗಾಂಧಿ ಆಗ್ತಾರೆ!**

- **ರಘು, ನೊಣವಿನಕೆರೆ**
ಭಟ್ರೇ, ಗಂಗೆಯಲ್ಲಿ ಮಿಂದು ಏನಾದರೂ ಬಿಟ್ಟು ಬರಬೇಕು ಎಂದಾದ್ರೆ ಏನನ್ನು ಬಿಟ್ಟು ಬರಲಿ?
- **ಉಸಿರೊಂದನ್ನು ಬಿಟ್ಟು ಬೇರೆ ಏನನ್ನಾದರೂ ಬಿಡಬಹುದು!**

- **ಮಹಾನಂದ ಪಾಟೀಲ** (ಇಮೇಲ್ ಮೂಲಕ)
ಭಟ್ರೇ, ಹಿಡಿದರೆ ಬಿಡಲು ಮನಸ್ಸೇ ಬರುವುದಿಲ್ಲವಲ್ಲ?
- **ಹಿಡಿದಿದ್ದು ಮೊಯಿಲಿ ಮಹಾಕಾವ್ಯ ಅಂತ ಗೊತ್ತಾದರೆ ಹಿಡಿಯುತ್ತಲೇ ಇರಲಿಲ್ಲ!**

- **ರತ್ನಾ ಪ್ರಭಾಕರ, ಮಂಡ್ಯ**
ಭಟ್ರೇ, ನಿಮಗೆ ಯಾವ ಕೆಲಸ ಸುಲಭ?
- **ಸುಲಭವಾಗಿದ್ದನ್ನು ನಾನು ಕೆಲಸ ಅಂತ ಭಾವಿಸಿಯೇ ಇಲ್ಲವಲ್ಲ?!**

ನಮ್ಮ ನಾಡಿನ ಸಿಂಹಗಳನ್ನು ನೆನೆಯುವವರಾರು?

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಬಾಲಿವುಡ್ ನಟ ವಿಕ್ಕಿ ಕೌಶಲ್ ನಟನೆಯ 'ಛಾವಾ' (ಮರಿ ಸಿಂಹ) ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಸದ್ದು ಮಾಡುತ್ತಿದೆ. ಈ ಚಿತ್ರಕ್ಕೆ ಛತ್ರಪತಿ ಶಿವಾಜಿಯ ಪುತ್ರ, ಛತ್ರಪತಿ ಸಂಭಾಜಿ ಜೀವನ ಗಾಥೆ ಪ್ರೇರಣೆ ಎಂದು ನಿರ್ದೇಶಕ ಲಕ್ಷ್ಮಣ್ ಉಟೇಕರ್ ತಿಳಿಸಿದ್ದರೂ, ಚಿತ್ರಕ್ಕೆ ಬೇಕಾದ ನಾಟಕೀಯ ಸನ್ನಿವೇಶಗಳನ್ನು ಸೇರಿಸಲಾಗಿದೆ ಎಂದು ಹೇಳುವ ಮೂಲಕ ಆರಂಭದಲ್ಲೇ ವಿವಾದಗಳಿಂದ 'ಬೇಲ್' ಪಡೆದುಕೊಂಡಿದ್ದಾರೆ. ಇಷ್ಟಾದರೂ ಚಿತ್ರಪ್ರೇಮಿಗಳ ಪಾಲಿಗಿದು ಇದು ಸಂಭಾಜಿಯ ಅಸಲಿ ಕಥನ. ಅದರಲ್ಲೂ ಮಹಾರಾಷ್ಟ್ರ ಜನತೆ ಈ ಚಿತ್ರವನ್ನು ಮರಾಠರ ಶೌರ್ಯ, ಪರಾಕ್ರಮ ಮತ್ತು ಅಸ್ಮಿತೆಯ ಭಾಗವಾಗಿ ನೋಡುತ್ತಿದ್ದಾರೆ.

ಇತಿಹಾಸವನ್ನು ಓದಿದವರಿಗೆ ಔರಂಗಜೇಬನ ಮತಾಂಧತೆ ಮತ್ತು ಕ್ರೌರ್ಯದ ಬಗ್ಗೆ ಗೊತ್ತು. ಆದರೆ ಮೊದಲ ಬಾರಿಗೆ ಇದನ್ನು ತೆರೆಯ ಮೇಲೆ ನೋಡಿ, ಅಭಿಪ್ರಾಯಕ್ಕೆ ಬರುವವರ ಆವೇಶ ಬೇರೆಯೇ ಇರುತ್ತದೆ. ಇದೇನೇ ಇರಲಿ, ಇಂತಹ ಚಿತ್ರಗಳಿಂದ ನಮ್ಮ ಯುವ ಪೀಳಿಗೆ ಇತಿಹಾಸದ ಪುಟಗಳತ್ತ ಮತ್ತೊಮ್ಮೆ ಕಣ್ಣು ಹಾಯಿಸಲು ಅನುಕೂಲ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಅತಿರಂಜಿತ ಇತಿಹಾಸದ ಹೊರತಾಗಿಯೂ, ಕೆಲವರಾದರೂ ನೈಜ ಇತಿಹಾಸವನ್ನು ತಿಳಿಯಬೇಕೆಂಬ ತುಡಿತ ದಿಂದ ಅಧ್ಯಯನಶೀಲರಾದರೆ ಅಷ್ಟರ ಮಟ್ಟಿಗಿದು ಅನುಕೂಲ.

ರಾಷ್ಟ್ರಪ್ರೇಮ, ಶೌರ್ಯದ ವಿಚಾರಕ್ಕೆ ಬಂದಾಗ ನಮ್ಮ ದೇಶದಲ್ಲಿ ರಜಪೂತರು, ಸಿಖ್ಖರು, ಮರಾಠರು ಸೇರಿದಂತೆ ಕೆಲವು ಜನಾಂಗ ಮತ್ತು ಪ್ರಾಂತ್ಯದ ಹೆಸರನ್ನು ಮೊದಲಿನಿಂದಲೂ ಉಲ್ಲೇಖಿಸಿಕೊಂಡು ಬರಲಾಗುತ್ತಿದೆ. ನಮ್ಮ ಮಿಲಿಟರಿ ಯಲ್ಲೂ ಈ ಹೆಸರಿನಲ್ಲಿ ಪ್ರತ್ಯೇಕ ರೆಜಿಮೆಂಟ್ ಇದೆ. ಇದಕ್ಕೆ ಬಲ ನೀಡಿರುವುದು ಇತಿಹಾಸದ ಕಥನಗಳು.

'ಛಾವಾ' ಸಿನಿಮಾದಲ್ಲಿ ಮೂರ್ನಾಲ್ಕು ಬಾರಿ ಕರ್ನಾಟಕದ ಹೆಸರು ಬರುತ್ತದೆ. ಕರ್ನಾಟಕದಿಂದ ಬಂದ ಕಪ್ಪಕಾಣಿಕೆ ಬಗ್ಗೆಯೂ ಉಲ್ಲೇಖಿಸ ಲಾಗುತ್ತದೆ. ಆದರೆ ಅಸಲಿಗೆ ಅಂದು ಕರ್ನಾಟಕ ಎಂಬ ಪ್ರಾಂತ್ಯ ಇರಲಿಲ್ಲ. ಕನ್ನಡಿಗರು ಮೈಸೂರು, ಕೆಳದಿ ಅರಸರು, ಬಿಜಾಪುರ ಸುಲ್ತಾನರು ಹೀಗೆ ನಾನಾ ಪ್ರಾಂತೀಯ ರಾಜರುಗಳ ಅಧೀನದಲ್ಲಿ ಹಂಚಿ ಹೋಗಿದ್ದರು. 1681ರಲ್ಲಿ ಮೈಸೂರಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದ ಸಂಭಾಜಿ, ಚಿಕ್ಕದೇವರಾಜ ಒಡೆಯರ್ ಸೇನೆಯ ಎದುರು ಸೋತು ವಾಪಸ್ಸಾಗಿದ್ದ.

ಇತಿಹಾಸದುದ್ದಕ್ಕೂ ಕನ್ನಡಿಗರು ತಮ್ಮ ಕಲಿತನ ಮೆರೆದರೂ ಮರಾಠಿಗರು, ರಜಪೂತರನ್ನು ಉಲ್ಲೇಖಿಸುವಂತೆ ಈ ಶೌರ್ಯ, ಪರಾಕ್ರಮ ಗಳನ್ನು ಕನ್ನಡಿಗರ ಪರಾಕ್ರಮ ಎಂದೂ ಬಿಂಬಿಸಲಿಲ್ಲ. ಹೀಗಾಗಿ ನಮ್ಮ ಇತಿಹಾಸದ ಬಗ್ಗೆ, ನಮ್ಮನ್ನಾಳಿದ ಅರಸು ಮನೆತನಗಳ ಬಗ್ಗೆ ನಮಗೇ ಸಾಕಷ್ಟು ಅವಜ್ಞೆ ಇದೆ. ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ಶಿವಾಜಿ, ಸಂಭಾಜಿ, ಸಂಭಾಜಿಯ ಮೊಮ್ಮಗ ಬಾಜಿರಾವ್, ತಾನಾಜಿ ಮುಂತಾದ ನಾಯಕರ ಬಗ್ಗೆ ತಿಳಿದ ಕನ್ನಡಿಗರು ಇಂದು ಮರಾಠಾ ಇತಿಹಾಸದ ಮಾತನಾಡಿ ಕೊಳ್ಳುತ್ತಿದ್ದಾರೆ. ಆದರೆ ನಮ್ಮ ನಾಡಿನ ಸಿಂಹಗಳು ಮತ್ತು ಸಿಂಹಿಣಿಯರ ಬಗ್ಗೆ ತಿಳಿಯದೇ ಅನಾಥ ಪ್ರಜ್ಞೆ ಅನುಭವಿಸುತ್ತಿದ್ದಾರೆ.

ಕನ್ನಡಿಗರೇ ರಕ್ಷಕರು

ವಿಶೇಷ ಎಂದರೆ ಸಂಭಾಜಿಯ ಮರಣಾನಂತರ ಆತನ ಉತ್ತರಾಧಿಕಾರಿಯಾಗಿ ಬಂದ ರಾಜಾ ರಾಮನ ಪ್ರಾಣ ರಕ್ಷಣೆ ಮಾಡಿದ್ದು ಕನ್ನಡಿಗ ರಾಣಿ ಕೆಳದಿಯ ರಾಣಿ ಚೆನ್ನಮ್ಮ. ಒಂದು ವೇಳೆ ಅಂದು ಚೆನ್ನಮ್ಮ ಮೊಘಲರ ಸೈನ್ಯದಿಂದ ರಾಜಾರಾಮನ ಪ್ರಾಣ ರಕ್ಷಣೆ ಮಾಡದಿದ್ದರೆ ಮರಾಠರ ಆಡಳಿತ ಅಂದೇ ಕೊನೆಗೊಳ್ಳುತ್ತಿತ್ತು. ಸಂಭಾಜಿಯ ಮರಣದ ಸುದ್ದಿ ತಲುಪುತ್ತಲೇ 1689ರ ಮಾರ್ಚ್ 12ರಂದು ರಾಯಗಢ ಕೋಟೆಯಲ್ಲಿ ಕಿರಿಯ ವಯಸ್ಸಿನ ರಾಜಾರಾಮನಿಗೆ ಪಟ್ಟಾಭಿಷೇಕ ಮಾಡಲಾಗುತ್ತದೆ. ಇದನ್ನು ತಿಳಿದ ಕೂಡಲೇ ಮಾರ್ಚ್ 25ರಂದು ಔರಂಗಜೇಬನ ಪುತ್ರ ಅಜಮತ್ ಅರಾ ನೇತೃತ್ವದ ಸೈನ್ಯ ರಾಯಗಢದ ಮೇಲೆ ಮುತ್ತಿಗೆ ಹಾಕುತ್ತದೆ.

ರಾಜಾರಾಮನ ಪ್ರಾಣ ಉಳಿಸುವ ದೃಷ್ಟಿಯಿಂದ ಮರಾಠ ಅಧೀನ ಅರಸರ ಆಶ್ರಯ ಕೇಳಿದಾಗ, ಔರಂಗಜೇಬನ ಕ್ರೌರ್ಯಕ್ಕೆ ಹೆದರಿ ಅವರಾರೂ ರಕ್ಷಣೆ ನೀಡುವುದಿಲ್ಲ. ಈ ಸಂದರ್ಭದಲ್ಲಿ ರಾಜರಾಮನ ವೇಷ ಮರೆಸಿ ಕೆಳದಿಗೆ ಕರೆ ತರಲಾಗುತ್ತದೆ. ಮರಾಠ ರಾಜನಿಗೆ ಆಶ್ರಯ ಕೊಟ್ಟರೆ ಮೊಘಲರ ದಾಳಿ ನಿಶ್ಚಿತವೆಂದು ತಿಳಿದರೂ ಕೆಳದಿಯ ಚೆನ್ನಮ್ಮ, ರಕ್ಷಣೆ ಬಯಸಿದವರಿಗೆ ಆಶ್ರಯ ನೀಡುವುದು ಧರ್ಮ ಎಂದು ತಿಳಿದು ರಾಜರಾಮನ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲುತ್ತಾಳೆ. ಮೊಘಲರ ದಾಳಿಗೆ ಮುನ್ನವೇ ಯುದ್ಧಕ್ಕೆ ಸಿದ್ಧಳಾಗುತ್ತಾಳೆ. ಕೆಳದಿಯ ಗೆರಿಲ್ಲಾ ಮಾದರಿ ದಾಳಿಗೆ ಸಿಲುಕಿದ ಅಜಮತ್ ಅರಾ ನೇತೃತ್ವದ ಸೈನ್ಯಕ್ಕೆ ಕೆಳದಿಯ ಕೋಟೆಯತ್ತ ಬರಲು ಸಾಧ್ಯವಾಗುವುದಿಲ್ಲ. ಕೊನೆಗೆ ಔರಂಗಜೇಬನ ಸೂಚನೆಯಂತೆ ಅಜಮತ್ ದಿಲ್ಲಿಗೆ ಮರಳುತ್ತಾನೆ.

ಇದಕ್ಕೂ ಮುನ್ನ ಬೆಳವಡಿಯ ಮಲ್ಲಮ್ಮ ರಾಣಿಯ ಮುಂದೆ ಸೋತ ಛತ್ರಪತಿ ಶಿವಾಜಿ ರಾಜಿ ಸಂಧಾನಕ್ಕೆ ಮಾಡಿಕೊಂಡಿದ್ದು ಇತಿಹಾಸದಲ್ಲಿ ದಾಖಲಾಗಿದೆ. 16ನೇ ಶತಮಾನದಲ್ಲಿ ಉಳ್ಳಾಲದ ರಾಣಿ ಅಬ್ಬಕ್ಕ, ಭಟ್ಕಳದ ರಾಣಿ ಚೆನ್ನಾಭೈರಾದೇವಿ ಮುಂತಾದವರು ಪೋರ್ಚುಗೀಸರ ವಿರುದ್ಧ ದಿಟ್ಟತನದಿಂದ ಹೋರಾಡಿ, ಫಿರಂಗಿ ಸಜ್ಜಿತ ಅವರ ಸೈನ್ಯವನ್ನು ಧೈರ್ಯದಿಂದ ಹಿಮ್ಮೆಟ್ಟಿಸಿದ್ದರು. ನಮ್ಮ ಇತಿಹಾಸದ ಪಠ್ಯಗಳಲ್ಲಿ ರಾಣಿ ಅಬ್ಬಕ್ಕನ ಸಾಹಸದ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಇದೆ. ಆದರೆ ಸುಮಾರು 54 ವರ್ಷಗಳ ಕಾಲ ಆಡಳಿತ ನಡೆಸಿದ ಚೆನ್ನಾಭೈರಾದೇವಿಯ ಸಾಹಸ ಇಂದಿಗೂ ಅಜ್ಞಾತವಾಗಿ ಉಳಿದಿದೆ.

ಇತಿಹಾಸ ದಾಖಲಿಸದ ಅಮರ ಸುಳ್ಯ ದಂಗೆ

ನಾವು ಪಠ್ಯದಲ್ಲಿ ಓದಿದಂತೆ 1857ರ ಸಿಪಾಯಿದಂಗೆ ಭಾರತದ ಮೊತ್ತ ಮೊದಲ ಸ್ವಾತಂತ್ರ್ಯ ಸಂಗ್ರಾಮ. ಆದರೆ ಇದಕ್ಕೆ ಎರಡು ದಶಕಗಳ ಮುನ್ನ ಅಂದು ಕೊಡಗಿನ ಭಾಗವಾಗಿದ್ದ ಸುಳ್ಯ ಪ್ರದೇಶದ ರೈತಾಪಿ ಜನತೆ ತಮ್ಮದೇ ಸೈನ್ಯ ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು.ಕೆದಂಬಾಡಿ ರಾಮಯ್ಯ ಗೌಡರ ನೇತೃತ್ವದಲ್ಲಿ ಇಲ್ಲಿನ ರೈತರು ಸೈನ್ಯ ಕಟ್ಟಿದ ರೀತಿ, ಮೂರ್ನಾಲ್ಕು ಕಡೆಗಳಲ್ಲಿ ಬ್ರಿಟಿಷರ ಖಜಾನೆಯನ್ನು ಲೂಟಿ ಹೊಡೆದು ಮಂಗಳೂರಿನಲ್ಲಿ ಬಾವುಟಗುಡ್ಡೆ ಯಲ್ಲಿ ತಮ್ಮ ಧ್ವಜ ಪ್ರತಿಷ್ಠಾಪನೆ ಮಾಡಿದ್ದು, ಬ್ರಿಟಿಷ್ ಮುಕ್ತ ಸ್ವತಂತ್ರ ಪ್ರದೇಶ ಎಂದು ಘೋಷಣೆ ಹೊರಡಿಸಿದ್ದು ಸಂಭಾಜಿಯ ಜೀವನ ಚರಿತ್ರೆಗಿಂತ ಯಾವ ರೀತಿಯಲ್ಲೂ ಕಡಿಮೆ ಇಲ್ಲ.

ಸಂಭಾಜಿ ಸಿಕ್ಕಿಬಿದ್ದಂತೆ ಬಂಧುಜನರ ದ್ರೋಹದ ಕಾರಣದಿಂದ ಈ ಹೋರಾಟದಲ್ಲಿ ಪಾಲ್ಗೊಂಡ 1,115 ರೈತ ಹೋರಾಟಗಾರರು ಬ್ರಿಟಿಷರ ಕೈಗೆ ಸಿಕ್ಕಿ ಬೀಳುತ್ತಾರೆ. ಸಿಕ್ಕಿಬಿದ್ದ ಎಲ್ಲ ರೈತರ ಜಮೀನನ್ನು ಬ್ರಿಟಿಷರು ಮುಟ್ಟುಗೋಲು ಹಾಕಿಕೊಂಡು ಮಾಹಿತಿ ದಾರರಿಗೆ ಹಂಚುತ್ತಾರೆ. ಕೆಲವು ಮುಖಂಡರನ್ನು ಮಂಗಳೂರಿನ ಬಾವುಟಗುಡ್ಡೆಯಲ್ಲಿ ಗಲ್ಲಿಗೇರಿಸಿದರೆ, ಇನ್ನು ಕೆಲವರನ್ನು ಮಡಿಕೇರಿಯ ಕೋಟೆಯ ಮುಂದೆ ಬಹಿರಂಗವಾಗಿ ಗಲ್ಲಿಗೇರಿಸಲಾಗುತ್ತದೆ. ಕೆದಂಬಾಡಿ ರಾಮಯ್ಯ ಗೌಡ, ಅವರ ಸಣ್ಣಪ್ಪ ಗೌಡ ಸೇರಿದಂತೆ ಅನೇಕರನ್ನು ಬೋನುಗಳಲ್ಲಿ ಇರಿಸಿ ಸಿಂಗಾಪುರದ ಜೈಲಿಗೆ ರವಾನಿಸಲಾಗುತ್ತದೆ. ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಹೆಸರಿನಲ್ಲಿ ಹೋರಾಡಿದ ಇವರ ಕಥಾನಕ ಕನ್ನಡಿಗರು ಬಿಡಿ, ಇತ್ತೀಚಿನವರೆಗೆ ನಮ್ಮ ಇತಿಹಾಸಕಾರರಿಗೂ ತಿಳಿದಿರಲಿಲ್ಲ. ಈ ಬಂಡಾಯದ ಮಹತ್ವವನ್ನು ಕಡಿಮೆ ಮಾಡಲೆಂದೇ ಬ್ರಿಟಿಷರು, ಇದನ್ನು 'ಕಲ್ಯಾಣಪ್ಪನ ಕಾಟ್‌ಕಾಯಿ' ಎಂದು ಕರೆದು ದರೋಡೆಕೋರರ ದಾಳಿ ಎಂದು ಬಿಂಬಿಸಿದರು. ನಮ್ಮ ಇತಿಹಾಸ ಕಾರರೂ ಇದನ್ನು ನಂಬಿದ್ದರು.

ಮೊದಲ ಸ್ವಾತಂತ್ರ್ಯ ಸಮರ

ಕೆನರಾ ಮತ್ತು ಕೊಡಗು ಪ್ರಾಂತದಲ್ಲಿ ರೈತರು, ಕೂಲಿಕಾರ್ಮಿಕರು, ಜನಸಾಮಾನ್ಯರನ್ನು ಒಗ್ಗೂಡಿಸಿಕೊಂಡು ಬ್ರಿಟಿಷರ ವಿರುದ್ಧ ಶಸ್ತ್ರಸಜ್ಜಿತ ಹೋರಾಟ ನಡೆಸಿ ಮಡಿಕೇರಿಯಿಂದ ಮಂಗಳೂರುವರೆಗಿನ ಭಾಗವನ್ನು 13 ದಿನಗಳ ಕಾಲ ಸ್ವತಂತ್ರಗೊಳಿಸಿದ ಕೆದಂಬಾಡಿ ರಾಮಯ್ಯ ಗೌಡ ಅವರ ಪ್ರತಿಮೆಯನ್ನು ಎರಡು ವರ್ಷಗಳ ಹಿಂದಷ್ಟೇ ಮಂಗಳೂರಿನ ಬಾವುಟಗುಡ್ಡೆಯಲ್ಲಿ ಸ್ಥಾಪಿಸಿ ಈ ದೇಶಪ್ರೇಮಿಗೆ ಗೌರವ ಸಲ್ಲಿಸಲಾಗಿದೆ. ಗುಡ್ಡೆಮನೆ ಅಪ್ಪಯ್ಯ ಗೌಡರ ಪ್ರತಿಮೆಯನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗಿದೆ. ಆದರೆ ಧೀರೋದಾತ್ತ ಕಥಾನಕವನ್ನು ರಾಷ್ಟ್ರಮಟ್ಟದಲ್ಲಿ ಬಿಂಬಿಸಿ 1937ರಷ್ಟು ಹಿಂದೆಯೇ ಕನ್ನಡದ ನೆಲದಲ್ಲಿ ನಮ್ಮ ದೇಶದ ಮೊದಲ ಸ್ವಾತಂತ್ರ್ಯ ಸಮರ ಆರಂಭವಾಗಿತ್ತು ಎಂದು ನಿರೂಪಿಸಲು ನಮಗೆ ಸಾಧ್ಯವಾಗಿಲ್ಲ. ಇದೇ ಇತಿಹಾಸ ತಮಿಳರು, ತೆಲುಗರು, ಮರಾಠರ ದ್ದಾಗಿದ್ದರೆ ಈ ಹೆಸರುಗಳು ರಾಷ್ಟ್ರಮಟ್ಟದಲ್ಲಿ ಕೇಳಿ ಬರುತ್ತಿತ್ತು.

ಅಮರ ಸುಳ್ಯದ ಈ ಹೋರಾಟಕ್ಕೆ ಅರಸೊತ್ತಿಗೆಯ ನಂಟು ಇರಲಿಲ್ಲ. 1799ರಲ್ಲಿ ಟಿಪ್ಪು ಸುಲ್ತಾನ ಆಳ್ವಿಕೆ ಕೊನೆಗೊಂಡ ಬಳಿಕ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶ ಬ್ರಿಟಿಷರ ವಶವಾಯಿತು. ಈಗ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿರುವ ಸುಳ್ಯ ಕೊಡಗಿನ ಹಾಲೇರಿ ರಾಜವಂಶಸ್ಥರ ಆಳ್ವಿಕೆಗೆ ಒಳಪಟ್ಟಿತ್ತು. ಹಾಲೇರಿ ಅರಸ ಚಿಕ್ಕವೀರ ರಾಜೇಂದ್ರನ ಪದಚ್ಯುತಿ ಬಳಿಕ ಈ ಭಾಗವೂ ಬ್ರಿಟಿಷರ ವಶವಾಗಿತ್ತು. ಅಲ್ಲಿವರೆಗೂ ವಸ್ತು ರೂಪದಲ್ಲಿ ಸಂದಾಯವಾಗುತ್ತಿದ್ದ ಕಂದಾಯವನ್ನು ಹಣದ ರೂಪದಲ್ಲಿ ನೀಡಬೇಕೆಂದು ಬ್ರಿಟಿಷರು ತಾಕೀತು ಮಾಡಿದ್ದು ರೈತರ ದಂಗೆಗೆ ಮೂಲ ಕಾರಣವಾಗಿತ್ತು.

1837 ಮಾರ್ಚ್ 30ರಂದು ಸುಳ್ಯ ಮಿತ್ತೂರು ಗ್ರಾಮದ ಕೆದಂಬಾಡಿ ರಾಮಯ್ಯ ಗೌಡರಿಗೆ ಸೇರಿದ ಮದುವೆ ಗದ್ದೆಯಿಂದ ಕಲ್ಯಾಣಸ್ವಾಮಿ ನೇತೃತ್ವದಲ್ಲಿ ಹೊರಟ ಸಾವಿರಕ್ಕೂ ಹೆಚ್ಚಿನ ರೈತರ ದಂಡು ಮೊದಲು ಬೆಳ್ಳಾರೆ ಪೇಟೆಯಲ್ಲಿ ಕಂಪನಿಯ ಖಜಾನೆಯನ್ನು ವಶಪಡಿಸಿ ಗೆಲುವು ಸಾಧಿಸುತ್ತದೆ. ಹುಲಿ ಕಡಿದ ನಂಜಯ್ಯ, ಚೆಟ್ಟಿ-ಕುರ್ತು ಕುಡಿಯರು, ಕರಡಿಮಲೆ ಅಣ್ಣೆಗೌಡ, ಪೆರಾಜೆ ಊಕಣ್ಣ ಬಂಟ, ಕರಣಿಕ ಕೃಷ್ಣಯ್ಯ, ಕರಣಿಕ ಸುಬ್ಬಯ್ಯ, ಕೋಲ್ಚಾರು ಕೂಸಪ್ಪ ಗೌಡ ಮೊದಲಾದವರು ಹೋರಾಟದ ನೇತೃತ್ವ ವಹಿಸುತ್ತಾರೆ. ಇವರೆಲ್ಲರ ಹೆಸರು ಬ್ರಿಟಿಷರ ದಾಖಲೆಗಳಲ್ಲಿವೆ.

ಬೆಳ್ಳಾರೆಯಲ್ಲಿ ಹೋರಾಟದ ಸೇನಾಪಡೆಯನ್ನು ನಾಲ್ಕು ತಂಡಗಳಾಗಿ ವಿಂಗಡಿಸಿ ಮೊದಲ ತಂಡ ಕುಂಬ್ಳೆ, ಕಾಸರಗೋಡು, ಮಂಜೇಶ್ವರದ ಕಡೆ, ಎರಡನೇ ತಂಡವನ್ನು ಬಂಟ್ವಾಳ, ಕಾರ್ಕಳಕ್ಕೆ, ಮೂರನೇ ತಂಡವನ್ನು ಉಪ್ಪಿನಂಗಡಿ, ಬಿಸಿಲೆಗೆ ಕಳುಹಿಸಿದರೆ, ಕಲ್ಯಾಣ ಸ್ವಾಮಿ, ಕೆದಂಬಾಡಿ ರಾಮಯ್ಯ ಗೌಡ ಮತ್ತು ಕುಕ್ಕುನಾಡು ಚೆನ್ನಯ್ಯರನ್ನು ಒಳಗೊಂಡ ಪ್ರಧಾನ ಸೈನ್ಯ ಮಂಗಳೂರಿನ ಕಡೆ ಹೊರಡುತ್ತದೆ. ಪುತ್ತೂರಿನ ಬ್ರಿಟಿಷ್ ಕಂಪನಿ ಕಚೇರಿಯನ್ನು ವಶಪಡಿಸಿಕೊಂಡ ಮುಖ್ಯಪಡೆ ಮಂಗಳೂರಿನತ್ತ ಧಾವಿಸಿದಾಗ ನಂದಾವರದ ಲಕ್ಷ್ಮಪ್ಪ ಬಂಗರಸ, ವಿಟ್ಲದ ಅರಸರು,ಧರ್ಮಸ್ಥಳದ ಹೆಗ್ಗಡೆಯವರ ಬೆಂಗಾವಲು ಪಡೆ ಜತೆ ಸೇರುತ್ತಾರೆ. ಈ ಸೈನ್ಯವನ್ನು ಕಂಡು ಅಂದಿನ ಚೀಫ್ ಕಲೆಕ್ಟರ್ ಲೆವಿನ್ ಪಲಾಯನ ಮಾಡುತ್ತಾನೆ.

ಮಂಗಳೂರಿನ ಖಜಾನೆ ವಶಪಡಿಸಿಕೊಂಡ ಹೋರಾಟಗಾರರು ಇಂದು ಬಾವುಟಗುಡ್ಡೆ ಮೈದಾನದಲ್ಲಿ ಕಂಪನಿ ಧ್ವಜ ಇಳಿಸಿ ಹಾಲೇರಿ ವಂಶದ ರಾಜಲಾಂಛನದ ಧ್ವಜವನ್ನು ಹಾರಿಸುತ್ತಾರೆ. ಸೆರೆಮನೆಗಳ ಬಾಗಿಲು ಒಡೆದು ಅಲ್ಲಿರುವ ಕೈದಿಗಳನ್ನು ಬಿಡುಗಡೆ ಮಾಡುತ್ತಾರೆ.

ಮಂಗಳೂರನ್ನು ಗೆದ್ದ ರೈತ ಸೈನ್ಯ ಮಡಿಕೇರಿಯನ್ನು ವಶಪಡಿಸಿಕೊಳ್ಳಲು ಕೂಜುಗೋಡು ಅಪ್ಪಯ್ಯ ಗೌಡ ಮತ್ತು ಕೂಜುಗೋಡು ಮಲ್ಲಪ್ಪ ಗೌಡ ಇವರ ನೇತೃತ್ವದಲ್ಲಿ ಬಿಸಿಲೆಘಾಟಿಯ ಮುಖಾಂತರ ಮಡಿಕೇರಿಯತ್ತ ಸಾಗಿತ್ತು. ಆದರೆ ಮಂಗಳೂರನ್ನು ಕಳೆದುಕೊಂಡ ಬ್ರಿಟಿಷರು ಮುಂಬಯಿಯಿಂದ ಸೈನ್ಯ, ಮದ್ದುಗುಂಡು, ಯುದ್ಧ ಸಾಮಗ್ರಿಗಳನ್ನು ತರಿಸಿ ಪ್ರತಿ ಹೋರಾಟಕ್ಕೆ ಸಿದ್ಧತೆ ಮಾಡಿಕೊಂಡಿದ್ದರು. ಬ್ರಿಟಿಷರ ಸುಸಜ್ಜಿತ ಸೇನೆಯ ಎದುರು ರೈತ ಸೈನ್ಯಕ್ಕೆ ಸೋಲಾಯಿತು. ಮಲಬಾರಿನಿಂದ ಹಡಗಿನಲ್ಲಿ ಬಂದ ಹೆಚ್ಚುವರಿ ಬ್ರಿಟಿಷ್ ಪಡೆ ಮಂಗಳೂರನ್ನು ಮರಳಿ ವಶಕ್ಕೆ ಪಡೆಯುತ್ತದೆ.

ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಲಕ್ಷಪ್ಪ ಬಂಗರಸ, ಉಪ್ಪಿನಂಗಡಿಯ ಮಂಜ, ಕಲ್ಯಾಣಪ್ಪ ನಾಮಾಂಕಿತ ಪುಟ್ಟ ಬಸವರನ್ನು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಲಾಗುತ್ತದೆ. ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಮಡಿಕೇರಿಯ ಕೋಟೆಯ ಎದುರು ಬಹಿರಂಗವಾಗಿ ಗಲ್ಲಿಗೇರಿಸಲಾಯಿತು. ಕೆದಂಬಾಡಿ ರಾಮಯ್ಯ ಗೌಡ, ಅವರ ಮಗ ಸಣ್ಣಯ್ಯ ಗೌಡ ಸಹಿತ ಹಲವಾರು ಸ್ವಾತಂತ್ರ್ಯ ಯೋಧರನ್ನು ಪ್ರಾಣಿಗಳಂತೆ ಬೋನಿನಲ್ಲಿ ತುಂಬಿಸಿ ಸಿಂಗಾಪುರಕ್ಕೆ ರವಾನಿಸಲಾಯಿತು. ದೇಶಕ್ಕೆ ಸ್ವಾತಂತ್ರ್ಯದ ಅರ್ಥ ತಿಳಿಯುವ ಮುನ್ನವೇ ಇದಕ್ಕಾಗಿ ಹೋರಾಡಿದ ಈ ಯೋಧರು ತಮ್ಮದಲ್ಲದ ನೆಲದಲ್ಲಿ ಜೈಲಿನಲ್ಲಿಯೇ ನರಳಿ ಸಾವು ಕಾಣಬೇಕಾಯಿತು. ಸಂಭಾಜಿ ಸಿನಿಮಾದಲ್ಲಿ ವಿಕ್ಕಿ ಕೌಶಲ್ ಹೇಳುವಂತೆ, ಸ್ವರಾಜ್ಯಕ್ಕಾಗಿ ಹೋರಾಡಿದ ಇವರ ತ್ಯಾಗ, ಬಲಿದಾನ ವ್ಯರ್ಥವಾಗಬಾರದು. ಇದು ತಿಳಿಯಬೇಕಾದರೆ ನಮ್ಮ ಇತಿಹಾಸವನ್ನು ನಾವು ತಿಳಿಯಬೇಕಾಗಿದೆ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಇನ್ನೂ ಅಖಾಡದಲ್ಲಿದ್ದಾರೆ ಸುಖಬೀರ್ ಸಿಂಗ್ ಬಾದಲ್!

ರಾಜಕೀಯವನ್ನು ಕೆಲವೊಮ್ಮೆ ಕುಸ್ತಿಪಂದ್ಯವೆಂದೂ, ಚದುರಂಗದಾಟವೆಂದೂ ಕರೆಯುವುದು ವಾಡಿಕೆ. ಚುನಾವಣೆಯೆಂಬ ಅಖಾಡದಲ್ಲಿ ಎದುರಾಳಿಗಿಂತ ಭರ್ಜರಿ ವೋಟು ಗಿಟ್ಟಿಸಿಕೊಂಡು ಅವರ ಮಣ್ಣು ಮುಕ್ಕಿಸುವುದರಿಂದ ರಾಜಕಾರಣವನ್ನು ಕೆಲವರು ಕುಸ್ತಿಗೆ ಹೋಲಿಸುತ್ತಾರೆ. ಇನ್ನು ರಾಜಕೀಯ ಎದುರಾಳಿಗಳ ಮುಂದಿನ ಹೆಜ್ಜೆಯನ್ನು ಊಹಿಸಿ ಹಾಗೂ ಪರಿಣಾಮಗಳ ಲೆಕ್ಕಾಚಾರವನ್ನು ಹಾಕಿ ಕೂತ ಜಾಗದಲ್ಲೇ ವ್ಯೂಹಾತ್ಮಕ ಕಾರ್ಯತಂತ್ರವನ್ನು ಕೆಲವರು ಹೆಣೆಯುವುದರಿಂದ ರಾಜಕಾರಣವು 'ಚದುರಂಗದಾಟ' ಎಂಬ ಅಭಿದಾನಕ್ಕೂ ಪಾತ್ರವಾಗಿದೆಯೆನ್ನಿ. ಈ ಎಲ್ಲ ಕಾರಣಗಳಿಂದಾಗಿ, ರಾಜಕಾರಣದಲ್ಲೂ ಸೋಲು-ಗೆಲುವು, ಹಿನ್ನಡೆ-ಮುನ್ನಡೆ ಇರುವಂಥದ್ದೇ. 'ಈ ಬಚ್ಚಾ ನನಗೆ ಸಮನಾಗಬಲ್ಲನೇ?' ಎಂದು ಹೀಯಾಳಿಸಿಕೊಂಡ ಮರಿ-ಪುಢಾರಿಯೇ, ತನ್ನನ್ನು ಹಾಗೆ ಲಘುವಾಗಿ ಕಂಡ ಹಿರಿ-ಪುಢಾರಿಯನ್ನು ಅಖಾಡದಲ್ಲಿ ಮಣ್ಣು ಮುಕ್ಕಿಸಿದ ನಿದರ್ಶನಗಳಿವೆ, ತನಗೆ ರಾಜಕೀಯದ ಓನಾಮವನ್ನು ಹೇಳಿಕೊಟ್ಟ ಗುರುವಿಗೇ ಆತನ ಶಿಷ್ಯನು ತಿರುಮಂತ್ರ ಹೇಳಿದ ಸಾಕಷ್ಟು ಉದಾಹರಣೆಗಳು ನಮ್ಮಲ್ಲಿ ದಾಖಲಾಗಿವೆ.

ಇಷ್ಟೆಲ್ಲಾ ಪುರಾಣಕ್ಕೆ ಕಾರಣ ವಾಗಿದ್ದು ಪಂಜಾಬಿನ ಅಕಾಲಿದಳದ ನಾಯಕ ಸುಖಬೀರ್ ಸಿಂಗ್ ಬಾದಲ್. ಅವರು ಈಗ ಮತ್ತೆ ಸುದ್ದಿಯ ಮುನ್ನೆಲೆಗೆ ಬಂದಿರುವುದೇ ಇದಕ್ಕೆ ಕಾರಣ. ಹತ್ತು ಹಲವು ರಾಜಕೀಯ ಹಿನ್ನಡೆಗಳ ಹೊರತಾಗಿಯೂ ಬಾದಲ್ ಅವರು ಇನ್ನೂ 'ಆಟದಿಂದ ನಿರ್ಗಮಿಸಿಲ್ಲ' ಎಂಬುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತಿವೆ. ಅವರ ಮಗಳ ಮದುವೆಗೆ ದೇಶದ ಉದ್ದಗಲದ ಘಟಾನುಘಟಿ ರಾಜಕಾರಣಿಗಳ ದಂಡೇ ಆಗಮಿಸಿದ್ದು ಇದಕ್ಕೊಂದು ಸ್ಯಾಂಪಲ್ ಎನ್ನಬಹುದು.

ಹೀಗೆ ಮದುವೆಯ ಸಂಭ್ರಮದಲ್ಲಿ ಪಾಲ್ಗೊಂಡವರಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಪ್ರಾದೇಶಿಕ ಪಕ್ಷಗಳ ಮುಖ್ಯಮಂತ್ರಿಗಳು, ನಾಯಕರು ಹಾಗೂ ಬಿಜೆಪಿಯ ಪ್ರಮುಖ ವ್ಯಕ್ತಿಗಳು ಸೇರಿದ್ದರು. ಇದರಲ್ಲೇನು ಅಚ್ಚರಿ? ಎಂದು ನೀವು ಕೇಳಬಹುದು.

ನಿಮಗೆ ಗೊತ್ತಿರುವಂತೆ, ಕೇಂದ್ರವು ಕೃಷಿ ವಲಯಕ್ಕೆ ಸಂಬಂಧಿಸಿ ಮುಂದುಮಾಡಿದ ಮೂರು ಕಾನೂನುಗಳಿಂದ ಕೆರಳಿದ ಸುಖಬೀರ್ ಸಿಂಗ್ ಬಾದಲ್ ಅವರು 'ಅಟ್ಟಂಬಟ್ಟೆ ಕೋಳಿಮೊಟ್ಟೆ ಇನ್ ಮುಂದೆ ನಿಮ್ಮನ್ನ ಮಾತಾಡ್ಸಲ್ಲ... ಹೋಗ'' ಎಂದು ಹೇಳಿ 'ಕೇಸರಿ ಪಕ್ಷ' ಬಿಜೆಪಿಯ ಜತೆ 'ಠೂ' ಬಿಟ್ಟಿದ್ದರು. ಇಷ್ಟಾಗಿಯೂ ಬಿಜೆಪಿಯ ನಾಯಕರು ಮದುವೆಯಲ್ಲಿ ಪಾಲ್ಗೊಂಡು 'ಕೇಸರಿಬಾತ್' ಅನ್ನು ಮೆಲುಕುಹಾಕಿದರು ಅಂದರೆ, ಅದರ ಹಿಂದೆ ಅದೇನೋ ಗಮ್ಮತ್ತು ಇರಬೇಕಲ್ಲವೇ?!

ನಾರದರ ಈ 'ಗೆಸ್ಸಿಂಗು' ಕರೆಕ್ಟು ಕಣ್ರೀ! ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವನ್ನು ಅದರದೇ ಲಾಂಛನವಾದ ಪೊರಕೆಯಿಂದ ಗುಡಿಸಿ ಗುಂಡಾಂತರ ಮಾಡಿದ ನಂತರ, ಕೇಸರಿ ಪಕ್ಷದ ಕಲಿಗಳೀಗ ಪಂಜಾಬ್‌ನತ್ತ ಲೈನು ಹೊಡೆಯುತ್ತಿರುವುದರಿಂದ ಬಾದಲ್ ಅವರು ಬಿಜೆಪಿ ಜತೆಗೆ ಕೂಡಿಕೆ ಮಾಡಿಕೊಳ್ಳಲು ತವಕಿಸುತ್ತಿದ್ದಾರಂತೆ!

ಆದರೆ, ರೈತ ಪ್ರತಿಭಟನೆಗಳು ಭುಗಿಲೆದ್ದಿದ್ದಂಥ ನಿರ್ಣಾಯಕ ಘಟ್ಟದಲ್ಲಿ ಸುಖಬೀರ್ ಸಿಂಗ್ ಬಾದಲ್‌ರಿಂದ ತಾವು ಕೊಂಚ ಪ್ರತಿರೋಧವನ್ನು ಎದುರಿಸಬೇಕಾಗಿ ಬಂದಿದ್ದನ್ನು ನೆನಪಿಸಿಕೊಂಡಿರುವ ಬಿಜೆಪಿ ವರಿಷ್ಠರು, ಈ ವಿಷಯದಲ್ಲಿ 'ಅಳೆದು-ಸುರಿದು' ಮಾಡಿದ ನಂತರವಷ್ಟೇ ತೀರ್ಮಾನಕ್ಕೆ ಬರ್ತಾರೆ ಎಂಬುದು ನಾರದರ ಅಭಿಪ್ರಾಯ.

ಕಮ್ಯುನಿಸಂನ ಸೋಲು ಮತ್ತು ಸಿದ್ಧಾಂತಗಳ ಇತಿಮಿತಿ



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಕೆಲ ವಿಷಯಗಳಲ್ಲಿ ಕಾಲ ನಿಂತಲ್ಲೇ ನಿಂತುಬಿಡುತ್ತದೆ. ಇತ್ತೀಚೆಗೆ ಒಮಾನ್ ದೇಶದ ಮಸ್ಕತ್‌ನಲ್ಲಿ ಬಹುಮುಖ ಪ್ರತಿಭೆ ರಾಮ ಮಾಧವ್ ಹಾಗೂ ಒಮಾನ್ ಸರಕಾರ ಜಂಟಿಯಾಗಿ ಹಿಂದೂ ಮಹಾಸಾಗರದ ಬಗ್ಗೆ ಒಂದು ವಿಶಿಷ್ಟ ವಿಚಾರ ಸಂಕಿರಣವನ್ನು ಆಯೋಜಿಸಿದ್ದರು. ಅದರಲ್ಲಿ ವಿಯೆಟ್ನಾಮ್‌ನ ವಿದೇಶಾಂಗ ಸಚಿವರನ್ನು ಭೇಟಿಯಾಗಿದ್ದೆ. ಆಗ 1960ರ ದಶಕದ ಜಾಗತಿಕ ದುರಂತವೆಂದು ಪರಿಗಣಿಸಲ್ಪಡುವ ಹಾಗೂ 1970ರ ದಶಕದಲ್ಲಿ ಮಹಾಕಾವ್ಯವೇ ಆಗಿಹೋದ ವಿಯೆಟ್ನಾಮ್ ಯುದ್ಧದ ಕುರಿತ ಅನೇಕ ಸಂಘರ್ಷಗಳು ನೆನಪಿನ ಪಡಸಾಲೆಯಲ್ಲಿ ಹಾದುಹೋದವು. ಆ ಯುದ್ಧದಲ್ಲಿ ಅಮೆರಿಕದ ಸರಕಾರ ಎರಡು ರೀತಿಯಲ್ಲಿ ಇಕ್ಕಟ್ಟಿಗೆ ಸಿಲುಕಿತ್ತು. ಒಂದು- ಅಮೆರಿಕದಲ್ಲೇ ವಿಯೆಟ್ನಾಮ್ ಪರ ಹೋರಾಟಗಳು ನಡೆಯುತ್ತಿದ್ದವು. ಎರಡು- ವಿಯೆಟ್ನಾಮಿಗಳು ಅಪ್ರತಿಮ ಆತ್ಮವಿಶ್ವಾಸ ಮತ್ತು ಕೆಚ್ಚೆದೆಯ ಧೈರ್ಯದಿಂದ ಹೋರಾಡಿ ಅಮೆರಿಕವನ್ನು ಕಂಗೆಡಿಸಿದ್ದರು. ಆ ಯುದ್ಧದ ಮೂಲಕ 20ನೇ ಶತಮಾನದಲ್ಲಿ ತಾಕತ್ತು ಎಂಬ ಪದದ ಅರ್ಥವನ್ನೇ ವಿಯೆಟ್ನಾಮ್ ಮರುವ್ಯಾಖ್ಯಾನ ಮಾಡಿತ್ತು. ನಾನಾಗ ಕಾಲೇಜಿನಲ್ಲಿ ಓದುತ್ತಿದ್ದೆ. ವಿಯೆಟ್ನಾಮ್‌ನ ಧೈರ್ಯ ಮತ್ತು ಸಾಹಸಗಳು ನನ್ನ ಆಂತರ್ಯವನ್ನು ಇನ್ನಿಲ್ಲದಂತೆ ಕಲಕಿದ್ದವು. ಬಾಲ್ಯದಿಂದ ಯೌವನಕ್ಕೆ ಕಾಲಿಡುತ್ತಿದ್ದ ನಾನು, ಮನುಷ್ಯನ ಬದುಕಿನ ಆ ಮಹತ್ವದ ರೂಪಾಂತರದ ಸಮಯದಲ್ಲಿ ವಿಯೆಟ್ನಾಮ್ ಯುದ್ಧವನ್ನು ತುಂಬಾ ಭಾವುಕವಾಗಿ ತೆಗೆದುಕೊಂಡಿದ್ದೆ. 1967ರಿಂದ 1970ರ ನಡುವಿನ ಮೂರು ವರ್ಷಗಳ ಕಾಲ ಕೊಲ್ಕತ್ತಾದ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿಯೆಟ್ನಾಮ್ ಯುದ್ಧದ ಕುರಿತಾದ ಹೋರಾಟಗಳಿಂದಾಗಿ ತರಗತಿಗಳೇ ನಡೆಯುತ್ತಿರಲಿಲ್ಲ. ಕಾಲೇಜು ಹೆಚ್ಚುಕಮ್ಮಿ ಬಂದ್ ಆಗಿತ್ತು. ಅಲ್ಲಿನ ವಿದ್ಯಾರ್ಥಿಯಾಗಿದ್ದ ನಾನು ಕೂಡ ಯುದ್ಧದಲ್ಲಿ ಮನಸ್ಸು ಮುಳುಗಿಸಿಕೊಂಡಿದ್ದೆ. ಆ ಸಮಯದಲ್ಲಿ ಕಾಲೇಜಿನ ಒಂದೊಂದು ಗೋಡೆಯ ಮೇಲೂ ವಿಯೆಟ್ನಾಮ್ ಪರವಾದ ಬಂಗಾಳಿ ಘೋಷಣೆಗಳು ರಾರಾಜಿಸುತ್ತಿದ್ದವು. ಅವುಗಳಲ್ಲೊಂದು ಘೋಷಣೆ ಇಂದಿಗೂ ನನಗೆ ಚೆನ್ನಾಗಿ ನೆನಪಿದೆ- 'ಅಮರ್ ನಾಮ್, ತೋಮರ್ ನಾಮ್, ಶೋಬರ್ ನಾಮ್ ವಿಯೆಟ್ನಾಂ!' ನನ್ನ ಹೆಸರು, ನಿನ್ನ ಹೆಸರು, ಎಲ್ಲಾ ಹೆಸರು ವಿಯೆಟ್ನಾಮ್ ಎಂಬುದು ಇದರರ್ಥ. ಬಂಗಾಳಿಯಲ್ಲಿ ಸುಂದರವಾದ ಪ್ರಾಸದ ಕಾರಣಕ್ಕೆ ಇದು ದೊಡ್ಡ ಹಿಟ್ ಆಗಿತ್ತು.

ವಿಯೆಟ್ನಾಮ್ ಕುರಿತಾದ ಇನ್ನೊಂದು ಅಳಿಸಲಾಗದ ನೆನಪು ನನ್ನೊಳಗಿದೆ. ಯುದ್ಧದ ಕೊನೆಯಲ್ಲಿ 1975ರ ಏಪ್ರಿಲ್ 30ರಂದು ದಿನಪತ್ರಿಕೆಗಳಲ್ಲಿ ಒಂದು ಕಪ್ಪು ಬಿಳುಪಿನ ಫೋಟೋ ಪ್ರಿಂಟ್ ಆಗಿತ್ತು. ವಿಯೆಟ್ನಾಮ್‌ನ ಸೈಗಾನ್ ನಗರದಲ್ಲಿರುವ ಅಮೆರಿಕನ್ ದೂತಾವಾಸದ ಟೆರೇಸ್‌ನಿಂದ ಅಮೆರಿಕದ ಸೇನೆಯ ಕೊನೆಯ ಹೆಲಿಕಾಪ್ಟರ್ ಆಗಸಕ್ಕೆ ನೆಗೆಯಲು ಸಜ್ಜಾಗಿ ನಿಂತಿದ್ದ ಚಿತ್ರವದು. ಆ ಹೆಲಿಕಾಪ್ಟರ್ ಟೇಕಾಫ್ ಆದ ತಕ್ಷಣ ದಶಕಗಳ ಕಾಲ ನಡೆದಿದ್ದ ವಿಯೆಟ್ನಾಮ್ ಯುದ್ಧ ಅಂತ್ಯಗೊಂಡಿತ್ತು. ಆ ಕ್ಷಣದಲ್ಲೇ ಇತಿಹಾಸದ ಪುಸ್ತಕದಲ್ಲಿ ದೊಡ್ಡ ಅಧ್ಯಾಯವೊಂದು ಮುಗಿದು, ಲಕ್ಷಾಂತರ ಹೊಸ ಅಧ್ಯಾಯಗಳು ಆರಂಭಗೊಂಡವು. ವಿಯೆಟ್ನಾಮ್ ಬಗ್ಗೆ 1972ರಲ್ಲಿ ಅದ್ಭುತವಾದ ಪುಸ್ತಕವೊಂದು ಬಂದಿದೆ. ಯುದ್ಧ ಮುಗಿಯುವುದಕ್ಕೂ ಮೂರು ವರ್ಷ ಮೊದಲೇ ಆ ಪುಸ್ತಕ ಪ್ರಕಟವಾಯಿತು. ಆ ಸಮಯಕ್ಕಾಗಲೇ ಅಮೆರಿಕಕ್ಕೆ ತಾನು ಸೋತಿರುವುದು ಗೊತ್ತಾಗಿತ್ತು, ಆದರೆ ಅಲ್ಲಿನ ಸರಕಾರಕ್ಕೆ ಅದನ್ನು ಹೇಗೆ ಒಪ್ಪಿಕೊಳ್ಳುವುದು ಎಂಬುದು ಗೊತ್ತಿರಲಿಲ್ಲ. ಒಪ್ಪಿಕೊಂಡರೆ ಮರ್ಯಾದೆ ಹೋಗುತ್ತಿತ್ತು. ಡೇವಿಡ್ ಹಾಲ್ಬರ್‌ಸ್ಟಾಮ್ ಬರೆದ 'ದಿ ಬೆಸ್ಟ್ ಆ್ಯಂಡ್ ದಿ ಬ್ರೈಟೆಸ್ಟ್' ಪುಸ್ತಕದಲ್ಲಿ ಹೇಗೆ ಅಮೆರಿಕದ ಬೌದ್ಧಿಕ ವರ್ಗದ ಪ್ರಮುಖ ಚಿಂತಕರು ಒಳ್ಳೆಯ ಉದ್ದೇಶವೆಂಬ ಅಪಾಯಕಾರಿ ನೆಪದ ಆಮಿಷಕ್ಕೆ ಒಳಗಾಗಿ ಅಗಾಧ ಶಕ್ತಿಯ ಮಿಲಿಟರಿಯನ್ನು ವಿಷದ ಸಮುದ್ರಕ್ಕೆ ಇಳಿಸಿ ಅಲ್ಲಿನ ನೀರನ್ನು ಜಗತ್ತಿಗೆಲ್ಲಾ ಉಕ್ಕಿ ಹರಿಯುವಂತೆ ಮಾಡುವ ಮೂಲಕ ದೊಡ್ಡ ಅಧ್ವಾನ ಎಬ್ಬಿಸಿದರು ಎಂಬುದನ್ನು ಬಹಳ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾನೆ. ಹೆಚ್ಚುಕಮ್ಮಿ ಅರ್ಧ ಶತಮಾನದ ಕಾಲ ನಡೆದ ಚಿಂತನ ಮಂಥನ ಮತ್ತು ನಂತರ ನಡೆದ ಸೇನೆಯ ಹಿಂತೆಗೆತದಿಂದ ಕೊನೆಗೆ ಉಂಟಾದ ಪರಿಣಾಮವಾದರೂ ಏನು? ಮಾನವತೆಯ ಅಣಕ. ಅಷ್ಟೆಲ್ಲಾ ಮಾಡಿ ಅಮೆರಿಕ ತನ್ನನ್ನೇ ತಾನು ಕೆಳಕ್ಕೆ ಬೀಳಿಸಿಕೊಂಡಿತ್ತು.

ಆದರೆ, ಆಗಲೂ ಸೂಪರ್ ಪವರ್ ಆಗಿದ್ದ ಅಮೆರಿಕ ಹೇಗೋ ಬಚಾವಾಯಿತು. ತಾನೇ ಮೈಮೇಲೆ ಎಳೆದುಕೊಂಡಿದ್ದ ಭಾನಗಡಿಯಿಂದ ಅಮೆರಿಕವನ್ನು ಅಲ್ಲಿನ ಪ್ರಜಾಸತ್ತಾತ್ಮಕ ಸಂಸ್ಥೆಗಳು ಪಾರುಮಾಡಿದವು ಎಂದು ಹೇಳುವುದೇ ಹೆಚ್ಚು ಸರಿ. ಆ ಸಂಸ್ಥೆಗಳಲ್ಲಿ ಎಂಥ ಗಾಯವನ್ನು ಬೇಕಾದರೂ ಗುಣಪಡಿಸುವಂಥ ಇಂಜೆಕ್ಷನ್ ನೀಡುವ ಡಾಕ್ಟರ್‌ಗಳಿದ್ದರು. ಆದರೆ ಕೆಲವೊಮ್ಮೆ ಗೆಲುವು ಕೂಡ ಸೋಲಿನಷ್ಟೇ ಸಮಸ್ಯೆಗಳನ್ನು ತಂದೊಡ್ಡಬಹುದು. ಅಮೆರಿಕದ ಸೈದ್ಧಾಂತಿಕ ಹಾಗೂ ಮಿಲಿಟರಿ ಶತ್ರುವಾದ ಸೋವಿಯತ್ ಯೂನಿಯನ್ ಎರಡನೇ ವಿಶ್ವ ಮಹಾಯುದ್ಧದ ಬಳಿಕ ಜಗತ್ತಿನ ಬಹು ಭಾಗಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಮೆರೆಯುತ್ತಿತ್ತು. ಅಮೆರಿಕದ ವಿಯೆಟ್ನಾಮ್ ಸಾಹಸವನ್ನು ನೋಡಿದ ಸೋವಿಯತ್ ಯೂನಿಯನ್‌ಗೆ ತನಗೂ ಒಂದು 'ವಿಯೆಟ್ನಾಮ್' ಬೇಕು ಅನ್ನಿಸಿತು. ದುರಹಂಕಾರ ಯಾವುದೇ ಜನಾಂಗದ ಸೊತ್ತಲ್ಲ. ಸೈಗಾನ್‌ನಿಂದ ಅಮೆರಿಕದ ಕೊನೆಯ ಹೆಲಿಕಾಪ್ಟರ್ ಪುರ್ರನೆ ಹಾರಿಹೋದ ಐದು ವರ್ಷಗಳ ನಂತರ ಮಾಸ್ಕೋದ ಸೇನೆಗಳು ಅಫ್ಘಾನಿಸ್ತಾನದ ಮೇಲೆ ದಾಳಿ ನಡೆಸಿದವು. ಅದರಿಂದ ಆಗಿದ್ದೇನು? ತನ್ನ ಆರ್ಥಿಕ ದಾರಿದ್ರ್ಯವೂ ರಾಷ್ಟ್ರೀಯ ಅಸ್ಥಿರತೆಯೂ ಒಂದೇ ಅಲ್ಲ ಎಂಬ ಪಾಠವನ್ನು ರಷ್ಯಾ ಕಲಿಯಿತು. 1980ರ ದಶಕವಿಡೀ ಅಫ್ಘಾನಿಸ್ತಾನದಲ್ಲಿನ ದುಸ್ಸಾಹಸಗಳಲ್ಲೇ ಕಳೆದುಹೋಯಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲವು ಗಾಯಗಳು ಕ್ರಮೇಣ ತನ್ನಿಂತಾನೇ ಗುಣವಾಗುತ್ತವೆಯಲ್ಲಾ ಆ ರೀತಿಯ ಸ್ವಯಂ ಗುಣಪಡಿಸಿಕೊಳ್ಳುವ ಶಕ್ತಿ ಸೋವಿಯತ್ ಯೂನಿಯನ್‌ಗೆ ಇರಲಿಲ್ಲ. ಯಾರಿಗಾದರೂ ಲಿಯೋನಿಡ್ ಬ್ರೆಜ್ನೇವ್ ಎಂಬ ಗಂಟಿಕ್ಕಿದ ಹುಬ್ಬುಗಳ, ದೊಡ್ಡ ಗಲ್ಲದ ವ್ಯಕ್ತಿಯ ನೆನಪುಂಟೆ? ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷದ (ಸಿಪಿಎಸ್‌ಯು) ಪ್ರಧಾನ ಕಾರ್ಯದರ್ಶಿಯಾಗಿದ್ದ ಅವರು ಹೆಚ್ಚುಕಮ್ಮಿ ಸೋವಿಯತ್ ಯೂನಿಯನ್ ಸಂಸ್ಥಾಪಕನಾದ ಜೋಸೆಫ್ ಸ್ಟಾಲಿನ್‌ನಷ್ಟೇ ಕಾಲ ಅಧಿಕಾರ ನಡೆಸಿ, ಕಾರ್ಲ್ ಮಾರ್ಕ್ಸ್ ಹಾಗೂ ವ್ಲಾದಿಮಿರ್ ಲೆನಿನ್ ಅವರ ರಾಜಕೀಯ ಪರಂಪರೆಯನ್ನೇ ನಾಶಗೊಳಿಸಿದವರು. 1975ರಲ್ಲಿ ವಿಯೆಟ್ನಾಮ್ ಯುದ್ಧ ಮುಗಿದಾಗ ರಷ್ಯಾ ಮತ್ತು ಚೀನಾ ದೇಶಗಳು ಅದು ಕಮ್ಯುನಿಸ್ಟರ ವಿಜಯ ಎಂದು ಪ್ರಚಾರ ಮಾಡಿದ್ದವು. ವಾಸ್ತವವಾಗಿ ಅದು ನಿಜವಲ್ಲ. ಅಮೆರಿಕವನ್ನು ಸೋಲಿಸಿದ್ದು ವಿಯೆಟ್ನಾಮ್‌ನ ರಾಷ್ಟ್ರೀಯತೆಯೇ ಹೊರತು ಕಮ್ಯುನಿಸ್ಟ್ ಅಂತಾರಾಷ್ಟ್ರೀಯತೆ ಅಲ್ಲ. 1975ರಲ್ಲಿ ಕಮ್ಯುನಿಸ್ಟ್ ಶಕ್ತಿಗಳಿಗೆ ಗೊತ್ತಿಲ್ಲದೆ ಇದ್ದ ವಿಷಯ ಏನೆಂದರೆ ಅವರ ಸಿದ್ಧಾಂತವು ತ್ಯಾಜ್ಯವನ್ನು ಉತ್ಪಾದಿಸುತ್ತಿತ್ತೇ ಹೊರತು ರಕ್ತವನ್ನು ಉತ್ಪಾದಿಸುತ್ತಿರಲಿಲ್ಲ. ಕಮ್ಯುನಿಸ್ಟ್ ಸಿದ್ಧಾಂತದ ತಾಕತ್ತಿನ ಬಗ್ಗೆ ಇದ್ದ ಭ್ರಮೆ ಕೊನೆಯ ಹೆಲಿಕಾಪ್ಟರ್ ವಿಯೆಟ್ನಾಮ್‌ನಿಂದ ಹಾರಿದ ನಾಲ್ಕು ವರ್ಷಗಳ ಬಳಿಕ ಮತ್ತೊಮ್ಮೆ ಜಗಜ್ಜಾಹೀರಾಯಿತು. 1979ರ ಫೆಬ್ರವರಿ 17ರಂದು ವಿಯೆಟ್ನಾಮ್ ಮೇಲೆ ಚೀನಾ ದಾಳಿ ನಡೆಸಿತು. ಲಾವೋ ಸಾಯ್, ಸಾವೋ ಬಾಂಗ್ ಮತ್ತು ಲಾಕ್ ಬಿನ್ ಎಂಬ ಮೂರು ಪ್ರದೇಶಗಳ ಮೇಲೆ ದಾಳಿ ನಡೆಸಿ ಕಾಂಬೋಡಿಯಾದಲ್ಲಿದ್ದ ಕ್ರೂರಿ ಕ್ಮೇರ್ ರೋಗ್‌ನ ಆಡಳಿತವನ್ನು ಕಿತ್ತೆಸೆದಿದ್ದಕ್ಕೆ ವಿಯೆಟ್ನಾಮ್‌ಗೆ ಶಿಕ್ಷೆ ನೀಡಲು ಮುಂದಾಯಿತು. ಆದರೆ, ವಿಯೆಟ್ನಾಮ್‌ನ ರಕ್ಷಣಾ ಸಚಿವ ಜನರಲ್ ವೋ ನುಂಗುಯೆನ್ ಜಿಯಾಪ್ ಅಮೆರಿಕ ಮತ್ತು ಫ್ರಾನ್ಸ್ ದೇಶಗಳು ಬಲಾಢ್ಯ ಜಾಗತಿಕ ಶಕ್ತಿಗಳಾಗಿ ಮೆರೆಯುತ್ತಿದ್ದಾಗಲೇ ಆ ದೇಶಗಳನ್ನು ಸೋಲಿಸಿದ್ದರು ಎಂಬುದನ್ನು ಚೀನಾ ಮರೆತಿತ್ತು. ಕೇವಲ 27 ದಿನಗಳಲ್ಲಿ ವಿಯೆಟ್ನಾಮ್ ಸೇನೆಯ ಅಬ್ಬರದೆದುರು ಚೀನಾ ಬಾಲ ಮುದುರಿಕೊಂಡು ವಾಪಸ್ ಹೋಗಬೇಕಾಯಿತು. ವಿಯೆಟ್ನಾಮ್‌ನ ಕಿರೀಟಕ್ಕೆ ಗರಿಯಿಟ್ಟಂತೆ ಬೀಜಿಂಗ್ ದೂಸರಾ ಮಾತನಾಡದೆ ಸೋಲು ಕೂಡ ಒಪ್ಪಿಕೊಂಡಿತು. ಚೀನಿಯರಿಗೆ ವಿದಾಯ ಹೇಳುವಾಗ ವಿಯೆಟ್ನಾಮಿಗಳು ವಿನಮ್ರವಾಗಿಯೇ ಇದ್ದರು.

ಯುದ್ಧ ಮುಗಿದ 45 ವರ್ಷಗಳ ಬಳಿಕ ಈಗ ನಾನಿದನ್ನು ಬರೆಯುವಾಗ ವಿಯೆಟ್ನಾಮ್ ಸಂಸತ್ತು ವಿಯೆಟ್ನಾಮ್ ಮತ್ತು ಚೀನಾ ನಡುವೆ ರೈಲ್ವೆ ಮಾರ್ಗದ ನಿರ್ಮಾಣಕ್ಕೆ ಒಪ್ಪಿಗೆ ನೀಡಿದೆ. ಎರಡೂ ದೇಶಗಳು ಈಗ ಸೈದ್ಧಾಂತಿಕ ಹಟವಾದಿಗಳಂತೆ ವರ್ತಿಸುವುದನ್ನು ಬಿಟ್ಟು ಪಕ್ಕಾ ವ್ಯವಹಾರಸ್ಥರಂತೆ ನಡೆದುಕೊಳ್ಳುತ್ತಿವೆ.

ತಪ್ಪು ಮಾಡದವರು ಯಾರೂ ಇಲ್ಲ. ಅಜೇಯರು ಯಾರೂ ಅಲ್ಲ. ಸಿದ್ಧಾಂತಕ್ಕೆ ಸಾಕ್ಷಿ ಕಡುಬಿನಲ್ಲಿ ಕುಳಿತಿದೆ! ರಷ್ಯಾದಲ್ಲಿ ಕಮ್ಯುನಿಸಂ ಸತ್ತುಹೋಗಿದೆ. ಚೀನಾದಲ್ಲಿ ಅದು ಗೃಹ ಬಂಧನದಲ್ಲಿದೆ. ಚೀನಾದಲ್ಲಿ ಕಮ್ಯುನಿಸಂನ ಪರಿಸ್ಥಿತಿ ಎಷ್ಟು ದಯನೀಯವಾಗಿದೆ ಅಂದರೆ, ವಯಸ್ಸಾದ ತಾತಪ್ಪ ಉಸಿರಾಡಲು ಕಷ್ಟಪಡುತ್ತಾ, ಅತ್ತ ಸಾಯದೆ, ಇತ್ತ ಬದುಕಲೂ ಆಗದೆ ನರಳುತ್ತಾನಲ್ಲ, ಹಾಗಾಗಿದೆ. ಚೀನಿಯರಂತೆ ವಿಯೆಟ್ನಾಮಿಗಳು ಕೂಡ ಹೆಸರಿಗಷ್ಟೇ ಕಮ್ಯುನಿಸ್ಟರು. ಆದರೆ ಆಂತರ್ಯದಲ್ಲಿ ಎರಡೂ ದೇಶಗಳು ಸಮಾಜವಾದದ ಧೂಳು ಅಂಟಿಸಿಕೊಂಡ ಬಂಡವಾಳಶಾಹಿ ತತ್ವದ ಕಡೆಗೆ ಹೊರಳಿವೆ.

★★★

ಮಸ್ಕತ್ ಬಹಳ ಸುಂದರವಾಗಿದೆ, ಏಕೆಂದರೆ ಅಲ್ಲಿನ ಜನ ತುಂಬಾ ಶಾಂತ ಸ್ವಭಾವದವರು. ಜನರೇಕೆ ಪ್ರಶಾಂತ ಮನಸ್ಥಿತಿಯವರು ಅಂದರೆ ಅವರ ನಾಯಕರು ದೇಶವನ್ನು ರಾಜಕೀಯದಿಂದ ಸುರಕ್ಷಿತ ಅಂತರದಲ್ಲಿಟ್ಟಿರುತ್ತಾರೆ. ಭೂರಾಜಕೀಯ ವ್ಯವಸ್ಥೆಯಲ್ಲಿ ನೀವು ಭೂಗೋಳಕ್ಕೆ ಸಂಬಂಧಿಸಿದಂತೆ ಹೆಚ್ಚೇನೂ ಮಾಡಲು ಸಾಧ್ಯವಿಲ್ಲ, ಆದರೆ ರಾಜಕೀಯದಲ್ಲಿ ಸಾಕಷ್ಟು ಕೆಲಸ ಅಥವಾ ಬದಲಾವಣೆ ಮಾಡಬಹುದು. ಒಮಾನಿನ ಸುಲ್ತಾನ್ ಸಾಮ್ರಾಜ್ಯ ಯೆಮನ್‌ನ ನೆರೆರಾಷ್ಟ್ರವಾಗಿದೆ ಎಂಬುದು ನಿಮಗೆ ಗೊತ್ತಿರಲಿ.

ಎರಡು ಪ್ರದೇಶಗಳು ಒಂದೇ ರೀತಿಯಿದ್ದರೂ, ಅವೇ ಎರಡು ದೇಶವಾಗಿದ್ದಾಗ, ಆ ದೇಶಗಳು ಒಂದಕ್ಕಿಂತ ಇನ್ನೊಂದು ಬಹಳ ಭಿನ್ನವಾಗಿರಲು ಸಾಧ್ಯವೇ? ಖಂಡಿತ ಸಾಧ್ಯವಿದೆ. ಹಾಗೆ ಬದಲಾವಣೆ ತರುವ ಶಕ್ತಿಯಿರುವುದು ಅವುಗಳ ನಾಯಕರಿಗೆ.

ಒಮಾನ್ ಜನರು ಲಾಗಾಯ್ತಿನಿಂದಲೂ ಸಮುದ್ರದ ವ್ಯವಹಾರಗಳಲ್ಲಿ ನಿಸ್ಸೀಮರು. ಅವರು ಕಟ್ಟಿದ ನೌಕಾ ಸಾಮ್ರಾಜ್ಯಕ್ಕೆ ಹಲವು ಶತಮಾನಗಳ ಇತಿಹಾಸವಿದೆ. ಗ್ವದಾರ್‌ನಿಂದ ಹಿಡಿದು ಹೊರ್ಮುಜ್ ಕೊಲ್ಲಿ ಹಾಗೂ ಜಂಜಿಬಾರ್ ಕೊಲ್ಲಿಯವರೆಗೆ ಅವರು ಹೊಂದಿದ್ದ ಅಧಿಪತ್ಯವು 18ನೇ ಶತಮಾನದವರೆಗೂ ಬ್ರಿಟಿಷರ ವಸಾಹತುಶಾಹಿ ಉತ್ಸಾಹವನ್ನು ನಿಯಂತ್ರಣದಲ್ಲಿಟ್ಟಿತ್ತು. ವ್ಯಾಪಾರಿ ಹಡಗುಗಳನ್ನು ಹೊಂದಿದ್ದ ಮೊಘಲ್ ಚಕ್ರವರ್ತಿಗಳಾದ ನೂರ್ ಜಹಾನ್ ಹಾಗೂ ಷಹಜಹಾನ್ ತರಹದವರ ಆಳ್ವಿಕೆಯಲ್ಲಿ ಭಾರತವು ಒಮಾನ್ ಜತೆಗೆ ವಾಣಿಜ್ಯ ವ್ಯವಹಾರ ನಡೆಸುವ ಬಹಳ ಮುಖ್ಯ ದೇಶವಾಗಿತ್ತು. ವಸಾಹತುಶಾಹಿ ಕಾಲಕ್ಕೂ ಮುನ್ನ ಚೀನಾ ಮತ್ತು ಭಾರತ ದೇಶಗಳು ಜಗತ್ತಿನ ಉತ್ಪಾದನಾ ಹಬ್‌ಗಳಾಗಿದ್ದವು. 1750ರವರೆಗೆ ಜಾಗತಿಕ ಉತ್ಪಾದನಾ ವಲಯದಲ್ಲಿ ಚೀನಾದ ಪಾಲು ಹೆಚ್ಚುಕಮ್ಮಿ ಶೇ.30ರಷ್ಟಿತ್ತು. ಭಾರತ ಸುಮಾರು ಶೇ.23ರಷ್ಟು ಸರಕುಗಳನ್ನು ಉತ್ಪಾದಿಸುತ್ತಿತ್ತು. ಆಫ್ರಿಕಾದ ದೇಶಗಳು ಬಹುದೊಡ್ಡ ಮಾರುಕಟ್ಟೆಯಾಗಿದ್ದವು. ಒಮಾನ್ ಮತ್ತು ಜಂಜಿಬಾರ್ ಕೊಲ್ಲಿಗಳು ಭಾರತದಿಂದ ಇಟಲಿ ಹಾಗೂ ಅದರಾಚೆಗೆ ಸರಕುಗಳನ್ನು ಸಾಗಿಸಲು ಇದ್ದ ಪ್ರಮುಖ ಗೇಟ್‌ವೇ ಆಗಿದ್ದವು. ಮಸ್ಕತ್‌ನಲ್ಲಿ ನಾನೊಂದು ಪ್ರಶ್ನೆ ಎತ್ತಿದ್ದೆ. ಹಿಂದೂ ಮಹಾಸಾಗರಕ್ಕೆ ಯುರೋಪಿಯನ್ನರು ಬರುವುದಕ್ಕೂ ಮೊದಲು, ಪೋರ್ಚುಗಲ್‌ನಿಂದ ಹಿಡಿದು ಬ್ರಿಟನ್ ಮತ್ತು ಫ್ರಾನ್ಸ್‌ವರೆಗೆ ಏಕೆ ಒಂದೂ ದೊಡ್ಡ ನೌಕಾಯುದ್ಧ ನಡೆದಿಲ್ಲ? ಏಷ್ಯಾದ ದೇಶಗಳಿಗೆ ಶಾಂತಿಯುತ ವ್ಯಾಪಾರದಿಂದ ಪರಸ್ಪರ ಇಬ್ಬರಿಗೂ ಲಾಭವಿದೆ ಎಂಬುದು ಗೊತ್ತಿತ್ತು. ಆದರೆ ವಸಾಹತುಶಾಹಿಗಳು ಬಂದ ಮೇಲೆ ಲಾಭವನ್ನು ತಮ್ಮ ಕಡೆಗೆ ಮಾತ್ರ ತಿರುಗಿಸಿಕೊಳ್ಳಲು ಪ್ರಯತ್ನಿಸಿದರು.

ಅದೇನಾದರೂ ಇರಲಿ, ಯುರೋಪ್ ಉಚ್ಛ್ರಾಯಕ್ಕೆ ಹೋಗಲು ದಾರಿ ಮಾಡಿಕೊಟ್ಟ ಆರೋಪವನ್ನು ಒಬ್ಬ ಒಮಾನಿಯೇ ಹೊರಬೇಕು. ಪೋರ್ಚುಗಲ್‌ನ ವಾಸ್ಕೋ-ಡ-ಗಾಮಾ ಕೇರಳವನ್ನು ಕಂಡುಹಿಡಿದ ಎಂದು ಹೇಳುತ್ತೇವಲ್ಲವೇ? ಅದರಿಂದ ಹಣ ಹಾಗೂ ಖ್ಯಾತಿಯನ್ನೇನೋ ಅವನು ಗಳಿಸಿದ. ಆದರೆ, ಅವನ ಜತೆಗೆ ಒಮಾನಿ ನಾವಿಕ ಇಬ್ನ್ ಮಜಿದ್ ಇಲ್ಲದೆ ಇದ್ದಿದ್ದರೆ ಅವನಿಗೆ ಭಾರತವನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಭಾರತಕ್ಕೆ ದಾರಿ ತೋರಿಸಿದವನೇ ಇಬ್ನ್ ಮಜಿದ್. ಮುಂದಿನದು ಬೇರೆಯದೇ ಕತೆ.

★★★

ಕಮ್ಯುನಿಸಂ ಬಗ್ಗೆ ಹಾಗೂ ನಾನಾ ಸಿದ್ಧಾಂತಗಳ ಬಗ್ಗೆ ಚರ್ಚಿಸುವಾಗ ಇಸ್ರೇಲಿ ಸ್ನೇಹಿತರೊಬ್ಬರು ಒಂದು ಸಂಗತಿ ಹೇಳಿದರು. ಅವರ ಪ್ರಕಾರ ಯಹೂದಿಗಳು ನಮಗೆ ಮಾರ್ಕ್ಸಿಸಂ ಅನ್ನೂ ನೀಡಿದ್ದಾರೆ, ಜತೆಗೆ ಬಂಡವಾಳಶಾಹಿ ಸಿದ್ಧಾಂತವನ್ನೂ ನೀಡಿದ್ದಾರೆ. ಕಮ್ಯುನಿಸಂನ ಜನಕ ಕಾರ್ಲ್ ಮಾರ್ಕ್ಸ್ ಯಹೂದಿಯಾಗಿದ್ದ. ಮುಕ್ತ ಮಾರುಕಟ್ಟೆಯ ಬಂಡವಾಳಶಾಹಿ ಸಿದ್ಧಾಂತವನ್ನು ನೀಡಿದವನು ಸ್ಕಾಟ್‌ಲೆಂಡ್‌ನ ಆಡಂ ಸ್ಮಿತ್ ಆಗಿದ್ದರೂ, ಆ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ವಿಶ್ವಾಸಾರ್ಹ ರೀತಿಯಲ್ಲಿ ಜಾರಿಗೆ ತಂದವರು ಯಹೂದಿ ಬ್ಯಾಂಕರ್‌ಗಳು. ಅವರು ಬಂಡವಾಳ ಹೂಡಿಕೆಯಲ್ಲಿ ಪ್ರವೀಣರಾಗಿದ್ದರು. ಹೀಗಾಗಿ ಆಧುನಿಕ ಕಾಲದಲ್ಲಿ ಬಂಡವಾಳ ಹೂಡಿಕೆಯ ನಾನಾ ಮಾರ್ಗಗಳನ್ನು ಪರಿಚಯಿಸಿದರು. ಇಸ್ರೇಲಿ ಸ್ನೇಹಿತನ ವಾದಕ್ಕೆ ನಾನು ಇನ್ನೂ ಒಂದು ಅಂಶ ಸೇರಿಸಿದೆ. ಯಾವುದೇ ಸೈದ್ಧಾಂತಿಕ ವ್ಯವಸ್ಥೆಯಲ್ಲಿ ನಂಬಿಕೆಯೆಂಬುದು ಪ್ರಧಾನ ಅಂಶವಾಗುತ್ತದೆ. ಅದನ್ನು ಪ್ರಚುರಪಡಿಸಿದ ಖ್ಯಾತಿ ಇನ್ನೊಬ್ಬ ಅದ್ಭುತ ಯಹೂದಿ ವ್ಯಕ್ತಿಗೆ ಸೇರಬೇಕು. ಆತ ಪ್ರವಾದಿ ಅಬ್ರಹಾಂ. ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರಿಬ್ಬರೂ ಈತನನ್ನು ತಮ್ಮ ಪೂರ್ವಜನೆಂದು ಆದರಿಸುತ್ತಾರೆ. ಇನ್ನು, ಯಹೂದಿಯೇತರ ಪ್ರಮುಖ ಧರ್ಮಗಳು ಅಥವಾ ಸಿದ್ಧಾಂತಗಳು ಬಂದಿದ್ದು ಕೇವಲ ಭಾರತದಿಂದ. ಅವು ಹಿಂದೂ ಮತ್ತು ಬೌದ್ಧ ಧರ್ಮಗಳು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 293

ಸಮಾಚಾರ ಸಣ್ಣದಲ್ಲ

ಕೇಜ್ರಿ ಅಬಕಾರಿ ನೀತಿ: ₹2,002 ಕೋಟಿ ನಷ್ಟ



ದೆಹಲಿ: ದೆಹಲಿಯಲ್ಲಿ 2021-22ರ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿ ಸರಕಾರ ಜಾರಿಗೆ ತಂದಿದ್ದ ಹೊಸ ಅಬಕಾರಿ ನೀತಿಯ ಜಾರಿಯಿಂದಾಗಿ ದೆಹಲಿ ಸರಕಾರದ ಬೊಕ್ಕಸಕ್ಕೆ 2,002 ಕೋಟಿ ರು. ಆದಾಯ ನಷ್ಟವಾಗಿದೆ ಎಂದು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯ(ಸಿಎಜಿ) ವರದಿಯಲ್ಲಿ ಹೇಳಲಾಗಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮಂಗಳವಾರ ವಿಧಾನಸಭೆಯಲ್ಲಿ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಲೆಕ್ಕಪತ್ರ ಪರಿಶೋಧನಾ ವರದಿಯನ್ನು ಮಂಡಿಸಿದರು. ಈ ನೀತಿಯು ಒಬ್ಬ ಅರ್ಜಿದಾರರಿಗೆ 54 ಮದ್ಯ ಮಾರಾಟಗಾರರನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟಿತು. ಇದಕ್ಕೂ ಮೊದಲು, ಸರಕಾರಿ ನಿಗಮಗಳು 377 ಚಿಲ್ಲರೆ ಮಾರಾಟಗಾರರನ್ನು ನಿರ್ವಹಿಸುತ್ತಿದ್ದವು. ಅದರಲ್ಲಿ 262 ಖಾಸಗಿ ವ್ಯಕ್ತಿಗಳ ಮಳಿಗೆಗಳೂ ಸೇರಿದ್ದವು. . ಹೊಸ ಅಬಕಾರಿ ನೀತಿಯು 849 ಮಾರಾಟಗಾರರನ್ನು ಹೊಂದಿರುವ 32 ಚಿಲ್ಲರೆ ವ್ಯಾಪಾರ ವಲಯಗಳನ್ನು ಸೃಷ್ಟಿಸಿತು. ಆದರೆ 22 ಖಾಸಗಿ ಸಂಸ್ಥೆಗಳಿಗಷ್ಟೇ ಪರವಾನಗಿ ನೀಡಲಾಯಿತು. ಪಾರದರ್ಶಕ- ನ್ಯಾಯಸಮ್ಮತ ಹಂಚಿಕೆ ಇಲ್ಲವಾಯಿತು. ಪರಿಣಾಮ ವರಮಾನ ನಷ್ಟಕ್ಕೆ ಮೂಲವಾಯಿತು ಎಂದು ವರದಿಯಲ್ಲಿ ಹೇಳಲಾಗಿದೆ.

ದೆಹಲಿ: 15 ಎಎಪಿ ಶಾಸಕರ ಅಮಾನತು

ದೆಹಲಿ: ದೆಹಲಿ ವಿಧಾನಸಭೆ ಅಧಿವೇಶನದ 2ನೇ ದಿನವಾದ ಮಂಗಳವಾರ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ಭಾಷಣ ಸಂದರ್ಭ ಸದನದಲ್ಲಿ ಘೋಷಣೆ ಕೂಗಿ ಭಾಷಣಕ್ಕೆ ಅಡ್ಡಿ ಪಡಿಸಿದ್ದರಿಂದ ಪ್ರತಿಪಕ್ಷ ನಾಯಕಿ ಆತಿಷಿ, ಮಾಜಿ ಸಚಿವ ಗೋಪಾಲ್ ರೈ ಸೇರಿದಂತೆ ಆಮ್ ಆದ್ಮಿ ಪಕ್ಷದ(ಎಎಪಿ) 15 ಶಾಸಕರನ್ನು ಸ್ಪೀಕರ್ ವಿಜೇಂದರ್ ಗುಪ್ತಾ ಅವರು ದಿನದ ಮಟ್ಟಿಗೆ ಅಮಾನತುಗೊಳಿಸಿದರು. ವೀರ್‌ಸಿಂಗ್ ಧಿಂಗ್‌ನ, ಮುಖೇಶ್ ಅಹ್ಲಾವತ್, ಚೌಧರಿ ಜುಬೈರ್ ಅಹಮದ್, ಅನಿಲ್ ಝಾ, ವಿಶೇಷ್ ರವಿ ಮತ್ತು ಜರ್ನೈಲ್ ಸಿಂಗ್ ಸದನದಿಂದ ಅಮಾನತುಗೊಂಡ ಶಾಸಕರಲ್ಲಿ ಸೇರಿದ್ದಾರೆ. ಮುಖ್ಯಮಂತ್ರಿ ಕಚೇರಿಯಿಂದ ಬಿ.ಆರ್.ಅಂಬೇಡ್ಕರ್ ಭಾವಚಿತ್ರ ತೆಗೆದುಹಾಕುವ ಮೂಲಕ ಬಿಜೆಪಿ ಸಂವಿಧಾನ ರಚನಾಕಾರರಿಗೇ ಅಗೌರವ ತೋರಿದೆ ಎಂದು ಸದನ ಕಲಾಪದ ಆರಂಭದಲ್ಲೇ ಆತಿಷಿ ಆರೋಪಿಸಿದರು. ಜತೆಗೇ ಎಎಪಿ ಶಾಸಕರು ಗದ್ದಲ ಆರಂಭಿಸಿದರು.

ತ.ನಾ. ಪಟಾಕಿ ಘಟಕ ಸ್ಫೋಟಕ್ಕೆ ಮೂರು ಬಲಿ



ಧರ್ಮಪುರಿ: ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕಂಬನಲ್ಲೂರಿನ ಪಟಾಕಿ ಕಾರ್ಖಾನೆಯಲ್ಲಿ ಸೋಮವಾರ ಹಠಾತ್ ಸ್ಫೋಟವಾಗಿದ್ದು, ಸೋದರಿಯರಿಬ್ಬರು ಸೇರಿದಂತೆ ಮೂವರು ಮಹಿಳಾ ಕಾರ್ಮಿಕರು ಸಜೀವ ದಹನವಾಗಿದ್ದಾರೆ. ಚಿನ್ನದುರೈ ಒಡೆತನದ ಪರವಾನಗಿ ಪಡೆದಿದ್ದ ಪಟಾಕಿ ಸಂಗ್ರಹಣಾ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಭೀಕರ ಸ್ಫೋಟದ ತೀವ್ರತೆಗೆ ಮೂವರು ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಫೋಟದ ನಂತರ ಕಾರ್ಖಾನೆಗೆ ಬೆಂಕಿ ಹರಡಿದ್ದು, ಅಗ್ನಿಶಾಮಕ ದಳ ಬಂದು ನಂದಿಸಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಸತೀಶ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಮಹೇಶ್ವರನ್ ಭೇಟಿ ನೀಡಿ ಪರಿಶೀಲಿಸಿ, ಸಂತ್ರಸ್ತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ರಾಜ್ಯದಲ್ಲಿನ ಪಟಾಕಿ ಉದ್ಯಮದಲ್ಲಿ ಪದೇ ಪದೇ ಸ್ಫೋಟಗಳಾಗಿ ಕಾರ್ಮಿಕರ ಜೀವ ಹರಣವಾಗುತ್ತಿರುವುದಕ್ಕೆ ಕಾರ್ಮಿಕರ ವಲಯದಲ್ಲಿ ಆತಂಕ ಹೆಚ್ಚಿದೆ. ಪಟಾಕಿ ಘಟಕಗಳಲ್ಲಿ ಸರಿಯಾದ ಕ್ರಮದಲ್ಲಿ ಸುರಕ್ಷತಾ ನಿಯಮಗಳ ಪಾಲನೆ ಆಗುತ್ತಿಲ್ಲ ಎಂಬ ಆರೋಪಗಳೂ ಕೇಳಿಬಂದಿವೆ.

ಬಂಗಾಳಕೊಲ್ಲಿ: 5.1 ತೀವ್ರತೆಯ ಭೂಕಂಪ

ಕೋಲ್ಕತ್ತ: ಪಶ್ಚಿಮ ಬಂಗಾಳದ ಕಡಲ ಭಾಗ ಬಂಗಾಳಕೊಲ್ಲಿಯಲ್ಲಿ ಮಂಗಳವಾರ ನಸುಕಿನಲ್ಲಿ ರಿಕ್ಟರ್ ಮಾಪಕದಲ್ಲಿ 5.1ರಷ್ಟು ತೀವ್ರತೆಯ ಭೂಕಂಪವಾಗಿದೆ. ಕೋಲ್ಕತ್ತಾ ಮಹಾನಗರ ಸೇರಿದಂತೆ ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ ಬೆಳಗ್ಗೆ 6.10ಕ್ಕೆ ಬಂಗಾಳಕೊಲ್ಲಿ ಭಾಗದಲ್ಲಿ 91 ಕಿ.ಮೀ ಆಳದಲ್ಲಿ ಭೂಕಂಪ ಸಂಭವಿಸಿದೆ. ಯಾವುದೇ ಹಾನಿ, ಸಾವುನೋವು ವರದಿಯಾಗಿಲ್ಲ.

ವಿರಾಮ
ಪ್ರತಿ ಭಾನುವಾರ

{ನರೇಂದ್ರ ಮೋದಿ } ಪ್ರಧಾನಿ

ಅಸ್ಸಾಂ ರಾಜ್ಯ ಸ್ಟಾರ್ಟ್‌ಅಪ್‌ಗಳ ಡೆಸ್ಟಿನೇಷನ್ ಆಗುತ್ತಿದೆ. ಅಲ್ಲದೇ, ಈಶಾನ್ಯ ಭಾರತದ 'ತಯಾರಿಕಾ ಘಟಕಗಳ ವಲಯ'ವಾಗಿಯೂ ಗುರುತಿಸಿಕೊಳ್ಳಲಿದೆ. ಹೊಸ ಹೊಸ ಬಗೆಯ ಉದ್ಯಮ ಸಂಸ್ಥೆಗಳಿಗೆ ಅಮಿತ ಅವಕಾಶಗಳ ತಾಣವಾಗಿ ಪರಿವರ್ತನೆ ಕಾಣಲಿದೆ. ಇಂದಿನ 'ಅಡ್ವಾಂಟೇಜ್ ಅಸ್ಸಾಂ 2.0 ಹೂಡಿಕೆ-ಮೂಲಸೌಕರ್ಯ ಶೃಂಗಸಭೆ' ಪ್ರೇರಣಾದಾಯಕವಾಗಲಿದೆ.

ಕಟ್ಟಕಡೆಯ ಅಮೃತ ಸ್ನಾನಕ್ಕೆ 1 ಕೋಟಿ ಭಕ್ತರ ನಿರೀಕ್ಷೆ | ಪ್ರಯಾಗರಾಜ್‌ನ ಜಿಲ್ಲಾಡಳಿತದಿಂದ ಪೂರ್ವ ಸಿದ್ಧತೆ
64 ಕೋಟಿ ಭಕ್ತರಿಂದ ತ್ರಿವೇಣಿ ಸಂಗಮ ಪುಣ್ಯಸ್ನಾನ | ಒಟ್ಟು 65 ಕೋಟಿ ಭಕ್ತರ ದಾಖಲೆ ನಿರ್ಮಾಣ ಸಾಧ್ಯತೆ

ಮಹಾಶಿವರಾತ್ರಿಗೆ ಮಹಾಕುಂಭ ಸಮಾಪ್ತಿ

ಮಹಾ ಕುಂಭಮೇಳ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನ ಕಂಡುಬಂದ ದೃಶ್ಯ

ಮಹಾ ಕುಂಭಮೇಳಕ್ಕೆ ಹಣ ವೆಚ್ಚ

2025ರ ಜ.13ರಿಂದ ಫೆ.26ರವರೆಗೆ ಒಟ್ಟು 45 ದಿನಗಳ ಕಾಲದ ಮಹಾ ಕುಂಭಮೇಳದ ಆಯೋಜನೆ, ಸಾಧು-ಸಂತರು, ಗಣ್ಯರು, ವಿದೇಶದ ಪ್ರವಾಸಿಗರು, ಸಾಮಾನ್ಯ ಭಕ್ತ ಜನರಿಗಾಗಿ ವಸತಿ-ತಾತ್ಕಾಲಿಕ ಡೇರೆಗಳು, ಕುಡಿವ ನೀರು, ಶೌಚಾಲಯ, ತುರ್ತು ಚಿಕಿತ್ಸಾಲಯ ಮೊದಲಾದ ಮೂಲಸೌಕರ್ಯಗಳ ವ್ಯವಸ್ಥೆಗಾಗಿ, ಧಾರ್ಮಿಕ ವಿಧಿವಿಧಾನಗಳನ್ನು ಕೈಗೊಳ್ಳುವುದಕ್ಕಾಗಿ ಒಟ್ಟು 7382 ಕೋಟಿ ರು.ಗಳ ಅಂದಾಜು ವೆಚ್ಚದ ಬಜೆಟ್ ಅನ್ನು ಮಹಾ ಕುಂಭಮೇಳ ಆಯೋಜನಾ ಸಮಿತಿ ಸಿದ್ಧಪಡಿಸಿತ್ತು. ಒಟ್ಟು 45 ದಿನಗಳಲ್ಲಿ 45 ಕೋಟಿ ಭಕ್ತರ ಆಗಮನದ ನಿರೀಕ್ಷೆ ಮಾಡಿತ್ತು. ಆದರೆ, ಈವರೆಗೇ 64 ಕೋಟಿಗೂ ಅಧಿಕ ಭಕ್ತರಿಂದ ಪುಣ್ಯಸ್ನಾನವಾಗಿದೆ. ಇನ್ನೊಂದೆಡೆ, ಕುಂಭಮೇಳದಿಂದ ತಾತ್ಕಾಲಿಕವಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ಸೃಷ್ಟಿಯಾಗಿದೆ. ವ್ಯಾಪಾರ-ಸೇವೆಗಳು, ಆಹಾರ ಚಹಾ ಪೂರೈಕೆಯಿಂದು ಕೋಟ್ಯಂತರ ರು. ಲೆಕ್ಕದಲ್ಲಿ ಭಾರೀ ವಹಿವಾಟೂ ನಡೆದಿದೆ. ಕುಂಭಮೇಳ ಸಮಾರೋಪ ನಂತರ ನಿಖರ ಅಂಕಿ ಅಂಶ ಲಭ್ಯವಾಗುವ ನಿರೀಕ್ಷೆ ಇದೆ.

ಪ್ರಯಾಗ್‌ರಾಜ್: ಇಡೀ ವಿಶ್ವವೇ ಈಗ ಉತ್ತರ ಪ್ರದೇಶದ ಪುಣ್ಯಭೂಮಿ ಪ್ರಯಾಗ್‌ರಾಜ್‌ನತ್ತ ನೋಟ ಹರಿಸಿದೆ. ಗಂಗಾ-ಯಮುನಾ-ಸರಸ್ವತಿ(ಗುಪ್ತಗಾಮಿನಿ) ನದಿಗಳ ಸಂಗಮ ಸ್ಥಳದಲ್ಲಿ ಜ.13ರಂದು ಆರಂಭಗೊಂಡ 45 ದಿನಗಳ ಮಹಾ ಕುಂಭಮೇಳ ಮಹಾ ಶಿವರಾತ್ರಿಯ ದಿನವಾದ ಫೆ.26ರ ಬುಧವಾರ ಸಮಾರೋಪಗೊಳ್ಳಲಿದೆ.

ಮಹಾ ಶಿವರಾತ್ರಿಯ ಪವಿತ್ರ ದಿನದಂದು 1 ಕೋಟಿಗೂ ಅಧಿಕ ಭಕ್ತರು ಮಹಾಕುಂಭ ಮೇಳಕ್ಕೆ ಭೇಟಿ ನೀಡಿ ತ್ರಿವೇಣಿ ಸಂಗಮದಲ್ಲಿ ಅಮೃತ ಸ್ನಾನ ಮಾಡುವ ನಿರೀಕ್ಷೆ ಇದೆ.

ಈ ಬಾರಿಯ ಮಹಾ ಕುಂಭಮೇಳದಲ್ಲಿನ ಕಟ್ಟಕಡೆಯ ಅಮೃತ ಸ್ನಾನ ಮಾಡಲು ಕೋಟ್ಯಂತರ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡಲು ಉತ್ತರ ಪ್ರದೇಶ ರಾಜ್ಯ ಸರಕಾರ ವಿಶೇಷ ವ್ಯವಸ್ಥೆಗಳನ್ನು ಸಿದ್ಧ ಮಾಡುತ್ತಿದೆ. ಎಲ್ಲಾ ಭಕ್ತರೂ ತ್ರಿವೇಣಿ ಸಂಗಮ ಸ್ಥಳವನ್ನೇ ಗುರಿಯಾಗಿರಿಸಿ ಒಮ್ಮೆಲೇ ಧಾವಿಸಿದರೆ ಕಾಲ್ತುಳಿತವಾಗುತ್ತದೆ ಎಂದೇ ನಿಗದಿತ ಮಾರ್ಗಗಳಿಂದ ಪ್ರಯಾಗ್‌ರಾಜ್ ಪ್ರವೇಶಿಸುವ ಭಕ್ತರಿಗೆ ಸ್ನಾನ ಘಟ್ಟಗಳನ್ನು ಗುರುತಿಸಿ ನಿಗದಿಪಡಿಸಲಾಗಿದೆ. ಆಯಾ ಮಾರ್ಗದ ಭಕ್ತರು ನಿಗದಿಪಡಿಸಿದ ಘಟ್ಟದಲ್ಲೇ ಅಮೃತಸ್ನಾನ ಕೈಗೊಳ್ಳಬೇಕು. ಎಲ್ಲರೂ ಒಂದೇ ಕಡೆಗೆ ನುಗ್ಗಬಾರದು. ನಿಯಮಗಳನ್ನು ಪಾಲಿಸಬೇಕು, ಅಧಿಕಾರಿಗಳ ಸೂಚನೆ ಅನುಸರಿಸಿ ಸಹಕರಿಸಬೇಕು ಎಂದು ಜಿಲ್ಲಾಡಳಿತ ಮನವಿ ಮಾಡಿದೆ.

ಈ ಯೋಜನೆಯ ಭಾಗವಾಗಿಯೇ ಜಿಲ್ಲಾಡಳಿತದ ಅಧಿಕಾರಿಗಳು ಲಖನೌ ಮತ್ತು ಪ್ರತಾಪ್‌ಗಢದಿಂದ ಬರುವ ಯಾತ್ರಾರ್ಥಿಗಳಿಗೆ ಫಾಫಮೌ ಘಾಟ್ ಗೊತ್ತುಪಡಿಸಿದ್ದಾರೆ. ಅದೇ ರೀತಿ ರೇವಾನ್, ಬಂದಾ, ಚಿತ್ರಕೂಟ ಮತ್ತು ಮಿರ್ಜಾಪುರ ಕಡೆಯಿಂದ ಬರುವ ಭಕ್ತರಿಗೆ ಅರೈಲ್ ಘಾಟ್ ಕಾಯ್ದಿರಿಸಿದ್ದಾರೆ. ಕೌಶಂಬಿ ಕಡೆಯಿಂದ ಬರುವವರಿಗಾಗಿ ಸಂಗಮ್ ಘಾಟ್ ನಿಗದಿಪಡಿಸಲಾಗಿದೆ.

ಮಹಾ ಶಿವರಾತ್ರಿಯ ದಿನವೇ ಕುಂಭಮೇಳ ಸಮಾಪ್ತಿಗೊಳ್ಳುತ್ತಿರುವುದರಿಂದ ಭಕ್ತರಿಗೆ ಶಿವನ ಪೂಜೆ-ಜಾಗರಣೆಗೆ ಅನುವಾಗುವಂತೆ ಪ್ರಯಾಗ್ ರಾಜ್ ನಗರದ ಎಲ್ಲಾ ಶಿವ ದೇವಾಲಯಗಳಿಗೂ ಭಕ್ತರ ಭೇಟಿಗೆ ಅವಕಾಶ ಮಾಡಿಕೊಡಲಾಗಿದೆ. ದೇವಸ್ಥಾನಗಳ ಬಳಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ.

ಈ ವರೆಗೆ 64 ಕೋಟಿ ಭಕ್ತರ ಭೇಟಿ

ಇದೇ ವರ್ಷದ ಜನವರಿ 13 ರಂದು ಮಹಾಕುಂಭಮೇಳ ಪ್ರಾರಂಭವಾಗಿದ್ದು, ಮೌನಿ ಅಮಾವಾಸ್ಯೆ ಸೇರಿದಂತೆ ಕಳೆದ 44 ದಿನಗಳಲ್ಲಿ ದೇಶ-ವಿದೇಶದ, ವಿವಿಧ ಧರ್ಮ-ನಂಬಿಕೆಗಳ, ವಿವಿಧ ವರ್ಣ-ಭಾಷೆಯ 64 ಕೋಟಿಗೂ ಅಧಿಕ ಭಕ್ತರು ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡಿ ಪುನೀತ ಭಾವ ಅನುಭವಿಸಿದ್ದಾರೆ.

ಮಹಾ ಕುಂಭಮೇಳದ ಆರಂಭದಲ್ಲಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಈ ಕಾರ್ಯಕ್ರಮಕ್ಕೆ 45 ಕೋಟಿಗೂ ಹೆಚ್ಚು ಭಕ್ತರು ಆಗಮಿಸುತ್ತಾರೆ ಎಂದು ಅಂದಾಜಿಸಿದ್ದರು, ಫೆಬ್ರವರಿ 11 ರ ವೇಳೆಗೆ ಈ ಮೈಲಿಗಲ್ಲು ಸಾಧಿಸಲಾಯಿತು. ಮುಂದಿನ ಮೂರು ದಿನಗಳಲ್ಲಿ ಆ ಸಂಖ್ಯೆ 50 ಕೋಟಿ ದಾಟಿ ಈಗ 64 ಕೋಟಿಗೆ ಮುಟ್ಟಿದೆ.

ಎಲ್ಲಾ ಮಾರ್ಗ ಪ್ರಯಾಗದತ್ತ!

ವಿಶ್ವದ ಮಾನವ ಇತಿಹಾಸದಲ್ಲಿಯೇ ಅತ್ಯಧಿಕ ಸಂಖ್ಯೆಯ ಭಕ್ತರನ್ನು ಸೆಳೆದ ಮಹಾ ಕುಂಬಮೇಳದ ಭಾಗವಾಗಲು ಮತ್ತೊಮ್ಮೆ ಕೋಟಿ ಭಕ್ತರ ದಂಡು ಬಸ್, ಕಾರು, ಬೈಕ್, ವಿಮಾನ, ರೈಲು, ದೋಣಿ, ನಡಿಗೆ ಸೇರಿ ಎಲ್ಲಾ ಮಾರ್ಗಗಳಿಂದಲೂ ಪ್ರಯಾಗ್‌ರಾಜ್‌ನತ್ತ ಸಾಗಿಬರುತ್ತಿದೆ. ದೇಶದ ವಿವಿಧೆಡೆಯಿಂದ ಪ್ರಯಾಗ್‌ರಾಜ್‌ನತ್ತ ಅದಾಗಲೇ ಹೊರಟಿರುವ ವಿಶೇಷ ರೈಲುಗಳು, ನೂರಾರು ವಿಮಾನಗಳು ಮತ್ತು ರಸ್ತೆ ಮಾರ್ಗದಲ್ಲಿ ಸಾವಿರಾರು ವಾಹನಗಳು ಕೋಟ್ಯಂತರ ಜನರನ್ನು ಹೊತ್ತು ಸಾಗಿ ಬರುತ್ತಿವೆ. ಜ.13ರ ಪೌಶ ಪೂರ್ಣಿಮೆ, 14ರ ಮಕರ ಸಂಕ್ರಾಂತಿ, 29ರ ಮೌನಿ ಅಮಾವಾಸ್ಯೆ, ಫೆ.3ರ ವಸಂತ ಪಂಚಮಿ ಮತ್ತು 12ರ ಮಾಘ ಪೂರ್ಣಿಮೆ ದಿನಗಳಲ್ಲಿ(ಒಟ್ಟು 5) ಅಮೃತಸ್ನಾನ ವಿಧಿಗಳು ಪ್ರಯಾಗ್ ರಾಜ್‌ನ ತ್ರಿವೇಣಿ ಸಂಗಮ ಸ್ಥಳದಲ್ಲಿ ನಡೆದಿವೆ. ಈಗ 6ನೇ ಹಾಗೂ ಈ ಬಾರಿ ಮಹಾ ಕುಂಭಮೇಳದ ಕಟ್ಟಕಡೆಯ ಅಮೃತ ಸ್ನಾನಕ್ಕೆ ಫೆ.26ರ ಬುಧವಾರ ಮುಹೂರ್ತ ನಿಗದಿಯಾಗಿದೆ. ಮಹಾ ಶಿವರಾತ್ರಿ ಇರುವುದರಿಂದ ಭಕ್ತರು ಜಾಗರಣೆ ನಡೆಸುವುದರಿಂದ ಮರುದಿನ ಬೆಳಗ್ಗೆ(ಫೆ.27) ವರೆಗೂ ತ್ರಿವೇಣಿ ಸಂಗಮದಲ್ಲಿ ಅಮೃತ ಸ್ನಾನ ಮುಂದುವರಿಯಬಹುದು ಎಂದು ನಿರೀಕ್ಷಿಸಲಾಗಿದೆ.



ಕುಂಭಮೇಳಕ್ಕೆ ಆಗಮಿಸಿದ ಸಾಧು-ಸಂತರು, ಭಕ್ತರಿಗಾಗಿ ವಸತಿ, ಡೇರೆ ವ್ಯವಸ್ಥೆ ಪ್ರದೇಶದ ರಾತ್ರಿ ವೇಳೆಯ ಆಕರ್ಷಕ ದೃಶ್ಯ.

ಪ್ರಯಾಗ್ ರಾಜ್: ವಾಹನ ನಿರ್ಬಂಧ ಪ್ರದೇಶ

ಕಾಲ್ತುಳಿತ ಘಟನೆಯಿಂದ ಪಾಠ ಕಲಿತಿರುವ ಉತ್ತರ ಪ್ರದೇಶ ಸರಕಾರ, ಮಹಾ ಶಿವರಾತ್ರಿಗೆ ವಿಶೇಷ ರೀತಿಯ ಭದ್ರತಾ ವ್ಯವಸ್ಥೆ ಮಾಡಿದೆ. ಅಮೃತ ಸ್ನಾನಕ್ಕಾಗಿ ತ್ರಿವೇಣಿ ಸಂಗಮದತ್ತ ಒಮ್ಮೆಲೇ ಧಾವಿಸಿ ಬರುವ ಕೋಟ್ಯಂತರ ಭಕ್ತರಿಗೆ ಮಾರ್ಗಮಧ್ಯೆ ಅಡಚನೆ ಆಗದಂತೆ ನೋಡಿಕೊಳ್ಳುವ ಸಲುವಾಗಿ 'ಇಡೀ ಮಹಾ ಕುಂಭ ಮೇಳ ಪ್ರದೇಶ ಮತ್ತು ತ್ರಿವೇಣಿ ಸಂಗಮದ ಮಾರ್ಗ ಸಮೀಪದ ಮಾರ್ಗಗಳನ್ನು 'ವಾಹನ ಸಂಚಾರ ನಿರ್ಬಂಧ ಪ್ರದೇಶ' ಎಂದು ಜಿಲ್ಲಾಡಳಿತ ಘೋಷಿಸಿದೆ. ವಾಹನ ಸಂಚಾರವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಫೆ.25ರ ಸಂಜೆ 4ರಿಂದಲೇ ಕುಂಭಮೇಳ ಪ್ರದೇಶ ವಾಹನ ಮುಕ್ತವಾಗಲಿದೆ. ಸಂಜೆ 6 ಗಂಟೆಯಿಂದ ಪ್ರಯಾಗ್‌ರಾಜ್ ನಗರಕ್ಕೆ ವಾಹನ ಪ್ರವೇಶ ನಿರ್ಬಂಧ ಆದೇಶ ಜಾರಿಯಿರಲಿದೆ.

ಆದರೆ ಪಾಸ್‌ಗಳನ್ನು ಹೊಂದಿರುವ ವಾಹನಗಳಿಗೆ ಮಾತ್ರ ಗೊತ್ತುಪಡಿಸಿದ ನಿಲುಗಡೆ ಪ್ರದೇಶಗಳೆಡೆಗೆ ತೆರಳಲಷ್ಟೇ ಅವಕಾಶವಿರುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಯಾಗ್‌ರಾಜ್ ಸಂಪರ್ಕಿಸುವ ಪ್ರಮುಖ ಹೆದ್ದಾರಿಗಳು ಮತ್ತು ಮಾರ್ಗಗಳಲ್ಲಿ ಭಕ್ತರ ನೆರವು, ಮಾರ್ಗದರ್ಶನಕ್ಕಾಗಿ ಪೊಲೀಸರ 40 ತಂಡಗಳನ್ನು ಮೋಟಾರ್ ಬೈಕ್ ಸಮೇತ ನಿಯೋಜಿಸಲಾಗಿದೆ. ಸುಗಮ ಮತ್ತು ಸುರಕ್ಷಿತ ಸಂಚಾರಕ್ಕಾಗಿ, ಮಾರ್ಗ ಬದಲಾವಣೆಗಳನ್ನು ರಚಿಸಲಾಗಿದೆ. ಪ್ರಯಾಗ್‌ರಾಜ್ ಸಂಪರ್ಕಿಸುವ 7 ರಸ್ತೆಗಳಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರ ಮಟ್ಟದ ಅಧಿಕಾರಿಗಳೇ ಖುದ್ದಾಗಿ ಕಾರ್ಯನಿರ್ವಹಿಸಲಿದ್ದಾರೆ.

ಕೇರಳದ ಎಲ್‌ಡಿಎಫ್ ಸರಕಾರ ಪ್ರಶಂಸಿಸಿದ್ದ ತರೂರ್

ಶಶಿತರೂರ್‌ಗೆ ಕಾಂಗ್ರೆಸ್ ಸಮನ್ಸ್

ದೆಹಲಿ: ಕೇರಳದಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರದ ಅಭಿವೃದ್ಧಿ ಕ್ರಮಗಳನ್ನು ಶ್ಲಾಘಿಸಿ ಲೇಖನ ಬರೆದಿರುವ ಹಿರಿಯ ಕಾಂಗ್ರೆಸ್ ನಾಯಕ ಶಶಿತರೂರ್ ಬಗ್ಗೆ ಕಾಂಗ್ರೆಸ್‌ನ ವರಿಷ್ಠರ ವಲಯದಲ್ಲಿ ಅಸಮಾಧಾನ ಭುಗಿಲೆದ್ದಿದೆ. ಕಾಂಗ್ರೆಸ್ ಹೈಕಮಾಂಡ್ ಸಂಸದ ಶಶಿ ತರೂರ್ ಅವರಿಗೆ ಮಂಗಳವಾರ ಸಮನ್ಸ್ ಜಾರಿ ಮಾಡಿದೆ.

ಇಂಗ್ಲಿಷ್ ಪತ್ರಿಕೆಯೊಂದಕ್ಕೆ ಕೇರಳ ಸರಕಾರವನ್ನು ಪ್ರಶಂಸಿಸಿ ಲೇಖನ ಬರೆದ ಬಗ್ಗೆ ವಿವರಣೆ ನೀಡುವಂತೆ ಕಾಂಗ್ರೆಸ್ ಹೈಕಮಾಂಡ್ ಶಶಿ ತರೂರ್‌ಗೆ ಸೂಚನೆ ನೀಡಿದೆ.

ಇದಕ್ಕೂ ಮುನ್ನ, ಪಕ್ಷ ತಮ್ಮನ್ನು ಕಡೆಗಣಿಸುತ್ತಿದೆ ಎಂದು ಬೇಸರಗೊಂಡಿದ್ದ ಶಶಿ ತರೂರ್ 'ನಿಮಗೆ ನಾನು ಬೇಡವಾಗಿದ್ದರೆ ನನಗೂ ಬೇರೆ ಅವಕಾಶಗಳಿವೆ' ಎಂದು ಕಾಂಗ್ರೆಸ್ ವರಿಷ್ಠರ ವಿರುದ್ಧ ಬಹಿರಂಗವಾಗಿಯೇ ಗುಡುಗಿದ್ದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷದ ಹೊಸ ಪ್ರಧಾನ ಕಚೇರಿ 'ಇಂದಿರಾ ಭವನ'ದಲ್ಲಿ ಶುಕ್ರವಾರ ಪಕ್ಷದ ವರಿಷ್ಠರ ಸಭೆ ನಡೆಯಲಿದೆ. ಕೇರಳದಲ್ಲಿನ ಸ್ಥಳೀಯ ಸಂಸ್ಥೆ ಮತ್ತು ವಿಧಾನಸಭಾ ಚುನಾವಣೆಗೆ ಮುಂಚೆಯೇ ಆಂತರಿಕ ಕಲಹ, ಭಿನ್ನಾಭಿಪ್ರಾಯ ಶಮನಗೊಳಿಸುವ ಮಾರ್ಗಗಳನ್ನು ಸಭೆಯಲ್ಲಿ ಚರ್ಚಿಸುವ ಸಾಧ್ಯತೆಯಿದೆ. ಈ ಮಧ್ಯೆಯೇ ಶಶಿತರೂರ್ ಅವರೊಡನೆ ಚರ್ಚೆ ನಡೆಯುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಕೇರಳ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶಶಿ ತರೂರ್, ಕೋಡಿಕುನ್ನಿಲ ಸುರೇಶ್, ರಮೇಶ್ ಚೆನ್ನಿತ್ತಲ ಮತ್ತು ಕೆಪಿಸಿಸಿ ಅಧ್ಯಕ್ಷ ಕೆ.ಸುಧಾಕರನ್, ಕೇರಳ ವಿಧಾನಸಭೆ ಪ್ರತಿಪಕ್ಷ ನಾಯಕ ವಿ.ಡಿ.ಸತೀಶನ್ ಸಭೆಗೆ ಹಾಜರಾಗಲಿದ್ದಾರೆ.

ಬಿಜೆಪಿ ಸೇರುವರೇ?

ಈ ಮಧ್ಯೆ ಶಶಿತರೂರ್ ಅವರು ಕೇಂದ್ರದ ವಾಣಿಜ್ಯ ಸಚಿವ, ಬಿಜೆಪಿ ಹಿರಿಯ ಮುಖಂಡ ಪಿಯೂಶ್ ಗೋಯಲ್ ಜತೆ ಕಾಣಿಸಿಕೊಂಡಿದ್ದಾರೆ. ಮಂಗಳವಾರ ಬ್ರಿಟನ್‌ನ ವಾಣಿಜ್ಯ ಸಚಿವ ಜೋನಾಥನ್ ರೆನಾಲ್ಡ್ಸ್ ಮತ್ತು ಕೇಂದ್ರ ಸಚಿವ ಪಿಯೂಶ್ ಗೋಯಲ್ ಅವರ ಜತೆ ಇದ್ದಾಗ ಶಶಿ ತರೂರ್ ನಗು ಬೀರುತ್ತಾ ಸೆಲ್ಫಿ ತೆಗೆದಿದ್ದರು. ಆ ಫೋಟೊವನ್ನು ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಆ ನಂತರದಲ್ಲಿ, ಕಾಂಗ್ರೆಸ್ ವರಿಷ್ಠರ ಬಗ್ಗೆ ಮುನಿದಿರುವ ಸಂಸದ ಶಶಿತರೂರ್ ಸದ್ಯದಲ್ಲೇ ಬಿಜೆಪಿ ಸೇರುವ ಸಾಧ್ಯತೆ ಇದೆ ಎಂಬ ವದಂತಿಗಳು ಹರಿದಾಡಲಾರಂಭಿಸಿವೆ.

ಆಪಲ್ 16ಇ: ಅಗ್ಗದ ಐಫೋನ್

ಆಪಲ್ ಕಂಪನಿ ಹೊಸ ಹೊಸ ಉತ್ಪನ್ನಗಳನ್ನು ಪರಿಚಯಿಸುತ್ತಲೇ ಇರುತ್ತದೆ. ಈ ಬಾರಿ ಐಫೋನ್‌ಗಳ ಸರಣಿಯಲ್ಲಿ 'ಐಫೋನ್ 16ಇ' ಪರಿಚಯಿಸಿದೆ. 'ಸಿ1' ಚಿಪ್ ಒಳಗೊಂಡಿರುವ ಈ ಅತ್ಯಾಧುನಿಕ ಸ್ಮಾರ್ಟ್‌ಫೋನ್ ಬೆಲೆ: 59,999 ರು. ಇದು ಆಪಲ್ ಐಫೋನ್ ಸರಣಿಯಲ್ಲೇ ಬಲು ಅಗ್ಗದ್ದು ಎಂದು ಹೇಳಲಾಗಿದೆ.

ಐಫೋನ್ 16ಇ ವೈಶಿಷ್ಟ್ಯವೇನೆಂದರೆ

- **6.1 ಇಂಚು ಡಿಸ್‌ಪ್ಲೇ:** ಹೊಸ ವಿನ್ಯಾಸದಲ್ಲಿರುವ ಐಫೋನ್ 16ಇ, ಬಹಳ ವಿಶಾಲ ಡಿಸ್‌ಪ್ಲೇ ಸ್ಕ್ರೀನ್ ಒಳಗೊಂಡಿದೆ. ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಡಿಸ್‌ಪ್ಲೇ ಸ್ಕ್ರೀನ್ ಇದೆ. ಒಂದು ಕೋನದಲ್ಲಿ ಐಫೋನ್ 15-16 ಮಾದರಿಗೆ ಹೋಲಿಕೆ ಆಗುತ್ತದೆ.
- **ಮುಖ ನೋಡಿ ಮಣೆ:** ಐಫೋನ್ 16ಇ ಮುಖ ನೋಡಿಯೇ ಲಾಕ್ ತೆರೆದುಕೊಳ್ಳುವ ಸೌಲಭ್ಯ ಹೊಂದಿದೆ. ಇದು ಬೆರಳಚ್ಚಿನಿಂದ ತೆರೆದುಕೊಳ್ಳುವ ಲಾಕ್‌ಗಿಂತಲೂ 10 ಪಟ್ಟು ಸುರಕ್ಷಿತವಾದುದಾಗಿದೆ. ಇದರ ಫೇಸ್ ಐಡಿ ಗುರುತಿಸುವಿಕೆ ಬಹಳ ನಿಖರವಾಗಿದೆ. 10 ಲಕ್ಷದಲ್ಲಿ ಒಂದು ಲೋಪ ಕಾಣಬಹುದಾಗಿದೆ. ಅಷ್ಟರ ಮಟ್ಟಿಗೆ ನಿಖರತೆಯಿದೆ.
- **ಟೈಪ್ ಸಿ ಪೋರ್ಟ್:** ಐಫೋನ್ 16ಇ ಟೈಪ್ ಸಿ ಪೋರ್ಟ್ ಹೊಂದಿದೆ. ಎಸ್‌ಇ ಸರಣಿಯಲ್ಲಿದ್ದ ಲೈಟ್ನಿಂಗ್ ಪೋರ್ಟ್ ತೆಗೆಯಲಾಗಿದೆ. ಹಾಗಾಗಿ ಯಾವುದೇ ಟೈಪ್ ಸಿ ಪೋರ್ಟ್‌ನಲ್ಲಿ ಈ ಫೋನ್ ಚಾರ್ಜ್ ಮಾಡಬಹುದಾಗಿದೆ. ಇದರಿಂದ ಹೊರಾಂಗಣದಲ್ಲಿ ಚಾರ್ಜಿಂಗ್ ಸರಾಗವೆನಿಸುತ್ತದೆ.
- **'ಎಐ'ನಲ್ಲಿ ಪ್ರಬಲ:** ಆಪಲ್ ಕಂಪನಿ ಯದ್ದೇ ಆದ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನ ಬಳಕೆ ಇರುವುದರಿಂದ ಐಫೋನ್ 16ಇನಲ್ಲಿ 'ಎಐ' ಸಾಮರ್ಥ್ಯ ಹೆಚ್ಚಿನದಾಗಿದೆ. ಈ ತಂತ್ರಾಂಶವು ಐಒಎಸ್, 18.1 ಜತೆಗೇ ಬರಲಿದೆ. ಕೃತಕ ಬುದ್ಧಿಮತ್ತೆಯ ಸಮರ್ಥ ಸಾಧನವಾಗಿದೆ. ಇದು ಐಫೋನ್ 'ಎಸ್‌ಇ' ಸರಣಿಗೆ ಬದಲಿ ಸ್ಮಾರ್ಟ್‌ಫೋನ್ ಆಗಿದೆ. ಏಕೆಂದರೆ ಕಂಪನಿ 'ಎಸ್‌ಇ' ಸರಣಿಯನ್ನು ಕೊನೆಗೊಳಿಸಲು ಯೋಜಿಸಿದೆ.

ಗಡಿಯಲ್ಲಿ ಕನ್ನಡಿಗರ ರಣಕಹಳೆ

← ಮೊದಲಪುಟದಿಂದ

ಮರಾಠಿಗರನ್ನು ಓಲೈಕೆ ಮಾಡಲು ಮುಂದಾದರೆ ಹೋರಾಟ ಎದುರಿಸಬೇಕಾಗುತ್ತದೆ. ಗಡಿ ವಿವಾದ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿದೆ. ಇಂಥ ಸಂದರ್ಭದಲ್ಲಿಯೂ ಮರಾಠಿಗರ ಮನವಿಗೆ ಸ್ಪಂದಿಸಿ ಮರಾಠಿ ಭಾಷೆಯಲ್ಲೂ ದಾಖಲೆ ಕೊಡಲಾಗುವುದು ಎಂದು ಹೇಳಲು ನೀವು ಯಾರು? ಸರಿಯಾಗಿ ಕೆಲಸ ಮಾಡಲು ಆಗದಿದ್ದರೆ ಬಿಟ್ಟು ತೊಲಗಿ. ಕನ್ನಡಿಗರ ಭವಿಷ್ಯಕ್ಕೆ ತೊಂದರೆ ಆಗುವಂಥ ಹೆಜ್ಜೆ ಇಡಬೇಡಿ ಎಂದು ಆಗ್ರಹಿಸಿದರು.

ಮಹಾ ಸರಕಾರದ ಜತೆ ಚರ್ಚಿಸಲು ಸಿಎಸ್‌ಗೆ ಸೂಚನೆ: ದಿನದಿಂದ ದಿನಕ್ಕೆ ಬೆಳಗಾವಿ ಗಡಿಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರಕಾರದ ಮುಖ್ಯಕಾರ್ಯದರ್ಶಿಗಳಿಗೆ ಮಹಾರಾಷ್ಟ್ರ ಸರಕಾರದೊಂದಿಗೆ ಚರ್ಚಿಸಲು ಸೂಚನೆ ನೀಡಿದ್ದಾರೆ.

ಬೆಳಗಾವಿಗೆ ತೆರಳಿ ಪರಿಸ್ಥಿತಿ ಪರಿಶೀಲಿಸಿದ್ದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ಚರ್ಚಿಸಿದ ಬಳಿಕ ಮುಖ್ಯ ಕಾರ್ಯದರ್ಶಿಗಳಿಗೆ ಸಿಎಂ ಸೂಚನೆ ನೀಡಿದ್ದಾರೆ.

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ: GIMS/KLB/Tender/Diet/CR/145/2024-25/2486 ದಿನಾಂಕ:-25/02/2025

:: ಟೆಂಡರ ಪ್ರಕಟಣೆ ::

2025-26 ನೇ ಸಾಲಿಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯಲ್ಲಿ ದಾಖಲಾಗುವ ಒಳ ರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜು ಮಾಡಲು ಒಂದು ವರ್ಷಧ ಅವಧಿಗೆ ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/Diet/CR/145/2024-25, Date: 25/02/2025, DME/2024-25/SE0415, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **27-03-2025 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **15-03-2025 ಸಾಯಂಕಾಲ 5.00 ಗಂಟೆಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **ದಿನಾಂಕ:17-03-2025 ಮಧ್ಯಾಹ್ನ 12:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **28-03-2025 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **29-03-2025 11:30ಕ್ಕೆ,** 7) ಟೆಂಡರನ ಮೊತ್ತ: ರೂ. **2,56,50,000/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ.3,85,000/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252 Office Email: directorgimsgulbarga@gmail.com Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1006/ಕೆ.ಎಸ್.ಎಂ.ಸಿ.&ಎ/2024-25

ಬಿವೈವಿ ವಿರುದ್ಧ ಸಮರ ಜಾತಿ ಬೆಂಬಲದ ಮೊರೆ

← ಮೊದಲಪುಟದಿಂದ

ಆದ್ದರಿಂದ ಇದೀಗ ಯಾವುದೇ ಕಾರಣಕ್ಕೂ ವಿಜಯೇಂದ್ರ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಬಾರದು. ಒಂದು ವೇಳೆ ಲಿಂಗಾಯತರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಲು ಅವಕಾಶವಿಲ್ಲದಿದ್ದರೆ ಬೇರೆಯವರಿಗಾದರೂ ನೀಡಿ. ಆದರೆ ಯಾವುದೇ ಕಾರಣಕ್ಕೂ ವಿಜಯೇಂದ್ರ ಇರಬಾರದು ಎನ್ನುವ ಸ್ಪಷ್ಟ ನಿರ್ಣಯ ಕೈಗೊಂಡಿದ್ದಾರೆ. ಲಿಂಗಾಯತ ಸಮುದಾಯದ ನಾಯಕರ ಮೊದಲ ಸಭೆಯಲ್ಲಿ ಈ ನಿರ್ಣಯ ಕೈಗೊಂಡಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ವರಿಷ್ಠರಿಗೂ ಈ ತೀರ್ಮಾನವನ್ನು ತಿಳಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬೇರೆ ಸಮುದಾಯಕ್ಕೆ ನೀಡಿ: ಸಾಮಾನ್ಯವಾಗಿ ತಮ್ಮ ಸಮುದಾಯಕ್ಕೆ ರಾಜ್ಯಾಧ್ಯಕ್ಷ ನೀಡಿ ಎಂದು ಆಗ್ರಹಿಸುವುದು ಸ್ವಾಭಾವಿಕ. ಆದರೆ ಇದೇ ಮೊದಲ ಬಾರಿಗೆ ಯತ್ನಾಳ್ ನೇತೃತ್ವದಲ್ಲಿ ನಡೆದ ಲಿಂಗಾಯತ ಮುಖಂಡರ ಸಭೆಯಲ್ಲಿ, ಲಿಂಗಾಯತರಿಗೆ ಅವಕಾಶ ನೀಡದಿದ್ದರೂ ಪರವಾಗಿಲ್ಲ. ವಿಜಯೇಂದ್ರ ಅವರನ್ನು ಕೆಳಗಿಳಿಸಿ. ಒಬಿಸಿ ಸಮುದಾಯದ ಸುನೀಲ್ ಕುಮಾರ್ ಅಥವಾ ಕುಮಾರ್ ಬಂಗಾರಪ್ಪ, ಎಸ್‌ಸಿ ಸಮುದಾಯದ ಅರವಿಂದ ಲಿಂಬಾವಳಿ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿದರೂ ಸಮಸ್ಯೆ ಇಲ್ಲ. ಆದರೆ ಯಾವುದೇ ಕಾರಣಕ್ಕೂ ವಿಜಯೇಂದ್ರ ಅವರನ್ನು ಮಾತ್ರ ಮುಂದುವರಿಸಬೇಡಿ ಎಂದು ವರಿಷ್ಠರ ಮೇಲೆ ಒತ್ತಡ ಹೇರುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಲಪ್ರದರ್ಶನಕ್ಕೆ ಮುಂದಾದ ವಿಜಯೇಂದ್ರ: ಲಿಂಗಾಯತ ಮುಖಂಡರೆಲ್ಲ ವಿಜಯೇಂದ್ರ ವಿರುದ್ಧ ತಿರುಗುಬಿದ್ದು ಬಹಿರಂಗವಾಗಿ ಸಭೆ ನಡೆಸಿದ ಬೆನ್ನಲ್ಲೇ ಎಚ್ಚೆತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು, ಲಿಂಗಾಯತ ಸಮುದಾಯದ ಸ್ವಾಮೀಜಿಗಳನ್ನು ಸೇರಿಸಿ ಬಲಪ್ರದರ್ಶನ ಮಾಡಲು ಸಿದ್ಧತೆ ನಡೆಸಿದ್ದಾರೆ. ಈ ಹಿಂದೆ ಲಿಂಗಾಯತ ಸಮಾವೇಶದಲ್ಲಿ ಅಗತ್ಯವಿರುವಾಗ ಸಹಾಯ ಮಾಡುವಂತೆ ಮನವಿ ಮಾಡಿದ್ದ ವಿಜಯೇಂದ್ರ ಅವರು, ಇದೀಗ ಸ್ವಾಮೀಜಿಗಳ ಮೂಲಕ ಲಿಂಗಾಯತ ಸಮುದಾಯ ಈಗಲೂ ತಮ್ಮೊಂದಿಗೆ ಎನ್ನುವ ಸಂದೇಶ ರವಾನಿಸುವ ಪ್ರಯತ್ನದಲ್ಲಿದ್ದಾರೆ. ಈ ಹಿಂದೆ ಯಡಿಯೂರಪ್ಪ ವಿರುದ್ಧ ವರಿಷ್ಠರು ಕ್ರಮಕ್ಕೆ ಮುಂದಾಗಲೆಲ್ಲ ಯಡಿಯೂರಪ್ಪ ಪರವಾಗಿ ಸ್ವಾಮೀಜಿಗಳು ಧ್ವನಿ ಎತ್ತುತ್ತಿದ್ದರು. ಅದೇ ರೀತಿ ಈಗಲೂ ಅವರ ಪುತ್ರ ವಿಜಯೇಂದ್ರ ಪರವಾಗಿ ಕೆಲ ಸ್ವಾಮೀಜಿಗಳಿಂದ ಬ್ಯಾಟಿಂಗ್ ಮಾಡಿಸುವ ಪ್ರಯತ್ನವನ್ನು ವಿಜಯೇಂದ್ರ ನಡೆಸಿದ್ದಾರೆ ಎನ್ನಲಾಗಿದೆ. ಆದ್ದರಿಂದ ಮುಂದಿನ ವಾರದಲ್ಲಿಯೇ ಲಿಂಗಾಯತ ಪ್ರಮುಖ ಸ್ವಾಮೀಜಿಗಳನ್ನು ಒಂದೆಡೆ ಸೇರಿಸಿ ತಮ್ಮ ಬಲ ಪ್ರದರ್ಶನ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಕರ್ನಾಟಕದಲ್ಲಿ ಯಡಿಯೂರಪ್ಪ ಪ್ರಶ್ನಾತೀತ ನಾಯಕ. ಅಂದು ಯಡಿಯೂರಪ್ಪ ಸಿಎಂ ಆಗಲು ವೀರಶೈವ-ಲಿಂಗಾಯತ ಒಳಪಂಗಡಗಳ ಮಠಾಧೀಶರರೂ ಸೇರಿ ಎಲ್ಲ ಸಮಾಜಗಳು ಬೆಂಬಲ ಕೊಟ್ಟವು. ಈಗಾಗಲೇ ನಾವು ಕೆಲ ಮಠಾಧೀಶರನ್ನು ಸಂಪರ್ಕಿಸಿದ್ದೇವೆ. ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಸಭೆ ಮಾಡಿ ಮಠಾಧೀಶರ ಬೆಂಬಲ ಪಡೆದು, ಇಡೀ ಸಮಾಜ ಯಡಿಯೂರಪ್ಪ, ವಿಜಯೇಂದ್ರ ಜತೆಗಿರುವಂತೆ ನೋಡಿಕೊಳ್ಳುತ್ತೇವೆ.
- ಎಂ.ಪಿ.ರೇಣುಕಾಚಾರ್ಯ, ಮಾಜಿ ಸಚಿವ

ಸಮಾಚಾರ ಸಣ್ಣದಲ್ಲ

ಒಂದು ದಿನದ ವಿಶೇಷ ಸಹಕಾರ ತರಬೇತಿ ಶಿಬಿರ

ಗದಗ: ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಹಾಗೂ ಗದಗ ಜಿಲ್ಲಾ ಸಹಕಾರ ಯೂನಿಯನ್ ನಿ., ಗದಗ ಹಾಗೂ ಇವರುಗಳ ಸಂಯುಕ್ತ ಆಶ್ರಯದಲ್ಲಿ ರೋಣ ಹಾಗೂ ಗಜೇಂದ್ರಗಡ ತಾಲೂಕುಗಳ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಒಂದು ದಿನದ ವಿಶೇಷ ಸಹಕಾರ ತರಬೇತಿ ಶಿಬಿರ ಫೆ.27ರ ಗುರುವಾರ ಬೆಳಿಗ್ಗೆ 10ಘಂಟೆಗೆ ಶ್ರೀ ಜಗದಂಬಾ ಸಮುದಾಯಭವನ, ಜಗದಂಬಾ ದೇವಸ್ಥಾನ ಹತ್ತಿರ, ಗಜೇಂದ್ರಗಡ ತಾ. ಗಜೇಂದ್ರಗಡ ಜಿ.ಗದಗ ಇದರ ಸಭಾಭವನದಲ್ಲಿ ಜರುಗಲಿದೆ. ಅಧ್ಯಕ್ಷತೆಯನ್ನು ಸಿ.ಎಂ. ಪಾಟೀಲರವರು ವಹಿಸುವರು. ಉದ್ಘಾಟನೆಯು ನೀಲಕಂಠ ಅಸೂಟಿ ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರು, ಧಾರವಾಡ ಹಾಲು ಒಕ್ಕೂಟ, ಧಾರವಾಡ ಇವರಿಂದ ಜರುಗುವುದು. ಮುಖ್ಯ ಅತಿಥಿಗಳಾಗಿ ಗದಗ ಜಿಲ್ಲಾ ಸಹಕಾರ ಯೂನಿಯನ್ನಿನ ನಿರ್ದೇಶಕರಾದ ಸುರೇಶಗೌಡ ಎಂ. ಪಾಟೀಲ, ಗದಗ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕಿಯರಾದ ಎಸ್. ಎಸ್. ಕಬಾಡೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಅರವಿಂದ ಎನ್. ನಾಗಜ್ಜನವರ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಪುಷ್ಪಾ ಕೆ. ಕಡಿವಾಳ ಮುಂತಾದವರು ಭಾಗವಹಿಸುವರೆಂದು ಮುಖ್ಯ ಕಾರ್ಯನಿರ್ವಹಣ ಅಧಿಕಾರಿ ಚಂದ್ರಶೇಖರ ಎಸ್. ಕರಿಯಪ್ಪನವರ ನವರು ತಿಳಿಸಿದ್ದಾರೆ.

ಜನರ ಮನ ಪರಿವರ್ತನೆಯಲ್ಲಿ ಈಶ್ವರಿಯ ವಿವಿ ಮುಂದಿದೆ

ನರಗುಂದ: ಈಶ್ವರಿಯ ವಿಶ್ವವಿದ್ಯಾಲಯ ಅಧ್ಯಾತ್ಮಿಕತೆಯಲ್ಲಿ ಕಾನೂನಿನ ಅರಿವನ್ನು ಮೂಡಿಸುತ್ತದೆ. ಜನರ ಮನ ಪರಿವರ್ತನೆ ಮಾಡುವಲ್ಲಿ ಇಡೀ ವಿಶ್ವದಲ್ಲಿಯೇ ಈಶ್ವರಿಯ ವಿಶ್ವವಿದ್ಯಾಲಯ ಮುಂಚೂಣಿಯಲ್ಲಿದೆ. ಈಶ್ವರಿಯ ವಿದ್ಯಾಲಯದ ಸಹೋದರಿಯರ ತ್ಯಾಗ ತಪಸ್ಸು ಹಾಗೂ ನಿಸ್ವಾರ್ಥ ಜನರನ್ನು ಅಧ್ಯಾತ್ಮಿಕತೆಯ ಕಡೆಗೆ ತರುವಲ್ಲಿ ಸಹಕಾರಿಯಾಗಿದೆ ಎಂದು ಹೆಚ್ಚುವರಿ ಹಿರಿಯ ನ್ಯಾಯಾದೀಶ ರಾಜಶೇಖರಮ್ ತಿಳಿಗಂಜಿ ಹೇಳಿದರು. ಸ್ಥಳೀಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ 89ನೇ ತ್ರಿಮೂರ್ತಿ ಶಿವಜಯಂತಿಯ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಕಾರ್ಯಕ್ರಮ ಉದ್ಘಾಟಿಸಿದ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಜಿನ್ನಪ್ಪ ಚೌಗಲಾ ಮಾತನಾಡಿ, ಈಶ್ವರಿಯ ವಿಶ್ವವಿದ್ಯಾಲಯ ಕಾನೂನು ಮತ್ತು ಅಧ್ಯಾತ್ಮಿಕತೆಯ ಜೊತೆಗೆ ಸುಂದರ ಜೀವನ ನಡೆಸಬೇಕು ಎಂಬುದನ್ನು ತಿಳಿಸಿಕೊಡುವ ಕಾಳಜಿ ತೋರುತ್ತಿದೆ, ಇಲ್ಲಿ ಸೇರಿದ ತಾವೆಲ್ಲರೂ ಯಾವದಾದರೂ ಅಹಿತಕರ ಘಟನೆ ನಡೆದರೆ ಕಾನೂನಿನ ಮೊರೆ ಹೋಗಬೇಕು ಎಂದು ಸಲಹೆ ಮಾಡಿದರು. ಹಳಿಯಾಳ ಸೇವಾ ಕೇಂದ್ರದ ಸಂಚಾಲಕರಾದ ಬ್ರ.ಕು ಪ್ರಭಾ ಮಾತನಾಡಿದರು. 'ಕಾರ್ಯಕ್ರಮದಲ್ಲಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ವಿ.ಎಸ್.ದೇಶಪಾಂಡೆ, ಡಿವೈಎಸ್‌ಪಿ ಪ್ರಭುಗೌಡ ಬ ಕಿರೇದಹಳ್ಳಿ, ನ್ಯಾಯವಾದಿಗಳಾದ ಎಫ್. ವೈ.ದೊಡಮನಿ, ಎಸ್.ಕೆ.ಹರಪನಹಳ್ಳಿ, ಆರ್.ಎಸ್ .ನಾಯ್ಕರ, ಕೆ.ಎಸ್.ಹೂಲಿ, ಪ್ರಸನ್ ಗುಜಮಾಗಡಿ, ಪ್ರಶಾಂತ ಜೋಶಿ, ಬಿ.ಕೆ.ಗುಜಮಾಗಡಿ, ಬಸವರಾಜ ವಡ್ಡರ, ಬ್ರ.ಪ್ರಭಕ್ಕ, ಹನಮಂತ ಮಾದರ, ವಿ.ಎನ್. ಕೊಳ್ಳಿಯವರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮನಸೆಳೆದ ಸುವರ್ಣ ವರ್ಣದ ಜ್ಯೋತಿರ್ಲಿಂಗ ರಥಯಾತ್ರೆ

ಧಾರವಾಡ: ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಆಯೋಜಿಸಿದ ಮಹಾ ಶಿವರಾತ್ರಿ ಮಹೋತ್ಸವದ ಪ್ರಯುಕ್ತ ಅಧ್ಭುವಾದ ಪುರಾತನ

ರಥದಲ್ಲಿ ಸುವರ್ಣ ವರ್ಣದ ಜ್ಯೋತಿರ್ಲಿಂಗ ಜನಮನದ ಕಣ್ಮನ ಸೆಳೆಯಿತು. ಮಹಾನಗರದಾದ್ಯಂತ ಶಿವ ಭಕ್ತರು, ಜ್ಯೋತಿರ್ಲಿಂಗ ರಥ ಯಾತ್ರೆ ಹೃದಯ ಪೂರ್ವಕವಾಗಿ ಸ್ವಾಗತಿಸಿ, ತಮ್ಮ ಭಕ್ತಿ ಭಾವವನ್ನು ಸಮರ್ಪಿಸಿದರು. ಸಾಲು ಸಾಲಾಗಿ ಬರುತ್ತಿದ್ದ ಶಿವ ಲಿಂಗದ ದರ್ಶನ ಪಡೆದು ಧನ್ಯರಾದರು. ಮೆರವಣಿಗೆಯು ಕಲಾಭವನದಿಂದ ಪ್ರಾರಂಭ ಗೋಂಡು ಸುಭಾಸ ರಸ್ತೆ, ಗಾಂಧಿ ಚೌಕ್, ಹೆಬ್ಬಳ್ಳಿ ಅಗಸಿ, ಮಂಗಳವಾರ ಪೇಟೆ, ಕಾಮನ ಕಟ್ಟಿ, ಮುಖಾಂತರ ಮರಳಿ ಕಲಾಭವನಕ್ಕೆ ಅಂತ್ಯ ಗೂಂಡಿತು. ಭಕ್ತರು ದಾರಿ ಉದ್ದಕ್ಕೂ ರಂಗೋಲಿ ಹಾಕಿ ಮೆರವಣಿಗೆಯನ್ನು ಬರಮಾಡಿಕೊಂಡರು.

ಇಂದು ಹರ, ಹರ ಮಹಾದೇವ ಜಾಗರಣೆ

ಲಕ್ಷ್ಮೇಶ್ವರದ ಇತಿಹಾಸ ಪ್ರಸಿದ್ಧ ಐತಿಹಾಸಿಕ ಶ್ರೀ ಸೋಮೇಶ್ವರ ದೇವಾಲಯದಲ್ಲಿಂದು ವಿಶೇಷ ಪೂಜೆ

ಮಾಲಿಂಗರಾಯ ಪೂಜಾರ

ಗದಗ: ಜಿಲ್ಲಾದ್ಯಂತ ಶಿವರಾತ್ರಿ ಹಬ್ಬದ ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಗುತ್ತಿದೆ ಶಿವರಾತ್ರಿ ಎಂದರೆ ಶಿವನ ದೇವಾಲಯದಲ್ಲಿ ವಿಶೇಷ ಪೂಜೆ ಕೈಂಕರ್ಯಗಳು ನಡೆಯುತ್ತವೆ.

ಜಿಲ್ಲೆಯ ವಿಶೇಷ ದೇವಾಲಯಗಳು ಇದ್ದು, ಅದರಲ್ಲಿ ಗದಗ ನಗರದಲ್ಲಿರುವ ಐತಿಹಾಸಿಕ ದೇವಾಲಯವಾದ ತ್ರಿಕೂಟೇಶ್ವರ ದೇವಸ್ಥಾನ ಹಾಗೂ ಜಿಲ್ಲೆಯ ಲಕ್ಷ್ಮೇಶ್ವರದ ಇತಿಹಾಸ ಪ್ರಸಿದ್ಧ ಐತಿಹಾಸಿಕ ಶ್ರೀ ಸೋಮೇಶ್ವರ ದೇವಾಲಯ ಇವು 8ನೇ ಶತಮಾನದ ಕಾಲದ ದೇವಾಲಯ ಗತಕಾಲದ ಐತಿಹಾಸಿಕತೆಯನ್ನ ಸಾರುವ ಶಿಲ್ಪ ಕಲೆಯ ಜೊತೆಗೆ ದೈವ ಶಕ್ತಿಯನ್ನ ಹೊಂದಿರುವ ದೇವಸ್ಥಾನ ಪ್ರತಿದಿನ ನೂರಾರು ಜನ ಭಕ್ತರು ಆಗಮಿಸುತ್ತಾರೆ. ಹೊರ ರಾಜ್ಯದ ಭಕ್ತರು ಕೂಡ ಆಗಮಿಸುತ್ತಾರೆ.

ತ್ರಿಕೂಟೇಶ್ವರ ದೇವಾಲಯದಲ್ಲಿ ಒಂದೇ ಪಾಣಿ ಬಟ್ಟಲಿನಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಉದ್ಭವಾಗಿರುವುದು ಈ ದೇವಾಲಯದ ವಿಶೇಷ. ಇನ್ನೊಂದು ವಿಶೇಷ ಅಂದ್ರೆ ಈ ದೇಶದಲ್ಲಿ ಎಲ್ಲಿಯೂ ಸಹ ಕಾಣದ ಸರಸ್ವತಿ ದೇವಾಲಯ ಇಲ್ಲಿದೆ. ಇನ್ನು ಜಿಲ್ಲೆಯ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಸ್ವಯಂಭೂ ಮೂರ್ತಿ ಎಂಬುದು ಜನರ ನಂಬಿಕೆಯಾಗಿದೆ. ಇಲ್ಲಿರುವ ಸೋಮನಾಥನ (ಈಶ್ವರ) ಮೂರ್ತಿ ಬೇರೆಲ್ಲಿಯಂತೆ ಲಿಂಗಸ್ವರೂಪದಲ್ಲಿರದೇ ನಂದಿಯ ಮೇಲೆ ಪಾರ್ವತಿ ಸಹಿತನಾಗಿ ಹೊರಟಿರುವಂತಿರುವುದು ಇಲ್ಲಿನ ವಿಶೇಷವಾಗಿದೆ ಜೊತೆಗೆ ಅಪರೂಪದ

ತ್ರಿಕೋಟಿ ಲಿಂಗ ಸ್ಥಪನೆಗೆ ಬಂದಿರುವ ಶಿವಲಿಂಗ.

ಶಿಲ್ಪಕಲೆಯನ್ನು ಸಹ ನಾವಿಲ್ಲಿ ಕಾಣಬಹುದಾಗಿದೆ. ಇಷ್ಟೆಲ್ಲಾ ಐತಿಹಾಸಿಕತೆ ಶಿಲ್ಪಕಲೆಯನ್ನ ಹೊಂದಿದ್ದರಿಂದ ಸಾಕಷ್ಟು ರಾಜ್ಯ ಹೊರ ರಾಜ್ಯದಿಂದ ಭಕ್ತರು ಆಗಮಿಸುತ್ತಿದ್ದಾರೆ. ಶಿವರಾತ್ರಿ ದಿನದಂದು ವಿಶೇಷ ಪೂಜೆ ನಡೆಯುತ್ತದೆ ಇದರಿಂದ ದೇವಸ್ಥಾನ ಭಕ್ತ ಸಾಗರದಿಂದ ತುಂಬಿರುತ್ತದೆ.

ಲಿಂ.ಜ.ವೀರ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೆ ವಿಶ್ವಕ್ಕೆ ಶಾಂತಿ ಎಂಬ ಘೋಷಣೆಯನ್ನು ಜಗತ್ತಿಗೆ ನೀಡಿದ್ದು, ಮುಕ್ತಿಮಂದಿರ ಶ್ರೀಗಳು ಹಾಗೂ ಬಾಳೆಹೊನ್ನೂರು ರಂಭಾಪುರಿಪೀಠದ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದವರ ಆಶೀರ್ವಾದದಿಂದ ನೊಣವಿನಕೆರೆ ಶ್ರೀಗಳ ಮಾರ್ಗದರ್ಶನದಲ್ಲಿ ಈ ಯೋಜನೆಯನ್ನು ಸಾಕಾರಗೊಳಿಸಲು ಶ್ರಮಿಸುತ್ತಿರುವ ಶ್ರೀಮಠದ ಈಗೀನ ಪಟ್ಟಾಧ್ಯಕ್ಷರಾದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಈ ತ್ರಿಕೋಟಿ ಲಿಂಗಸ್ಥಾಪನೆಯ ಉದ್ದೇಶವನ್ನು ಸಫಲವಾಗಿಸಲು ಹಗಲಿರುಳು ಶ್ರಮಿಸಿದ್ದು ಎಲ್ಲ ಭಕ್ತರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಧರ್ಮಕ್ಷೇತ್ರದಲ್ಲಿ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಅಂಗವಾಗಿ ಫೆ.26ರಿಂದ 28 ರವರೆಗೆ ಲೋಕೋತ್ತರ ಶಿವಪೂಜೆ, ವಿಶೇಷ ಶಿವಲಿಂಗ

ಸ್ವಯಂಭೋ ಶಿವನ ಮೂರ್ತಿ.

ಪೂಜೆ, ಲಿಂಗದೀಕ್ಷೆ, ರಥೋತ್ಸವ, ಧಾರ್ಮಿಕ ಕಾರ್ಯಕ್ರಮಗಳು, ಧರ್ಮಜಾಗೃತಿ ಸಮಾರಂಭ ಜರುಗಲಿದೆ. ಪ್ರತಿವರ್ಷದಂತೆ ಶ್ರೀ ಕ್ಷೇತ್ರದಲ್ಲಿ ಶಿವರಾತ್ರಿಯ ನಿಮಿತ್ಯ ಲೋಕೋತ್ತರ ಶಿವಪೂಜೆಯು ನಡೆಯಲಿದೆ. ತ್ರಿಕೋಟಿ ಶಿವಲಿಂಗ ಸ್ಥಾಪನೆ ಕಾರ್ಯ ಭರದಿಂದ ಸಾಗಿದ ಹಿನ್ನಲೆಯಲ್ಲಿ ಮುಕ್ತಿಮಂದಿರದಲ್ಲಿ ಈ ಬಾರಿಯ ಜಾತ್ರಾ ಮಹೋತ್ಸವಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಭಕ್ತ ಸಮೂಹ ಹರಿದು ಬರಲಿದೆ ಎಂದು ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ತಿಳಿಸಿದ್ದಾರೆ.

ತ್ರಿಕೋಟಿ ಶಿವಲಿಂಗ ಸ್ಥಾಪನೆ

ಜಿಲ್ಲೆಯ ಶಿಲ್ಪಕಲೆಯ ಹಾಗೂ ಧಾರ್ಮಿಕತೆಯ ಸಿರಿವಂತಿಕೆಯನ್ನ ಸಾರುವ ದೇವಾಲಯ ಸಾಕಷ್ಟು ಇದ್ದು, ಗದಗ ಸಮೀಪ ಇರುವ ಹೊಂಬಳ ಶಂಕರಲಿಂಗ ಉದ್ಭವ ಮೂರ್ತಿ ಇದೆ. ಲಕ್ಷ್ಮೇಶ್ವರ ಸಮೀಪ ಇರುವ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸುವತ್ತ ಬಹುನಿರೀಕ್ಷಿತ ತ್ರಿಕೋಟಿ ಶಿವಲಿಂಗ ಸ್ಥಾಪನೆ ಮೂಲಕ ಜಗತ್ತಿನ ಭೂಪಟದಲ್ಲಿ ಧಾರ್ಮಿಕ ಕ್ಷೇತ್ರವಾಗಿ ಕಂಗೊಳಿಸಲಿರುವ ಭೂಕೈಲಾಸ ಮುಕ್ತಿಮಂದಿರ ಲಿಂ.ಜ.ವೀರ ಗಂಗಾಧರ ಮಹಾಸ್ವಾಮಿಗಳ ಕನಸು ನನಸಾಗುವ ಕಾಲ ಹತ್ತಿರವಾಗುತ್ತಿದೆ ಲಿಂ.ಜ.ವೀರಗಂಗಾಧರ ಶಿವಾಚಾರ್ಯಮಹಾಸ್ವಾಮಿಗಳು ಲೋಕ ಕಲ್ಯಾಣಾರ್ಥವಾಗಿ ಮಾಡಿರುವ ತ್ರಿಕೋಟಿ ಲಿಂಗ ಸ್ಥಾಪನೆ ಕಾರ್ಯ ಭರದಿಂದ ಸಾಗುತ್ತಿದೆ.

ಪಾರದರ್ಶಕ ಪರೀಕ್ಷೆ ಜರುಗಿಸಿ: ಡಿಸಿ

ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್

ಗದಗ: ಜಿಲ್ಲೆಯಲ್ಲಿ ಮಾರ್ಚ 1ರಿಂದ 20ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಜರುಗಲಿದ್ದು ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ಹಾಗೂ ಪಾರದರ್ಶಕವಾಗಿ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ದ್ವಿತೀಯ ಪಿ.ಯು.ಸಿ.ವಾರ್ಷಿಕ ಪರೀಕ್ಷೆಗಳ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳು ಜರುಗಲಿದ್ದು ಪರೀಕ್ಷಾ ಕೇಂದ್ರಗಳಲ್ಲಿ ಗೋಡೆಗಡಿಯಾರಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅಗತ್ಯವಿರುವ ಗಾಳಿ , ಬೆಳಕು ನೀರಿನ ವ್ಯವಸ್ಥೆ ಕಲ್ಪಿಸಬೇಕು. ಇದು ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಆದ್ಯತೆ ಮೇರೆಗೆ ನೀಡಬೇಕು ಎಂದು ಸೂಚಿಸಿದರು.

ಪರೀಕ್ಷಾ ಸಮಯದಲ್ಲಿ ಯಾವುದೇ ಅಕ್ರಮ, ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸಬೇಕು. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು, ಸ್ಥಳೀಯ ನಿರೀಕ್ಷಣಾಧಿಕಾರಿಯನ್ನು, ಮಾರ್ಗಾಧಿಕಾರಿಗಳನ್ನು ಮತ್ತು ತ್ರಿಸದಸ್ಯ ಸಮಿತಿಯನ್ನು ನೇಮಿಸಲಾಗಿದೆ. ಅಧಿಕಾರಿಗಳು ತಮಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಸೂಚಿಸಿದರು.

ಪ್ರತಿಬಂಧಕಾಜ್ಞೆ ಜಾರಿ: ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾರ್ಚ 1 ರಿಂದ 20 ರವರೆಗೆ ಬೆ 8 ಗಂಟೆಯಿಅದ ಮಧ್ಯಾಹ್ನ 3 ಗಂಟೆಯವರೆಗೆ

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ದ್ವಿತೀಯ ಪಿ.ಯು.ಸಿ.ವಾರ್ಷಿಕ ಪರೀಕ್ಷೆಗಳ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಮಾತನಾಡಿದರು.

ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ಹಾಗೂ ಅನಧಿಕೃತ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರಗಳ ಪ್ರವೇಶವನ್ನು ನಿರ್ಬಂಧಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್‌ಸ್ಟಾಲ್, ಫೋಟೋ ಕಾಪಿಯರ್ ಗಳನ್ನು ಬಂದು ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ನಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಜಿ.ಪಂ.ಮುಖ್ಯಕಾರ್ಯನಿರ್ವಹಣಾಧಿಕಾರಿ ಭರತ್ ಎಸ್ ದ್ವಿತೀಯ ಪಿಯುಸಿ ಪರೀಕ್ಷೆಗಳು ಸುವ್ಯವಸ್ಥಿತವಾಗಿ ಜರುಗುವಂತೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸೂಚಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಕ ಅವರು ಮಾತನಾಡಿದರು. ಸಭೆಯಲ್ಲಿ ಪರೀಕ್ಷಾ ಕೇಂದ್ರಗಳ ಸ್ವಚ್ಚತೆ, ಸಿ.ಸಿ.ಟಿವಿ ಅಳವಡಿಕೆ, ಸೂಕ್ತ ಬಂದೋಬಸ್ತ್ ಕುರಿತು ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಸೇರಿದಂತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಮೈಕ್ರೋಫೈನಾನ್ಸ್ ಹಾವಳಿ ತಡೆಗೆ ಒಂದೇ ಕಡೆಗಳಲ್ಲಿ ಎನ್‌ಓಸಿ ಕೊಡಲಿ

ಧಾರವಾಡ: ಮೈಕ್ರೋಫೈನಾನ್ಸ್ ಸಾಲ ಮಾಡಿದ ಮಹಿಳೆಯರು ಬೀದಿಗೆ ಬರುವಂತಹ ಪರಿಸ್ಥಿತಿ ಬಂದಿದೆ. ಎಷ್ಟೊಂದು ಕಡೆಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಇದೊಂದು ರೀತಿಯಲ್ಲಿ ತುರ್ತು ಪರಿಸ್ಥಿತಿ ರೀತಿಯಲ್ಲಿ ವಾತಾವರಣ ಸೃಷ್ಟಿಯಾಗಿದೆ. ಆದ ಕಾರಣ ಮೈಕ್ರೋಫೈನಾನ್ಸ್‌ಗಳಲ್ಲಿ ಸಾಲ ಪಡೆದವರಿಗೆ ಒಂದೇ ಕಡೆಯಲ್ಲಿ ಎನ್‌ಓಸಿ ಕೊಡಬೇಕು. ಗಂಭೀರವಾಗಿರುವ ಈ ಸಮಸ್ಯೆಯನ್ನು ರಾಜ್ಯ ಸರಕಾರ ಬಗೆಹರಿಸಲು ಸರಕಾರದ ಮಟ್ಟದಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡುತ್ತೇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಶಾಸಕ ಸುರೇಶ ಬಾಬು ಹೇಳಿದರು.

ಧಾರವಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ ಸರಕಾರ ಗ್ಯಾರಂಟಿ ಯೋಜನೆಗಳಿಂದ ಅಧಿಕಾರಕ್ಕೆ ಬಂದಿದೆ. ಆದರೆ ಮಹಿಳೆಯರಿಗೆ ಹಣಕೊಟ್ಟು ಗಂಡದೀರ ಹತ್ತಿರ ಮದ್ಯದ ದರವನ್ನು ಹೆಚ್ಚಿಗೆ ಮಾಡಿ, ಕಿತ್ತುಕೊಳ್ಳುವ ಕೆಲಸ ಮಾಡುತ್ತಿದೆ. ಜೊತೆಗೆ ಎಸ್ಸಿ-ಪಿಟಿಸಿ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸುತ್ತಿದೆ. ನಾನಾ ಯೋಜನೆಯ ಭಾಗ್ಯಗಳನ್ನು ಕೊಟ್ಟು, ಸರಕಾರ ಇದೀಗ 3-4 ತಿಂಗಳಿಗೊಮ್ಮೆ ಹಣವನ್ನು ಹಾಕುತ್ತಿದೆ ಎಂದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ವೆಂಕಟರಾವ ನಾಡಗೌಡ ಮಾತನಾಡಿ, ಜೆಡಿಎಸ್ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಈಗಾಗಲೇ ಧಾರವಾಡ ಹಾಗೂ ಚಿಕ್ಕೋಡಿ ಭಾಗದಲ್ಲಿ ಕಾರ್ಯಕರ್ತರ ಹಾಗೂ ಮುಖಂಡರ ಸಭೆಯನ್ನು ಕರೆಯಲಾಗಿದೆ. ರಾಜ್ಯಾದ್ಯಂತ ಈಗಾಗಲ 3 ಲಕ್ಷ ಸದಸ್ಯರು ಇದ್ದು, ಮುಂಬರುವ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಯನ್ನು ಗೆಲ್ಲಲು, ಜೆಡಿಎಸ್ ಪಕ್ಷ ಸಂಘಟನೆ ಮಾಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ, ಜೆಡಿಎಸ್ ಮುಖಂಡರಾದ ಗುರುರಾಜ ಹುಣಶಿಮರದ, ಮಂಜುನಾಥ ಹಗೆದಾರ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಮುಖಂಡರು.

ಎಸ್‌ಎಸ್‌ಎಲ್ಸಿ ಪೂರ್ವಸಿದ್ಧತೆ ಪರೀಕ್ಷೆ: ದಿಢೀರ್ ಭೇಟಿ

ಧಾರವಾಡ: ಜಿಲ್ಲೆಯಲ್ಲಿ ಎಸ್‌ಎಸ್‌ಎಲ್ಸಿ. ಪೂರ್ವಸಿದ್ದತಾ ಪರೀಕ್ಷೆಗಳು ಆರಂಭವಾಗಿದ್ದು, ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು, ಧಾರವಾಡ ನಗರದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಪ್ರಜಂಟೇಶನ್ ಆಂಗ್ಲ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ಪ್ರೌಢಶಾಲಾ ಪರೀಕ್ಷೆ ಕೇಂದ್ರಕ್ಕೆ ತೆರಳಿ ಪರೀಕ್ಷಾ ಕೊಠಡಿ, ಸಿಸಿಟಿವಿ ವ್ಯವಸ್ಥೆ ಪರಿಶೀಲಿಸಿದರು.

ಮೊದಲ ದಿನದ ಪರೀಕ್ಷೆ, ಭಾಷಾ ವಿಷಯದ ಪರೀಕ್ಷೆ ಇದೆ. ಎಸ್.ಎಸ್.ಎಲ್ .ಸಿ ಪ್ರಶ್ನೆಪತ್ರಿಕೆ ಕಠಿಣತೆ, ವಿದ್ಯಾರ್ಥಿಗಳ ಸ್ಪಂದನೆ, ಬರವಣಿಗೆ ನೋಡಿ, ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. ಪ್ರಜಂಟೇಶನ್ ಪ್ರೌಢಶಾಲೆಯಲ್ಲಿ ಪ್ರಸಕ್ತ

ಎಸ್.ಎಸ್‌ಎಲ್.ಸಿ ಪೂರ್ವಸಿದ್ಧತೆ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಡಿಸಿ

ಸಾಲಿಗೆ 297 ವಿದ್ಯಾರ್ಥಿಗಳು ನೋಂದಾಯಿತರಾಗಿದ್ದಾರೆ. ವಾರ್ಷಿಕ ಪರೀಕ್ಷೆಗೆ ಸೆಂಟ್ ಜೋಷಫ್, ಯುಪಿಎಸ್‌ಸಿ, ಪ್ರೌಢಶಾಲೆ ಸೇರಿದಂತೆ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಈ ಕೇಂದ್ರಕ್ಕೆ ಹಾಜರಾಗುತ್ತಾರೆ. ಪರೀಕ್ಷಾ ಹಾಲ್‌ದಲ್ಲಿ ವಿದ್ಯಾರ್ಥಿಗಳು ನಿರ್ಭಯವಾಗಿ, ಯಾವುದೇ ಗೊಂದಲಗಳಿಲ್ಲದೆ ಪರೀಕ್ಷೆ ಬರೆಯುತ್ತಿರುವುದನ್ನು ವಿವಿಧ ಕೊಠಡಿಗಳಿಗೆ ತೆರಳಿ ಖಚಿತ ಪಡಿಸಿಕೊಂಡರು.

ಈ ಸಂದರ್ಭದಲ್ಲಿ ಪ್ರಜಂಟೇಶನ್ ಪ್ರೌಢಶಾಲೆ ಮುಖ್ಯೋಪಾಧ್ಯಯರಾದ ಸಿಸ್ಟರ್ ಶಾಲ್ಲಿ ಬಿ.ಎಸ್, ಪರೀಕ್ಷಾ ಅಧೀಕ್ಷಕರ ಎನ್.ಎನ್.ಭಟ್ಟ ಹಾಗೂ ಶಿಕ್ಷಕರು, ಸಿಬ್ಬಂದಿ ಇದ್ದರು.

ನಂತರ ಜಿಲ್ಲಾಧಿಕಾರಿಗಳು ಗಾಂಧಿನಗರ ಸೇರಿದಂತೆ ವಿವಿಧ ಶಾಲೆಗಳಿಗೆ ಭೇಟಿ ನೀಡಿ, ಎಸ್.ಎಸ್.ಎಲ್.ಸಿ. ಪೂರ್ವಸಿದ್ದತಾ ಪರೀಕ್ಷೆಗಳನ್ನು ಪರಿಶೀಲಿಸಿದರು.

ಉದ್ಯೋಗ ಮೇಳವನ್ನು ವ್ಯವಸ್ಥಿತವಾಗಿ ಜರುಗಿಸಿ

ಗದಗ: ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಮಾರ್ಚ 1, 2ರಂದು ಹಮ್ಮಿಕೊಳ್ಳಲಾಗಿದ್ದು ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟು ನಿರ್ವಹಣೆಗೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ತಿಳಿಸಿದರು.

ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗುವ ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಕಂಪನಿಗಳು ನೋಂದಣಿ ಮಾಡಿಕೊಳ್ಳುತ್ತಿವೆ. ಸದರಿ ಕಂಪನಿಗಳಿಅದ 6695 ಹುದ್ದೆಗಳಿಗೆ ಬೇಡಿಕೆ ಸಲ್ಲಿಸಿರುತ್ತಾರೆ. ಉದ್ಯೋಗ ಆಕಾಂಕ್ಷಿಗಳು ವೆಬ್ ಸೈಟ್ ಗಗಗ.ಎಲಅಈಅಎಓಣಾಆಉಊಅಙ.ಇಣಖ ನಲ್ಲಿ ಅಥವಾ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೊಂದಾಯಿಸಿಕೊಳ್ಳಬೇಕು. ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳುವಂತೆ ಕ್ರಮ ವಹಿಸಬೇಕು. ಈ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದರು.

ಮಹಾನಗರ ಪಾಲಿಕೆಗೆ ಬಿಜೆಪಿಯಿಂದಲೇ ಅಡ್ಡಗಾಲು: ಅರವಿಂದ ಏಗನಗೌಡರ

ಧಾರವಾಡ: ಹೊಸದಾಗಿ ರಚನೆ ಯಾಗುತ್ತಿರುವ, ಧಾರವಾಡ ಮಹಾನಗರ ಪಾಲಿಕೆಗೆ ಬಿಜೆಪಿಯಿಂದಲೇ ಅಡ್ಡಗಾಲಾಗಿದೆ ಎಂದು ಕಾಂಗ್ರೆಸ್ ಮುಖಂಡ ಅರವಿಂದ ಏಗನಗೌಡರ ಕಿಡಿಕಾರಿದರು.

ಧಾರವಾಡದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಧಾರವಾಡ ಮಹಾನಗರ ಪಾಲಿಕೆಗೆ ಈಗಾಗಲೇ ರಾಜ್ಯ ಕಾಂಗ್ರೆಸ್ ಸರಕಾರ ಅನುಮೋದನೆ ನೀಡಿ ಗೆಜೆಟ್ ಹೊರಡಿಸಿದ್ದು, ಧಾರವಾಡದ ಸಮಸ್ತ ಜನತೆ ಸಂತಸ ಗೊಂಡಿದ್ದು ಎಲ್ಲರಿಗೂ ತಿಳಿದ ವಿಷಯ. ಶಾಸಕ ಕುಲಕರ್ಣಿ ಬಿಡದ ನಿರಂತರ ಪ್ರಯತ್ನ, ಧಾರವಾಡ ಜನತೆಯ ಒಕ್ಕೊರಲಿನ ಹೋರಾಟಕ್ಕೆ ರಾಜ್ಯಸರಕಾರ ಮುಂಬರುವ ಬಜೆಟ್‌ನಲ್ಲಿ ಧಾರವಾಡ ಪಾಲಿಕೆಗೆ ಅನುದಾನ ಘೋಷಣೆ ಮಾಡುವ ಎಲ್ಲಾ ಸಾಧ್ಯತೆಗಳು ಇದೆ ಎಂದರು.

ಈ ಹಿನ್ನೆಲೆಯಲ್ಲಿ ವಿನಯ ಕುಲಕರ್ಣಿ 100 ಕೋಟಿ ಅನುದಾನ ನೀಡಬೇಕು ಎಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಧಾರವಾಡದ ಸಮಗ್ರ ಅಭಿವೃದ್ಧಿಯಾಗಬೇಕಾದರೆ, ಧಾರವಾಡ ಜನತೆ ಹಾಗೂ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಕೆಲಸ ಮಾಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದರು.

ಈಗ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದು, ಮಹಾನಗರ ಪಾಲಿಕೆಯ ಅಸ್ತಿತ್ವ ಈಗ ಬೇಡ ಎನ್ನುತ್ತಿದ್ದಾರೆ.

ಈ ಹಿಂದೆ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಸರ್ವಾನುಮತದಿಂದ ಠರಾವು ಮಾಡಿ ಸಲ್ಲಿಸಿದ್ದು, ಈಗ ಬೇಡ ಎನ್ನುವದು ಎಷ್ಟು ಸರಿ? ಈಗ ಧಾರವಾಡ ಪ್ರತ್ಯೇಕ ಪಾಲಿಕೆಯ ಬಗ್ಗೆ ಬಿಜೆಪಿಗಿರುವ ದ್ವಿಮುಖ ನೀತಿ ಬಹಿರಂಗಗೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುತ್ತಮುತ್ತಲಿನ ಗ್ರಾಮದ ಜನತೆಯ ದಾರಿ ತಪ್ಪಿಸಿ, ನಿಮ್ಮ ಗ್ರಾಮಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳುತ್ತಾರೆ, ಎಂದು ಗ್ರಾಮೀಣ ಜನತೆಯನ್ನು ಎತ್ತಿ ಕಟ್ಟುವ ಪ್ರಯತ್ನದಲ್ಲಿ ಈಗಾಗಲೇ ಮುಖಭಂಗ ಅನುಭವಿಸಿದ್ದರೂ, ತಮ್ಮ ದುರ್ಬುದ್ಧಿ ಬಿಡದ ಬಿಜೆಪಿ ನಾಯಕರು, ಪಾಲಿಕೆ ತಂದಿದ್ದು ನಾವು ಎಂದು ಬ್ಯಾನರ್ ಗಳನ್ನು ಧಾರವಾಡ ತುಂಬಾ ಅಳವಡಿಸಿ ಬಿಟ್ಟಿ ಪ್ರಚಾರ ತೆಗೆದುಕೊಂಡು ಈಗ ತೆರೆ ಮರೆಯಲ್ಲಿ ಮಹಾಪೌರರನ್ನು ದಾಳವಾಗಿ ಬಳಸಿಕೊಳ್ಳುವ ವ್ಯರ್ಥ ಪ್ರಯತ್ನವನ್ನು ಕೈ ಬಿಡಬೇಕು, ಧಾರವಾಡ ಪ್ರತ್ಯೇಕ ಪಾಲಿಕೆಗೆ ಅಡ್ಡಗಾಲು ಹಾಕುವುದನ್ನು ಬಿಡಬೇಕು ಎಂದು ಅಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ವಿರೋಧ ಪಕ್ಷದ ನಾಯಕ ರಾಜಶೇಖರ್ ಕಮತಿ, ಪಾಲಿಕೆ ಸದಸ್ಯರುಗಳಾದ ಕವಿತಾ ಕಬ್ಬೆರ, ಶಂಭು ಸಾಲಮನಿ, ಗಣೇಶ ಮುಧೋಳ, ಮುಖಂಡ ವೀರೇಶ ಶೆಟ್ಟರ ಉಪಸ್ಥಿತರಿದ್ದರು.

ಕೋಟಿಮಠ ಸಮನ್ವಯತೆ ಸಾಧಿಸಿದೆ: ಸ್ವಾಮೀಜಿ

ವಿದ್ಯಾವರ್ಧಕ ಸಂಘದಲ್ಲಿ ನಡೆದ ಸದ್ಗುರುವರ್ಯರ ಕೃಪೆ ಪುಸ್ತಕ ಬಿಡುಗಡೆ, ಉಪನ್ಯಾಸ ಕಾರ್ಯಕ್ರಮ

ಧಾರವಾಡ: ಕೋಡಿಮಠವು ಇಂದಿಗೂ ಸರ್ವಧರ್ಮ ಸಮನ್ವಯತೆ ಕಾಪಾಡಿಕೊಂಡು ಬಂದಿದ್ದು, ತನ್ನದೇ ದಿವ್ಯ ಶಕ್ತಿಯನ್ನು ಹೊಂದಿದೆ ಎಂದು ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಹೇಳಿದರು.

ಸವದತ್ತಿಯ ಚಿಕ್ಕಉಳ್ಳಿಗೇರಿಯ ಶ್ರೀ ಸಂಗನಗೌಡ ಬಸನಗೌಡ ಪಾಟೀಲ ಪ್ರತಿಷ್ಠಾನದ ವತಿಯಿಂದ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿಸಿದ್ದ, ಶ್ರೀ ಕ್ಷೇತ್ರ ಕೋಡಿಮಠದ ಸದ್ಗುರುವರ್ಯರ ಕೃಪೆ ಪುಸ್ತಕ ಬಿಡುಗಡೆ ಮತ್ತು ಉಪನ್ಯಾಸ ಕಾರ್ಯಕ್ರಮದಲ್ಲಿ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದರು.

ಇಂದಿಗೂ ನೂರಾರು ವರ್ಷಗಳ ದೈವತ್ವದ ಭವಿಷ್ಯದ ವಾಣಿಗಳು ಜಗತ್ತಿನಲ್ಲಿ ಸತ್ಯವಾಗಿ ಪರಿಣಮಿಸಿವೆ ಎಂದ ಅವರು, ಕಾಲಜ್ಞಾನದಲ್ಲಿ ಗುರುಗಳು ರೈಲು, ಮೊಬೈಲ್ ಕುರಿತು ಭವಿಷ್ಯದ ವಾಣಿಗಳು ನಿಜವಾಗಿ ಪ್ರಸ್ತುತತೆಯನ್ನು ಪಡೆದಿವೆ. ಶಿವಲಿಂಗ ಅಜ್ಜಯ್ಯ ಶ್ರೀಗಳು ತಮ್ಮದೇ ಆದ ಶಕ್ತಿಯನ್ನು

ಗಣ್ಯರಿಂದ ಪುಸ್ತಕ ಲೋಕಾರ್ಪಣೆ ನಡೆಯಿತು.

ಹೊಂದಿದ್ದರು. ಕೋಡಿ ಮಠವು ದಿವ್ಯವಾದ ಶಕ್ತಿಯನ್ನು ಹೊಂದಿದೆ. ಗುರುಗಳ, ಶಿವಶರಣರ ಕೃಪೆಗೆ ಪಾತ್ರರಾಗುವದು ವಿಶೇಷ ಆಶೀರ್ವಾದ ಇದ್ದಂತೆ ಎಂದು ತಿಳಿಸಿದರು.

ಕವಿವಿ ಬಸವೇಶ್ವರ ಪೀಠದ ಸಂಯೋಜಕ ಪ್ರೊ.ಸಿ.ಎಂ.ಕುಂದಗೋಳ, ಅವರು ವಚನಗಳಲ್ಲಿ ವ್ಯಕ್ತಿತ್ವ ವಿಕಸನ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ ಮಾತನಾಡಿ, ವಚನಕಾರರು ತಮ್ಮ ವಚನಗಳಲ್ಲಿ ಜೀವದ ಸಾರವನ್ನು ನೀಡಿದ್ದಾರೆ. ಪ್ರಸಕ್ತ ಸಾಲಿನ ಅನೇಕ ವಿದ್ಯಮಾನಗಳಿಗೆ ಆಗಲೇ ಅಂದಿನ ವಚನಕಾರರು ಪರಿಹಾರಗಳನ್ನು ನೀಡಿದ್ದರು. ಇಂದಿನ ಶಿಕ್ಷಣದಲ್ಲಿ ಒಳ್ಳೆಯ ಮೌಲ್ಯಗಳನ್ನು ಒಳಗೊಂಡಿರಬೇಕು. ಮನುಷ್ಯನ ಅಂತರಂಗದ ಶಿಸ್ತನ್ನು ಮೂಡಿಸುವದೇ ಶಿಕ್ಷಣವಾಗಿದೆ. ಬಸವೇಶ್ವರರು ವಚನಗಳ ಮೂಲಕ ಜೀವನ ಶಿಕ್ಷಣ ನೀಡಿದ್ದಾರೆ ಎಂದರು.

ಪ್ರಾಧ್ಯಾಪಕರಾದ ಡಾ.ಮಲ್ಲಿಕಾರ್ಜುನ ಪಾಟೀಲ, ಬಸವ ಶಾಂತಿ ಮಿಷನ್ ಅಧ್ಯಕ್ಷರಾದ ಮಹಾದೇವ ಹೊರಟ್ಟಿ ಮಾತನಾಡಿದರು.

ಹುಬ್ಬಳ್ಳಿಯ ಟಿ.ಎ.ಪಿ.ಎಮ್.ಸಿ ನಿರ್ದೇಶಕ ಜಗನಾಥ ಸಿದ್ದನಗೌಡ್ರ, ಮಾತನಾಡಿ, ಆಧ್ಯಾತ್ಮಿಕದ ಕುರಿತು ಇಂದಿನ ಯುವ ಜನಾಂಗಕ್ಕೆ ತಲುಪಿಸವದು ಅವಶ್ಯಕತೆ ಇದೆ. ಆಧ್ಯಾತ್ಮಿಕವಾದ ಕಾರ್ಯಕ್ರಮಗಳನ್ನು ಕಾಲೇಜು ಶಿಕ್ಷಣ ಸಂಸ್ಥೆಗಳಲ್ಲಿ ಆಯೋಜಿಸುವದು ಹೆಚ್ಚು ಸೂಕ್ತ ಎಂದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಿ.ಎಸ್ .ಪಾಟೀಲ ವಹಿಸಿದ್ದರು.

ಸಾರ್ವಜನಿಕ ಶಿಕ್ಷಣ ಮತ್ತು ಸುರಕ್ಷತಾ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಎಸ್ .ಬಿ.ಕೊಡ್ಲಿ, ಹುಬ್ಬಳ್ಳಿ ಟಿ.ಎ.ಪಿ.ಎಮ್.ಸಿ ನಿರ್ದೇಶಕ ಜಗನಾಥ ಸಿದ್ದನಗೌಡ್ರ, ನಿವೃತ್ತ ಎಂಜಿನಿಯರ್ ಎ.ಆರ್.ಪಾಟೀಲ, ಗ್ರಂಥ ಲೇಖಕ ಡಿ.ಆರ್.ಪಾಟೀಲ, ಎಸ್.ವಿ. ಉಳ್ಳಿಗೇರಿ, ಸಿ.ಎಸ್.ಪಾಟೀಲ, ಮಾಜಿ ಸಂಸದ ಆಯ್.ಜಿ.ಸನದಿ, ಗುರುರಾಜ ಹುಣಸಿಮರದ, ಶೈಲಜಾ ಅಮರಶೆಟ್ಟಿ ಇದ್ದರು.

ವಿಶ್ವವಾಣಿ
ಬೆಂಗಳೂರು
ಬುಧವಾರ
26-02-2025

ಆರಾಮ



ಜನಸಾಮಾನ್ಯರ ದೇವತೆ ಎನಿಸಿರುವ ಶಿವನು, ಕೈಲಾಸ ಪರ್ವತದಲ್ಲಿ ಧ್ಯಾನ ಮಾಡುತ್ತಾನೆ; ಆತನ ವಾಸವು ಸ್ಮಶಾನದಲ್ಲಿ! ಈ ವೈರುಧ್ಯವು ನಮ್ಮ ಬದುಕಿನ ಏರಿಳಿತಗಳನ್ನು ಪ್ರತಿನಿಧಿಸುತ್ತದೆ. ಶಿವರಾತ್ರಿಯ ಆಚರಣೆಯನ್ನು ಧ್ಯಾನ ಮತ್ತು ಜಾಗರಣೆಗಳ ಮೂಲಕ ಸಂಪನ್ನಗೊಳಿಸೋಣ.

ಲೋಕಸ್ನೇಹಿ ಪರಶಿವ!

ಇಂದು ಮಹಾ ಶಿವರಾತ್ರಿ

• ರವೀಂದ್ರ ಸಿಂಗ್ ಕೋಲಾರ

ದೇವರು ದೇವತೆಗಳೆಂದರೆ ಅವರು ವಿಶೇಷವಾದ ಅಲಂಕಾರದಿಂದ ಕಂಗೊಳಿಸುವವರಾಗಿರುತ್ತಾರೆಂಬ ಭಾವನೆ ನಮ್ಮಲ್ಲಿದೆ. ಆದರೆ ಶಿವನು ಹಾಗಲ್ಲ, ಎಲ್ಲ ದೇವರುಗಳಿಗಿಂತ ವಿಭಿನ್ನ! ಹಿಮಾಲಯದ ಕೈಲಾಸ ಪರ್ವತ ಅವನಿಗೆ ಆಶ್ರಯ ತಾಣವಾದರೆ, ಸುಟ್ಟ ಬೂದಿ ಮೈಗೆ ಪಟ್ಟೆ ವಿಭೂತಿಗಳಾಗಿವೆ. ರುದ್ರಾಕ್ಷಿಯನ್ನು ಮಾಲೆಯನ್ನಾಗಿ ಮಾಡಿಕೊಂಡು, ಉಡುಗೆಯಾಗಿ ಪ್ರಾಣಿಯ ಚರ್ಮವನ್ನು ಮಾಡಿಕೊಂಡಿರುವುದು ಶಿವ. ಪೂಜಿಸುವ ಭಕ್ತನಿಗೆ ಅತಿ ಶೀಘ್ರವಾಗಿ ಮನಸೋಲುವವನು ಪರಶಿವನೇ. ಭಕ್ತನ ಮನೆಯನ್ನೂ, ಮನವನ್ನು ಪ್ರವೇಶಿಸಿ ಅವನ ಬೇಕು ಬೇಡಿಕೆಗಳಿಗೆ ಸ್ಪಂದಿಸಿ ಸಕಲವನ್ನು ನೀಡಲು ಸಿದ್ಧನಿರುವ ಶಿವನ ಬಗ್ಗೆ ತಿಳಿದುಕೊಂಡಾಗ ನಮಗೆ ಅವನ ಮಹಿಮೆ ಏನೆಂಬುದು ಅರಿವಿಗೆ ಬರುತ್ತದೆ.

ಸಮಸ್ಥಿತಿ: ಪುರಾಣಗಳು ಹೇಳಿದಂತೆ ಶಿವನು ಕೈಲಾಸ ಪರ್ವತದಲ್ಲಿ ಕೂತು ಧ್ಯಾನಸಕ್ತನಾಗಿರುತ್ತಾನೆ ಹಾಗು ಸ್ಮಶಾನದಲ್ಲಿ ವಾಸಮಾಡುತ್ತಾನೆ. ಅಂದರೆ ಶೀತೋಷ್ಣ - ಸುಖದುಃಖ ಎರಡನ್ನೂ ಸಮನಾಗಿ ಭಾವಿಸಿ ಶಿವ ಕೈಲಾಸನಾಥನಾಗಿ ಮತ್ತು ಸ್ಮಶಾನವಾಸಿಯಾಗಿಯೂ ಬಿಂಬಿತನಾಗುತ್ತಾನೆ. ಹಣೆಯಲ್ಲಿ ಉರಿಯುವ ಕಣ್ಣಿದ್ದರೆ ಶಿರದ ಮೇಲೆ ಅದನ್ನು ಶಮನಗೊಳಿಸುವ ಗಂಗೆಯನ್ನು ಇಟ್ಟುಕೊಂಡಿರುವನು.

ಧ್ಯಾನ ಸ್ಥಿತಿ: ವಿಶಾಲ ಜಗತ್ತನ್ನು ಕನ್ನಡಿಯನ್ನಾಗಿ ಮಾಡಿಕೊಂಡ ಪರಶಿವನು ಮೂರು ಲೋಕಕ್ಕೂ ಒಡೆಯನಾಗಿ ನಮ್ಮ ಮನಸ್ಸಿಗೆ ತೀರ ಸಹಜವಾದ ದೇವರಾಗಿ ಹತ್ತಿರವಾಗುತ್ತಾನೆ. ಸದ್ದು-ಗದ್ದಲಗಳ ವಿಶ್ವ ಕುಟುಂಬದಲ್ಲಿ ಭಕ್ತನಾದವನು ಮತ್ತು ಎಲ್ಲವ ಅರಿತ ಜ್ಞಾನಿಯಾಗಿರತಕ್ಕವನು ದೂಷಣ ಭೂಷಣಗಳಿಗೆ ಅಂಟದೆ ತೃಪ್ತಿಯಿಂದ ಸಮಾಧಾನ ಚಿತ್ತವನ್ನನುಸರಿಸಿ ಮೌನ ಯೋಗವನ್ನು ಆಶ್ರಯಿಸಬೇಕು. ಸಹಿಸಿ ಆ ಕಷ್ಟಗಳ ನೆಲೆ ಹಾಗೂ ಕಾರಣ ಹುಡುಕಬೇಕು ಎನ್ನುವ ಸತ್ಯವನ್ನು ಯೋಗ ನಿದ್ರೆಯಲ್ಲಿರುವ ಶಿವನ ಧ್ಯಾನ ಸ್ಥಿತಿ ತಿಳಿಸುತ್ತದೆ.

ಕಪಾಲಂ ಶಿವಂ: ಸುಳ್ಳು ಮೋಸಗಳಿಂದ ಜೀವನ ನಡೆಸದೆ ಪ್ರಾಮಾಣಿಕ ಪ್ರಯತ್ನ ಹಾಗೂ ದುಡಿಮೆಯಿಂದ ನಮ್ಮ ಬದುಕನ್ನು ಕಂಡುಕೊಳ್ಳಬೇಕು. ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರು ಬೇಡುವವರೇ ಆಗಿರುತ್ತಾರೆ. ಸೃಷ್ಟಿಯಲ್ಲಿ ಸಿಗುವ ಅನ್ನ (ಭಿಕ್ಷೆ) ಯಿಂದಲೇ ಪ್ರತಿಯೊಬ್ಬರು ಜೀವಿಸಬೇಕು. ಸಿರಿಯು ಶಾಶ್ವತವಲ್ಲದ್ದರಿಂದ ಇಲ್ಲದವರಿಗೆ ನೀಡುವುದು ಪುಣ್ಯ ಸಂಪಾದನೆಗೆ ಮಾರ್ಗವಾಗಿದೆ. ಅಹಂ ಬಿಟ್ಟು ಶರಣಾಗತಿ ಹೊಂದುವುದರಲ್ಲಿದೆ ಮೋಕ್ಷ ಎಂಬುದನ್ನು ಕಪಾಲ ಹಿಡಿದ ಶಿವನಿಂದ ಅರಿಯಬಹುದು. ಕಪಾಲವೇ ಆತನು ಪ್ರಧಾನವಾಗಿ ಉಪಯೋಗಿಸುವ ಪಾತ್ರೆ!

ಪಶುಪತಿ: ಶಿವನ ಸುತ್ತಲೂ ಹಲವು ಜೀವಿಗಳಿರುತ್ತವೆ! ಆತ ಪಶುಪತಿ. ಬಸವ, ಸರ್ಪ, ಮೂಷಕ, ನವಿಲು, ಸಿಂಹ ಈ ರೀತಿಯ, ಸ್ವಭಾವದಲ್ಲಿ ಒಂದಕ್ಕೊಂದು ವಿರೋಧ ಬುದ್ಧಿ ಹೊಂದಿದ ಜೀವಿಗಳೇ ಅವನ ಕುಟುಂಬದಲ್ಲಿ ಇದ್ದರೂ ಎಲ್ಲವೂ ಸ್ನೇಹ ಭಾವದಿಂದ ಅಲ್ಲಿ ವರ್ತಿಸುವುದನ್ನು ಕಾಣಬಹುದು. ತನ್ನ ತುಂಬು ಕುಟುಂಬವನ್ನು ಜಗತ್ತಿಗೆ ಪರಿಚಯಿಸುವ ಪರಮೇಶ್ವರನ ಈ ನಡೆ ಅನ್ಯೋನ್ಯತೆಯಿಂದ ಬದುಕುವ ಪಾಠವನ್ನು ನಮಗೆ ಉದಾಹರಣೆಯೊಂದಿಗೆ ಕಲಿಸಿದೆ.

ನಾಗಾಭರಣ: ಸರ್ಪವೆಂಬ ದ್ವೇಷ ವಿಷಗಳು ನಮ್ಮನ್ನಾವರಿಸಿದ್ದರೂ ವಿಚಲಿತರಾಗದೆ ಧೈರ್ಯದಿಂದ ಕಷ್ಟಗಳಿಗೆ ಎದುರಾಗಿ ನಿಲ್ಲಬೇಕು. ಕೆಡುಕನ್ನು ಮಾಡಲು ಬಂದವರನ್ನು ಒಳಿತನ್ನು ಬಯಸುವ ಕ್ಷಮಾ ಗುಣವನ್ನು ನಾವು ಹೊಂದಬೇಕು. ಅಜ್ಞಾನದಿಂದ ವರ್ತಿಸುವರನ್ನು ಜ್ಞಾನದ ಕಣ್ಣಿನಿಂದ ಹಿತವನ್ನು ಕೋರಿ ನಗುತ್ತಾ ಸಂತೈಸುವ ದೊಡ್ಡತನ ನಮ್ಮಲ್ಲಿ ಬೆಳೆಸಿಕೊಳ್ಳಬೇಕು ಎಂಬುದು ಶಿವನ ಕೊರಳಿನ ಸುತ್ತಲೂ ಇರುವ ಹಾವಿನಿಂದ ಮನದಟ್ಟಾಗುತ್ತದೆ.



ತ್ರಿಶೂಲಧಾರಿ: ತ್ರಿಶೂಲವೆಂಬ ಜ್ಞಾನ ಭಕ್ತಿ ವೈರಾಗ್ಯಗಳಿಂದ ನಾವು ಭೂತ ಭವಿಷ್ಯತ್ ವರ್ತಮಾನದ ಮೂರು ಕಾಲಕ್ಕೂ ಸಲ್ಲುವವರಾಗಬೇಕು. ರಜೋಗುಣ ತಮೋಗುಣ ಮತ್ತು ಸತ್ವಗುಣ ಎಂಬ ಮೂರು ಗುಣಗಳನ್ನು ಅರಿತು ನಡೆದರೆ ಕೈಲಾಸ ಸುಲಭವಾಗಿ ದೊರಕುವುದು. ತ್ರೈಲೋಕ್ಯಾಧಿಪತಿ ತ್ರಿಭುವನ ಪಾಲಕನಾದ ಶಂಕರನ ಎಡೆಬಿಡದೆ ಜಪಿಸಿದರೆ ಅವನ ಅಭಯ ನಮಗೆ ಸಿಗುವುದಷ್ಟೇ ಅಲ್ಲದೆ ಇಷ್ಟಾರ್ಥಗಳು ನೆರವೇರುವುದು ಎಂಬಂತಹ ಒಳಾರ್ಥ ತ್ರಿಶೂಲದಲ್ಲಡಗಿದೆ. ಜತೆಗೆ, ತುರ್ತು ಸಂದರ್ಭಗಳಲ್ಲಿ, ಸ್ವರಕ್ಷಣೆಗಾಗಿಯೂ ಇದನ್ನು ಉಪಯೋಗಿಸಬಹುದು.

ಶಶಿಧರ: ಅರ್ಧಚಂದ್ರನ ಎರಡೂ ಮೊನಚಾದ ತುದಿಗಳು ಜೀವನದ ಏರಿಳಿತವನ್ನು ಸಾರುತ್ತವೆ. ಜನನ ಮರಣದ ನಡುವೆ ಸಾಧ್ಯವಾದಷ್ಟು ತಂಪಾದ ಬೆಳಕನ್ನು ನೀಡಲು ಸದಾ ಪ್ರಯತ್ನಶೀಲರಾಗಿ ಜೀವನ ಪಾವನವಾಗಿರಿಸಿಕೊಳ್ಳಬೇಕು. ಎಷ್ಟೇ ಎತ್ತರದಲ್ಲಿದ್ದರೂ ಚಿಕ್ಕವರಾಗೇ ಉಳಿಯಬೇಕು. ತಮ್ಮನ್ನು ತಾವು ಅಧೋಗತಿಪಾಲು ಮಾಡಿಕೊಳ್ಳದೆ ನೀಚ ಸ್ಥಿತಿಗೆ ಇಳಿಯದೆ ಉಚ್ಚಸ್ಥಾನದಲ್ಲೇ ನಿಲ್ಲಬೇಕು ಎನ್ನುವುದು ಶಿರದ ಮೇಲಿರುವ ಚಂದ್ರನನ್ನು ನೋಡಿ ಕಲಿಯಬಹುದಾಗಿದೆ.

ಶಿವನು ತನ್ನ ಲೋಕವನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ತನ್ನಲ್ಲಿ ಮಾಡಿಕೊಂಡಿರುವ ನ್ಯಾಯ ಮತ್ತು ಧರ್ಮಗಳ ನಿಯಮಗಳನ್ನು ಪ್ರಕೃತಿಯ ಸಾರವನ್ನು ನಿದರ್ಶಿಸಿದ ಶಿವ ಎಲ್ಲ ಜೀವಿಗಳನ್ನು ಉಳಿಸಿ ತಾನು ಅದರೊಂದಿಗೆ ಬಾಳಲೆಂದು ಹರಸಿದ್ದಾನೆ. ಮನುಷ್ಯನಾದವನು ಸಂಸಾರ ವೃಕ್ಷಫಲವನ್ನು ಅನುಭವಿಸಿ ಲೋಕ ಸ್ನೇಹಿಯಾಗಿ ಜೀವನವನ್ನು ಸುಂದರ ಹಾಗೂ ಮನೋಹರವಾಗಿ ಕಾಣುವಂತೆ ಭೂಮಿಯ ಮೇಲೆ ಎಲ್ಲ ಅವಶ್ಯಕತೆಗಳನ್ನು ದಯಪಾಲಿಸಿದ್ದಾನೆ. ಇಂತಹ ದಯಾಸಾಗರನಾದ ಹರನ ಸ್ತುತಿಸಿ, ಜಪಿಸಿ ವ್ರತವನ್ನು ಕೈಗೊಂಡರೆ ಬಿಡದೆ ಕೈ ಹಿಡಿಯುವನು. ಮಹಾಶಿವರಾತ್ರಿಯ ದಿನದಂದು ಉಪವಾಸವಿದ್ದು, ರಾತ್ರಿಯಿಡೀ ಜಾಗರಣೆ ಮಾಡಿ, ಶಿವನನ್ನು ಧ್ಯಾನಿಸುವುದು, ಸ್ತುತಿಸುವುದು ಮತ್ತು ಶಿವ ದೇಗುಲಗಳ ಪರಿಕ್ರಮ ಮಾಡುವುದು ನಮ್ಮ ನಾಡಿನ ಪದ್ಧತಿ ಎನಿಸಿದ್ದು, ಈ ಪದ್ಧತಿಯಲ್ಲಿ ಅಡಗಿದೆ, ಮನುಷ್ಯನ ಬದುಕಿನ ಹೂರಣ, ನೆಮ್ಮದಿಯ ಬಾಳಿನ ತೋರಣ.

ಸೋಮನಾಥ ದೇಗುಲದ ಬಳಿ ಪ್ರತಿ ಸಂಜೆ ನಡೆಯುವ ಧ್ವನಿ ಮತ್ತು ಬೆಳಕಿನ ಪ್ರದರ್ಶನವು, ಅಮಿತಾಬ್ ಬಚ್ಚನ್ ಅವರ ಮನಸೆಳೆಯುವ ಧ್ವನಿಯಿಂದಾಗಿ, ಅವಿಸ್ಮರಣೀಯ ಅನುಭವ ನೀಡುತ್ತದೆ.

ಧ್ವನಿ ಮತ್ತು ಬೆಳಕಿನ ಪ್ರದರ್ಶನ

• ವಿಲಾಸ ನಾ ಹುದ್ದಾರ

ಸೋಮನಾಥ ಜ್ಯೋತಿರ್ಲಿಂಗವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಪುರಾತನವಾದ ಜ್ಯೋತಿರ್ಲಿಂಗ. ಈ ಮಂದಿರವು 56 ಕಂಬಗಳ ಮೇಲೆ ರಚನೆಯಾಗಿದೆ. ಶಿಥಿಲಾವಸ್ಥೆಯಲ್ಲಿದ್ದ ದೇವಸ್ಥಾನವನ್ನು, ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ, ಸರ್ದಾರ ವಲ್ಲಭಭಾಯಿ ಪಟೇಲ ಮತ್ತಿತರರ ಪ್ರಯತ್ನದಿಂದ ಪುನರ್ನಿರ್ಮಾಣಮಾಡಲಾಗಿದೆ. 1951 ರಲ್ಲಿ ರಾಷ್ಟ್ರಪತಿಗಳಾದ ರಾಜೇಂದ್ರ ಪ್ರಸಾದ ಅವರಿಂದ ಪ್ರಾಣಪ್ರತಿಷ್ಠಾನ ಮಾಡಲಾಯಿತು. ದೇವಾಲಯದ ಶಿಲ್ಪವು ನಯನ ಮನೋಹರವಾಗಿದ್ದು, ಸಂಪೂರ್ಣ ದೇವಸ್ಥಾನವು ರಾತ್ರಿಯ ಸಮಯದಲ್ಲಿ ವರ್ಣರಂಜಿತ ವಿದ್ಯುತ್ ಅಲಂಕಾರದಿಂದ ಭವ್ಯವಾಗಿ ಕಂಗೊಳಿಸುತ್ತದೆ. ಜ್ಯೋತಿರ್ಲಿಂಗವು ದೊಡ್ಡದಾಗಿದ್ದು ಭವ್ಯವಾಗಿದೆ.

ಅಮಿತಾಬ್ ಬಚ್ಚನ್ ಅವರ ನಿರೂಪಣೆ: ಇಲ್ಲಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಅಮಿತಾಬ್ ಬಚ್ಚನರ ಆಕರ್ಷಕ ಧ್ವನಿಯಲ್ಲಿ ಬೆಳಕು ಮತ್ತು ಶಬ್ದದ ಪ್ರದರ್ಶನದಲ್ಲಿ ಕೇಳಬಹುದು. ಪ್ರತಿ ಸಂಜೆ 35 ನಿಮಿಷಗಳ ಎರಡು ಪ್ರದರ್ಶನಗಳು(7.45 ಮತ್ತು 8.45) ಇರುತ್ತವೆ. ಈ ಪ್ರದರ್ಶನವು ದೇವಸ್ಥಾನ ಹಿಂಭಾಗದ (ಕಟ್ಟೆ,ಗೋಡೆ ಮತ್ತು ಗೋಪುರ) ಮೇಲೆ ಮೂಡಿಬರುತ್ತದೆ. ಸುಮಾರು 900 ಜನಗಳು ಒಂದು ಬಾರಿ ಕುಳಿತು ವೀಕ್ಷಿಸಬಹುದು. ಮೊದಲಿಗೆ ಓಂ, ನಮಃ ಶಿವಾಯ ಶಬ್ದದ ಸಹಿತ ಬೆಳಕಿನ ಕಿರಣಗಳಲ್ಲಿ ಮೂಡಿ ಬರುತ್ತದೆ. ಆಮೇಲೆ ಮೃತ್ಯಂಜಯ ಮಂತ್ರ ದೃಶ್ಯದ ಸಹಿತ ಪಠಿಸಲಾಗುತ್ತದೆ. ಈ ಪುಣ್ಯ ಭೂಮಿಯಲ್ಲಿ ಜರುಗಿದ ಎಲ್ಲ ಘಟನೆಗಳಿಗೂ ಸಮುದ್ರ ಸಾಕ್ಷಿಯಾಗಿ ನಿಂತಿದೆ. ಅದಕ್ಕಾಗಿ, ಸಮುದ್ರವೇ ವ್ಯಾಖ್ಯಾನ ಮಾಡುತ್ತಿರುವಂತೆ ನಿರೂಪಣೆ ಇದೆ. ಸೋಮನು(ಚಂದ್ರ) ದಕ್ಷ ಪ್ರಜಾಪತಿಯಿಂದ ಕ್ಷಯರೋಗಿಯಾಗೆಂದು ಶಾಪ ಪಡೆದಾಗ ಕೈಲಾಸಕ್ಕೆ ಹೋಗಿ ಶಿವನ ಮೊರೆ ಹೋಗುತ್ತಾನೆ. ಶಿವನು ಸರಸ್ವತಿಯು ಅಂತರ್ಧಾನಳಾದ ಸ್ಥಳವಾದ ಸೋಮನಾಥಕ್ಕೆ (ಪ್ರಭಾಸ) ಹೋಗಿ ತಪಸ್ಸನ್ನು ಮಾಡಲು ಸೂಚಿಸುತ್ತಾನೆ. ಅದರಂತೆ ಸೋಮನು 1000 ವರ್ಷ ಈ ಸ್ಥಳದಲ್ಲಿ ತಪಸ್ಸು ಮಾಡಿ ಶಾಪಮುಕ್ತನಾಗಿ ತನ್ನ ಮೊದಲಿನ ಕಾಂತಿಯುಕ್ತ ಶರೀರವನ್ನು ಪಡೆಯುತ್ತಾನೆ. ಶಿವನಿಗೆ ತನ್ನ ಭಕ್ತಿ, ಶ್ರದ್ಧಾ ಮತ್ತು ಕೃತಜ್ಞತೆಯನ್ನು ಪ್ರಕಟಿಸಲು ಈ ಸ್ಥಳದಲ್ಲಿ ಭವ್ಯವಾದ ಸುವರ್ಣದಿಂದ ಆವೃತವಾದ ಸೋಮನಾಥ ದೇವಾಲಯವನ್ನು ಕಟ್ಟಿಸುತ್ತಾನೆ. ನಿರಂತರವಾಗಿ ಇಲ್ಲಿ ಭಗವಾನ, ಭಕ್ತಿ ಮತ್ತು ಭಕ್ತರ ಆರಾಧನಾ ನಡೆದು ಬರುತ್ತದೆ. ಇಲ್ಲಿ ಹಿಂದೆ ಇದ್ದ ಗಂಟೆ ಕೂಡ ಬಂಗಾರದಾಗಿದ್ದು ಸುಮಾರು 1 ಟನ್ನಿನಷ್ಟು ಭಾರವಾಗಿತ್ತಂತೆ. ಹಿಂದೆ ಇಲ್ಲಿದ್ದ ಜ್ಯೋತಿರ್ಲಿಂಗವು ಯಾವದೇ ಆಧಾರವಿಲ್ಲದೇ ತೇಲಾಡುತ್ತಿತ್ತು ಎಂಬ ನಂಬಿಕೆ ಇದೆ.

ಈ ದೇವಸ್ಥಾನವು ಹಲವು ಬಾರಿ ಜೀರ್ಣೋದ್ಧಾರಗೊಂಡಿದೆ. ಕ್ರಿ.ಶ.1024 ರಲ್ಲಿ ಘಜನಿ ಮಹಮದನಿಂದ ದಾಳಿಗೊಳಗಾದಾಗ ದೊರೆ ಭೋಜನು ಪುನಃ ನಿರ್ಮಾಣ ಮಾಡಿದನು. ಮುಂದೆ ಅಲ್ಲಾವುದ್ದೀನ ಖಿಲ್ಜಿ, ತುಘಲಕ, ಔರಂಗಜೇಬ, ಪೋರ್ತುಗೀಜರು ದಾಳಿ ಮಾಡಿ ಇಲ್ಲಿರುವ ಎಲ್ಲ ಸಂಪತ್ತನ್ನೂ ದೋಚಿದರು. ಪ್ರತಿ ದಾಳಿಯ ನಂತರ, ಪುನರ್‌ನಿರ್ಮಾಣಗೊಂಡಿದೆ. ಇಂದೋರಿನ ರಾಣಿ ಅಹಲ್ಯಾಬಾಯಿ ಹೋಳ್ಕರ ಅವರು ಇಲ್ಲಿ ಪ್ರತ್ಯೇಕ ದೇವಸ್ಥಾನವನ್ನೇ ಕಟ್ಟಿಸಿದ್ದಾರೆ.

ವಲ್ಲಭಭಾಯಿ ಪಟೇಲರ ಪ್ರಯತ್ನದಿಂದ ಈ ದೇವಸ್ಥಾನವು ಪುನರ್‌ನಿರ್ಮಾಣಗೊಂಡು, ಇಂದು ಪ್ರವಾಸಿ ತಾಣ ಮತ್ತು ಯಾತ್ರಾ ಸ್ಥಳವಾಗಿ ಅಭಿವೃದ್ಧಿಹೊಂದಿದೆ. ಇಲ್ಲಿ ಪ್ರತಿದಿನ ಸಂಜೆ ನಡೆಯುವ ಬೆಳಕು ಮತ್ತು ಶಬ್ದ ಪ್ರದರ್ಶನ ಅದ್ಭುತವಾಗಿ ಮೂಡಿಬರುತ್ತಿದೆ. ಇಲ್ಲಿಗೆ ಹೋದವರು ಇದನ್ನು ನೋಡಲೇಬೇಕು. ಅಮಿತಾಬ್ ಅವರ ಧ್ವನಿಯ ನಿರೂಪಣೆ ಪರಿಣಾಮಕಾರಿಯಾಗಿದೆ; ಕೊನೆಯಲ್ಲಿ ಓಂ ನಮಃ ಶಿವಾಯದೊಂದಿಗೆ ಪ್ರದರ್ಶನ ಮುಕ್ತಾಯಗೊಂಡಿತು.

ನಮ್ಮ ರಾಜ್ಯದ ಹಲವು ಕಡೆ ಶಿವಾಲಯಗಳಿವೆ; ಪ್ರಾತಿನಿಧಿಕವಾಗಿ, ತುರುವೇಕೆರೆ ತಾಲೂಕಿನ ಶಿವ ದೇಗುಲಗಳ ಪರಿಚಯ ಇಲ್ಲಿದೆ.

ತುರುವೇಕೆರೆಯ ಶಿವಾಲಯಗಳು

• ತುರುವೇಕೆರೆ ಪ್ರಸಾದ

ಬೆಂಗಳೂರಿನಿಂದ ಕುಣಿಗಲ್ ಮಾರ್ಗವಾಗಿ ಸುಮಾರು 120 ಕಿ.ಮೀ. ದೂರದಲ್ಲಿರುವ ತುರುವೇಕೆರೆ ಸುಂದರ ಹಾಗೂ ವಿಶಿಷ್ಟ ದೇಗುಲಗಳ ಊರು. ಹೊಯ್ಸಳರ 3ನೆಯ ನರಸಿಂಹನ ದಂಡನಾಯಕ ಸೋಮನಾಥನು 1263ರಲ್ಲಿ ಸರ್ವಜ್ಞ ಶ್ರೀ ವಿಜಯ ನರಸಿಂಹಪುರ ಎಂಬ ಹೆಸರಿನ ಅಗ್ರಹಾರವನ್ನು ಕಟ್ಟಿದನೆಂದು ಇಲ್ಲಿನ ಒಂದು ಶಾಸನದಿಂದ ಗೊತ್ತಾಗುತ್ತದೆ.

ಇಲ್ಲಿನ ಮೂಲೆಶಂಕರೇಶ್ವರ ದೇವಾಲಯ ಊರಿನ ಮೊದಲ ದೇವಾಲಯವಾದ್ದರಿಂದ ಮೂಲಶಂಕರ ಎಂಬ ಹೆಸರಿದ್ದರೂ, ಊರಿನ ಈಶಾನ್ಯ ದಿಕ್ಕಿನಲ್ಲಿ ಕೆರೆಯ ಪಕ್ಕದಲ್ಲಿ ಒಂದು ಮೂಲೆಯಲ್ಲಿ ಇರುವುದರಿಂದ ಮೂಲೆಶಂಕರ ಎಂಬ ಹೆಸರೂ ಇದೆ. ಇದನ್ನು 12ನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ದೇವಾಲಯದ ಹೊರಭಿತ್ತಿ 64 ಮೂಲೆಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಸುಕನಾಸಿಯ ಹೊರಗಿನ ನವರಂಗ ಮಂಟಪದಲ್ಲಿ ಹೊಯ್ಸಳರ ಕಾಲದ ಭೈರವ, ವೀರಭದ್ರ, ಸಪ್ತಮಾತೃಕೆಯರು, ಷಣ್ಮುಖ ಮತ್ತು ನಂದಿ ವಿಗ್ರಹಗಳಿವೆ. ದೇವಾಲಯವು ಪೂರ್ವಾಭಿಮುಖವಾಗಿದ್ದರೂ ಪ್ರವೇಶ ಮಂಟಪ ದಕ್ಷಿಣಾಭಿಮುಖವಾಗಿದೆ. ನಕ್ಷತ್ರಾಕಾರದ ಜಗುಲಿಯ ಮೇಲೆ ಹೊರಭಿತ್ತಿಗಳ ಅಡಿಪಟ್ಟಿಕೆಗಳಲ್ಲಿ ಅಲ್ಲಲ್ಲಿ ಜಕ್ಕಣ, ಈಶ್ವರ ಎಂಬ

ಶಿಲ್ಪಿಗಳ ಹೆಸರು ಕೆತ್ತಲಾಗಿದೆ. ಈ ದೇವಸ್ಥಾನ ಶತಮಾನಗಳ ಹಿಂದೆ ಪರಕೀಯರ ಆಕ್ರಮಣಕ್ಕೆ ಸಿಲುಕಿ ಮತ್ತು ಮೇಲ್ಛಾವಣಿ ಬೆಂಕಿಯ ಕೆನ್ನಾಗಲಿಗೆ ಸಿಲುಕಿ ಬಿರುಕು ಬಿಟ್ಟಿತ್ತು. ದೇವಾಲಯ ಸುಮಾರು 12 ಅಡಿಗೂ ಹೆಚ್ಚು ನೆಲದಲ್ಲಿ ಹೂತು ಹೋಗಿತ್ತು. ಇಲ್ಲಿನ ಸುರಭಿ ಸಂಗಮ ಸೇವಾಸಂಸ್ಥೆ, ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಹಾಗೂ ರಾಜ್ಯ ಪುರಾತತ್ವ ಇಲಾಖೆಯ ಸಹಯೋಗದೊಂದಿಗೆ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ.

ಇತಿಹಾಸ ಪ್ರಸಿದ್ಧ ಶಿವದೇವಾಲಯವೆಂದರೆ 16ನೇ ಶತಮಾನದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ಭವಾನಿ ಗಂಗಾಧರೇಶ್ವರ ದೇವಾಲಯ. ಶಿಲ್ಪಕಲೆಯನ್ನು ಹೊಂದಿರುವ ಇದನ್ನು ಪಾಳೆಯಗಾರನಾದ ಅಯ್ಯಣ್ಣನಾಯಕ ಕಟ್ಟಿಸಿದ ಎಂದು ಹೇಳಲಾಗುತ್ತದೆ. ದೇವಾಲಯದ ಮುಂದಿನ ಪಾತಾಳಾಂಕಣದಲ್ಲಿರುವ ಹೊಳೆಯುವ ಕಪ್ಪು ಕಲ್ಲಿನ ಬೃಹತ್ ನಂದಿ ವಿಗ್ರಹ ಸುಂದರವಾಗಿದೆ. ಸುಂದರವಾಗಿರುವ ಮುಖ, ಕೊರಳಿಲ್ಲಿನ ಶಿಲ್ಪಾಭರಣಗಳ ಅಪೂರ್ವ ಕುಸುರಿ ಕೆತ್ತನೆ, ಹಾರದಲ್ಲೇ ಕೆತ್ತಿರುವ ಶಿವಲಿಂಗ ಇವೆಲ್ಲಾ ಶಿಲ್ಪಿಯ ಕಲಾನೈಪುಣ್ಯವನ್ನು ಪ್ರತಿಬಿಂಬಿಸುತ್ತವೆ. ಪೂರ್ವದ ಮಂಟಪದಲ್ಲಿನ ಮತ್ತೊಂದು ವಿಶೇಷವೆಂದರೆ, ದೊಡ್ಡ ಕಲ್ಲಿನ ಘಂಟೆ.

ಇಲ್ಲಿರುವ ಗಂಗಾಧರೇಶ್ವರ (ಲಿಂಗವು) ವಿಶಿಷ್ಟವಾಗಿದೆ. ಓರೆಗೋಲಾಕಾರದಲ್ಲಿ ಇರಬೇಕಾದ ಲಿಂಗದ ಮೇಲ್ಭಾಗ ಇಲ್ಲಿ ಶಿವನ ಶಿರೋಭಾಗದಂತೆ ಜಟೆಯಿಂದ ಕೂಡಿದೆ. ಜಟೆಯ ಒಳಭಾಗ ಕಾಣುವಹಾಗೆ ಜಟೆಯನ್ನು ಪುಟ್ಟ ಗುಹೆಯಂತೆ ಕೆತ್ತಲಾಗಿದ್ದು, ಅದರೊಳಗೆ ಗಂಗೆಯು ಆಸೀನಳಾಗಿ ಬಲಗೈಯಲ್ಲಿ ಜಪಮಾಲೆಯನ್ನು ಹಿಡಿದು ಧ್ಯಾನಸ್ಥಳಾಗಿದ್ದಾಳೆ. ಲಿಂಗದ ಜಟೆಯ ಕೆತ್ತನೆಯಲ್ಲಿ 27 ಸುರುಳಿಗಳಿದ್ದು, ಅವು 27 ನಕ್ಷತ್ರಗಳನ್ನು ಸಂಕೇತಿಸುವಂತೆಯೂ, ಜಟೆಯ ಬಲಪಾರ್ಶ್ವದಲ್ಲಿ ಸೂರ್ಯನೂ, ಎಡಪಾರ್ಶ್ವದಲ್ಲಿ ಚಂದ್ರನೂ ಇರುವಂತೆಯೂ ಕೆತ್ತಲಾಗಿದೆ. ಇದೇ ದೇವಾಲಯದ ಪ್ರಾಂಗಣದ ಪುಟ್ಟ ಗುಡಿಯಲ್ಲಿ ತನ್ನ ಗಂಡನ್ನು ತಲೆಯ ಮೇಲೆ ಹೊತ್ತಿದ್ದನ್ನು ಸಹಿಸಲಾಗದೆ ಎಡತೊಡೆಯ ಮೇಲಿನಿಂದ ಮುನಿಸಿಕೊಂಡು ಎದ್ದು ಪಾರ್ವತಿಯು ಭವಾನಿಯಾಗಿ ನಿಂತಿದ್ದಾಳೆ.

ಶಿವರಾತ್ರಿಯಂದು ಎರಡೂ ದೇವಾಲಯಗಳಲ್ಲಿ ವಿಶೇಷ ಪೂಜಾ ಕಾರ್ಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು ಸಾವಿರಾರು ಜನರು ಭಾಗವಹಿಸುತ್ತಾರೆ.



ಈ ಸಸ್ಯದ ಕಡ್ಡಿಗಳು ಶಿವಪೂಜೆಯಲ್ಲಿ ಸ್ಥಾನ ಪಡೆದಿವೆ.

ಉತ್ತರಾಣಿ ವೃಕ್ಷ

• ಮನೋಹರ ಜೋಶಿ

ಪ್ರಕೃತಿಯಲ್ಲಿ ದೊರೆಯುವ ಪ್ರತಿಯೊಂದು ಗಿಡ ಮರ,ಬಳ್ಳಿಗಳು ತನ್ನದೇ ಆದ ಆಧ್ಯಾತ್ಮಿಕ ವೈಶಿಷ್ಟ್ಯಗಳು ಹೊಂದಿಕೊಂಡಿವೆ.ಪ್ರಕೃತಿ ಪರಿಸರದಲ್ಲಿನ ಪ್ರತಿಯೊಂದು ಪತ್ರ-ಪುಷ್ಪಗಳು ಭಗವಂತ ಪೂಜೆಗಾಗಿ ಸಮರ್ಪಿಸಿಕೊಂಡಿವೆ. ಮನುಷ್ಯನಿಗೆ ಸಹಕಾರಿಯಾಗಿವೆ ಹಾಗೂ ವರದಾನವು ಹೌದು. ಅಂತಹ ಉಪಯುಕ್ತ ಸಸ್ಯಗಳಲ್ಲಿ ಉತ್ತರಾಣಿ ವೃಕ್ಷ ಕೂಡ ಒಂದು.

ಶಿವರಾತ್ರಿಯಂದು ಶಿವನ ಪೂಜೆಗೆ ಉತ್ತರಾಣಿ ಎಲೆ, ಕಾಂಡಗಳನ್ನು ಬಳಸುವದರಿಂದ ಈ ವೃಕ್ಷ ಮಹತ್ವ ಪಡೆದಿದೆ. ಉತ್ತರಾಣಿಯನ್ನು ಸಂಸ್ಕೃತದಲ್ಲಿ ಅಪಮಾರ್ಗ ಮತ್ತು ಖರಮಂಜರಿ ಎಂದು ಕರೆದಿದ್ದಾರೆ.

ಅಥರ್ವ ವೇದೋಕ್ತವಾದ ಉತ್ತರಾಣಿ ವೃಕ್ಷ ವೇದಕಾಲದಿಂದಲೂ ಪ್ರಚಲಿತದಲ್ಲಿದೆ. ದೈವಿಕ ಪಕ್ಷಿಯಾದ ಸುಪರ್ಣದ ಕಣ್ಣಿಗೆ ಈ ಗಿಡ ಮೊದಲಿಗೆ ಕಂಡುಬಂತು ಎಂದು, ನಂತರ ನೃಶದಾನ ಮಗನಾದ ಕಣ್ವನಿಂದ ಪೋಷಿಸಲಾಯಿತೆಂದು ಹರಿಹರನ ಕಾವ್ಯದಲ್ಲಿ ಉಲ್ಲೇಖಿಸಲಾಗಿದೆ. ಬುಧ ಗ್ರಹವನ್ನು ಪ್ರತಿನಿಧಿಸುವ ಈ ವೃಕ್ಷವು, ಪೂಜಾ ಕ್ರಮದಲ್ಲಿ ಉತ್ತರಾಣಿ ಎಲೆ ಆರನೇ ಸ್ಥಾನ ಪಡೆದಿದೆ. ಪೂಜೆಗೆ ಉತ್ತರಾಣಿ ಗಿಡದ ಕಡ್ಡಿಗಳ(ಕಾಂಡ)ತುದಿಗೆ ಹತ್ತಿ ಸುತ್ತಿ ಎಣ್ಣೆಯಲ್ಲಿ ಅದ್ದಿ ದೀವಟಿಗೆಗಳಂತೆ ದೀಪವಾಗಿಸಿ ಬೆಳಗುವರು. ಉತ್ತರಾಣಿ ಸಸ್ಯದ ಬಿಳಿ ಹೂವುಗಳಿಂದ ರುದ್ರದೇವರನ್ನು ಅರ್ಚಿಸಿದರೆ ಎಲ್ಲ ಮನೋಭೀಷ್ಟಗಳು ಇಡೇರುತ್ತವೆಂದು ಸ್ಮೃತಿಗಳು ಸಾರುತ್ತಿವೆ. ಮನೆಯ ಬಳಿ ಉತ್ತರಾಣಿ ನೆಡುವುದು ಶುಭವೆಂದು ಹೇಳಲಾಗುತ್ತದೆ.ಇದರಿಂದ ಸಂತೋಷ ಮತ್ತು ಸಮೃದ್ಧಿಯನ್ನು ವೃದ್ಧಿಸುತ್ತದೆಂದು ನಂಬಲಾಗಿದೆ.

ಒಂದು ಅಡಿಯಿಂದ ಮೂರು ಅಡಿಯವರೆಗೂ ಇದು ಬೆಳೆಯುತ್ತದೆ. ಈ ಗಿಡವು ಮಳೆಗಾಲದ ಪ್ರಾರಂಭದಲ್ಲಿ ಜನ್ಮ ತಾಳುತ್ತದೆ.ಇದರ ಎಲೆಗಳು ದುಂಡಗಿದ್ದು, ತೆನೆಯಲ್ಲಿ ಹೂವು ಮತ್ತು ಕಾಯಿ ಬಿಡುತ್ತದೆ. ತೆನೆಯಲ್ಲಿನ ಕಾಳನ್ನು ಉತ್ತರಾಣಿ ಅಕ್ಕಿ ಎಂದೂ ಹೇಳುತ್ತಾರೆ. ಇದರ ಹೂವಿನಲ್ಲಿರುವ ಬೀಜಗಳು ಬಟ್ಟೆಗಳಿಗೆ ತಾಗಿದರೆ ಬಟ್ಟೆಗಳಿಗೆ ಅಂಟಿಕೊಳ್ಳುತ್ತದೆ. ಉತ್ತರಾಣಿ ಸಸ್ಯಗಳಲ್ಲಿ ಎರಡು ವಿಧಗಳಿವೆ ಒಂದು ಬಿಳಿ ಕಾಂಡ ಹಾಗೂ ಕೆಂಪು ಕಾಂಡ.

ಔಷಧೀಯ ಗುಣ

ಆಯುರ್ವೇದದಲ್ಲಿ ಸರ್ವರೋಗ ನಿವಾರಕ ಎಂದು ಈ ಸಸ್ಯವನ್ನು ವರ್ಣಿಸಿದ್ದಾರೆ. ಉತ್ತರಾಣಿ ಗಿಡದ ಕಾಂಡ, ಬೇರು, ಎಲೆ ಹಾಗೂ ಬೀಜಗಳು ಔಷಧೀಯ ಗುಣಗಳನ್ನು ಸಮೃದ್ಧಿಯಾಗಿ ಹೊಂದಿದೆ. ನಿದ್ರಾಹೀನತೆ, ಮೂತ್ರವಿಸರ್ಜನೆಗೆ ಸಂಬಂಧಿಸಿದಂತಹ ಸಮಸ್ಯೆ, ಭೇದಿ, ಹೊಟ್ಟೆನೋವು, ಅಜೀರ್ಣ ಸಮಸ್ಯೆ, ರಕ್ತ ಹೀನತೆ, ಚರ್ಮ ರೋಗಗಳು, ಕಫ ಮುಂತಾದ ಸಮಸ್ಯೆ ಇದು ಉಪಯುಕ್ತ.

ಸಮಯದ ಆಚೆ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಭಗವದ್ಗೀತೆಯು ಎರಡು ಹಂತಗಳ ಸುಸಂಬದ್ಧ ಸಂಯೋಜನೆ ಯಾಗಿದೆ. ಹಾಗಾಗಿ ಇದನ್ನು ಅರ್ಥಮಾಡಿಕೊಳ್ಳಲು ನಾವು ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯವಾಗಿದೆ. ಕೆಲವು ವೇಳೆ ಮಾನವರು ದಿನನಿತ್ಯ ಎದುರಿಸುವ ಸಮಸ್ಯೆಗಳನ್ನು ವಿವರಿಸುವ ಮಿತ್ರನಾಗಿ ಅಥವಾ ಮಾರ್ಗದರ್ಶಿಯಾಗಿ ಕೃಷ್ಣ ಅರ್ಜುನನ ಬಳಿ ಬರುತ್ತಾನೆ. ಇನ್ನು ಕೆಲವು ವೇಳೆ ಪರಮಾತ್ಮನಾಗಿ ಬರುತ್ತಾನೆ. ಆಗ ತಾನು ಈ ಅವಿನಾಶಿ, ಯೋಗವನ್ನು ವೈವಸುತನಿಗೆ ನೀಡಿದ್ದೆ ನಂತರ ಅದು ಪರಂಪರೆಯಿಂದಾಗಿ ರಾಜ ಋಷಿಗೆ ಹಸ್ತಾಂತರವಾಯಿತು ಹಾಗೂ ಕಾಲಘಟ್ಟದಲ್ಲಿ ಅದು ಕಳೆದುಹೋಯಿತು ಎಂದು ಕೃಷ್ಣ ಹೇಳುತ್ತಾನೆ (1.14.2).

ವೈವಸುತನೆಂದರೆ ಸೂರ್ಯದೇವ. ಇವನು ಪ್ರಕಾಶದ ರೂಪಕ. ತಾನು ಪ್ರಕಾಶದ ಮೊದಲು ಇದ್ದೆ ಎಂದು ಕೃಷ್ಣ ಹೇಳುತ್ತಾನೆ. ಈ ವಿಶ್ವವೋ ಪ್ರಕಾಶದಿಂದ ಪ್ರಾರಂಭವಾಯಿತು ಮತ್ತು ನಂತರ ಜಡವಸ್ತು ರೂಪಗೊಂಡಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ರಾಜ ಋಷಿಗಳು ಬೇರೆ ಬೇರೆ ಸಮಯದಲ್ಲಿ ಇದ್ದ ಮಹಾ ಜ್ಞಾನಿಗಳಲ್ಲದೆ ಬೇರೆ ಯಾರು ಅಲ್ಲ ಎಂದು ಕೃಷ್ಣ ತಿಳಿಸುತ್ತಾನೆ. ಈ ಜ್ಞಾನವು ಕಳೆದು ಹೋಯಿತು ಯಾಕೆಂದರೆ ಶಾಲಾ ನಂತರ ಇದು ಪ್ರಾಯೋಗಿಕ ಮಟ್ಟದಿಂದ ಕೇವಲ ಕ್ರಿಯಾ ವಿಧಿಯಾಗಿ ಮಾರ್ಪಟ್ಟಿತ್ತು ಹಾಗೂ ಅನುಷ್ಠಾನಕ್ಕಿಂತ ಬೋಧನೆಯೇ ಹೆಚ್ಚಾಗಿ ಧರ್ಮ ಮತ್ತು ಮತಗಳ ರೂಪ ಪಡೆಯಿತು.

ಕೃಷ್ಣನ ಜನ್ಮ ಇತ್ತೀಚೆಗೆ ಆಗಿದ್ದು ಅದನ್ನು ಅವನು ಸೂರ್ಯ ದೇವನಿಗೆ ಹೇಗೆ ಹೇಳಿದ ಎಂದು ಅರ್ಜುನ ಪ್ರಶ್ನಿಸುತ್ತಾನೆ. (4.4) ನಮಗೆ ಹಲವು ಜನ್ಮಗಳಿರುತ್ತವೆ ಮತ್ತು ನಮಗೆ ಅವುಗಳ ಅರಿವು ಇರುವುದಿಲ್ಲ. ಆದರೆ ತಾನು ಸದಾ ಇರುತ್ತೇನೆಂದು ಕೃಷ್ಣ ಉತ್ತರಿಸುತ್ತಾನೆ. (4.5) ಮಾನವನ ಮಟ್ಟದಲ್ಲಿ ಅರ್ಜುನನ ಈ ಪ್ರಶ್ನೆ ಸ್ವಾಭಾವಿಕವಾಗಿದೆ ಹಾಗೂ ತರ್ಕಬದ್ಧವಾಗಿದೆ. ಈ ಹಂತದಲ್ಲಿ ಜನನ ಮರಣಗಳನ್ನು ಅನುಭವಿಸುವ ನಾವು ಸಮಯದ ನಿಯಂತ್ರಣದಲ್ಲಿರುತ್ತೇವೆ. ಜನನದ ಮೊದಲು ಹಾಗೂ ಮರಣದ ನಂತರ ಏನಿರುತ್ತದೆ ಎಂಬ ಸಣ್ಣ ಕಲ್ಪನೆಯು ನಮಗಿರು ವದಿಲ್ಲ. ಕೃಷ್ಣನ ಉತ್ತರವು ಕಾಲಾತೀತನಾದ ಪರಮಾತ್ಮನ ಮಟ್ಟದಲ್ಲಿರುತ್ತದೆ. ಈ ಮೊದಲು ಆತ್ಮ ಶಾಶ್ವತವಾಗಿದ್ದು ನಾವು ಹಳೆ ಬಟ್ಟೆಯನ್ನು ಬದಲಿಸಿದಂತೆ ಅದು ಭೌತಿಕ ದೇಹಗಳನ್ನು ಬದಲಿಸುತ್ತದೆ ಎಂದು ಅವನು ವಿವರಿಸಿದ್ದಾನೆ. ಆ ಶಾಶ್ವತ ಸ್ಥಿತಿಯನ್ನು ಮುಟ್ಟಿದ ಯಾರೇ ಆಗಲಿ ಕಾಲಾತೀತರಾಗಿರುತ್ತಾರೆ. ಹೂವಿಗೆ ತನ್ನ ಅರಳುವ ಶಕ್ತಿಯ ಬಗ್ಗೆ ಗೊತ್ತಿರುವುದಿಲ್ಲ; ಆದರೆ ಆ ಶಕ್ತಿ ಮೊದಲು ಇತ್ತು ಹಾಗೂ ಹೂವಿನ ಜೀವತಾವಧಿಯ ನಂತರವೂ ಇರುತ್ತದೆ.

ಸಮಾಚಾರ ಸಣ್ಣದಲ್ಲ

ಪಿಯುಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಹೊಸಪೇಟೆ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಮಾ.1 ರಿಂದ 20 ರವರಗೆ ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ಸುಗಮವಾಗಿ ನಡೆಸಲು ಕೇಂದ್ರದ ಸುತ್ತಮುತ್ತ 144 ಸೆಕ್ಷನ್ ಅನ್ವಯ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲಿರುವ ಜೆರಾಕ್ಸ್ ಅಂಗಡಿ ಹಾಗೂ ಸೈಬರ್ ಅಂಗಡಿಗಳನ್ನು ಮುಚ್ಚುಲು ಆದೇಶಿಸಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ಮಾತ್ರ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಮೊಬೈಲ್ ತರುವುದು ನಿಷೇಧಿಸಿದೆ. ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವಿಲ್ಲ ಎಂದು ಜಿಲ್ಲಾ ದಂಡಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಕರ್ತವ್ಯ ಲೋಪ: ತಹಸೀಲ್ದಾರ ಅಮಾನತು

ದೇವದುರ್ಗ: ಸರಕಾರದ ಬೊಕ್ಕಸಕ್ಕೆ ಸುಮಾರು 4 ಕೋಟಿ ರು. ಆರ್ಥಿಕ ನಷ್ಟ ಉಂಟು ಮಾಡಿದ ಆರೋಪದ ಮೇಲೆ ಗ್ರೇಡ್-2 ತಹಸೀಲ್ದಾರ್

ವೆಂಕಟೇಶ ಅವರನ್ನು ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ರಾಘವೇಂದ್ರ.ಟಿ. ಅವರು ಅಮಾನತ್ತು ಮಾಡಿ ಆದೇಶಿಸಿದ್ದಾರೆ. ವಿವಿಧ ಪಿಂಚಣಿ ಯೋಜನೆಯ ತಿರಸ್ಕೃತ ಅರ್ಜಿಗಳ ವಿಲೇವಾರಿ ಅಂದರೆ 2024- 25 ನೇ ಸಾಲಿನಲ್ಲಿ ದೇವದುರ್ಗ ತಾಲೂಕಿನಲ್ಲಿ 10470 ಅರ್ಜಿ ವಿಲೇವಾರಿ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆ. ಅನರ್ಹ ಫಲಾನುಭವಿಗಳಿಗೆ ವಿವಿಧ ಮಾಸಾಶನ ಮಂಜೂರು. ಗ್ರಾಮ ಆಡಳಿತ ಅಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ತಿರಸ್ಕರಿಸಿದ್ದ ಅರ್ಜಿಗಳಾದ ಸಂಧ್ಯಾ ಸುರಕ್ಷಾ ಯೋಜನೆಯ 8279 ವೃದ್ಧಾಪ್ಯ ಯೋಜನೆಯ 3478 ಅನರ್ಹ ಫಲಾನುಭವಿಗಳಿಗೆ ಮಾಶಾಸನ ಮಂಜೂರು ಮಾಡಿ ಸರಕಾರಕ್ಕೆ ವಂಚನೆ. ಇದರಿಂದ ಸರಕಾರದ ಬೊಕ್ಕಸಕ್ಕೆ 4 ಕೋಟಿ ನಷ್ಟ ಆಗಿರುವುದರ ಜತೆ ಕರ್ತವ್ಯಲೋಪ ಆರೋಪ ಹಿನ್ನೆಲೆ ಅಮಾನತ್ತುಗೊಳಿಸಲಾಗಿದೆ.

ಅನುಪಯುಕ್ತ ತ್ಯಾಜ್ಯ ದಂಡ, ಪರವಾನಿಗೆ ರದ್ದು

ಸಿಂಧನೂರು: ನಗರ ವ್ಯಾಪ್ತಿಯಲ್ಲಿನ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಪಯೋಗಿಸಿ ಬಿಟ್ಟ ಅನುಪಯುಕ್ತ ತ್ಯಾಜ್ಯವನ್ನು ನಗರಸಭೆಯ ಕಸದ

ಗಾಡಿಯಲ್ಲಿ ಹಾಕಬೇಡಿ, ಹಾಕಿದ್ದಲ್ಲಿ ಮೊದಲ ಹಂತದಲ್ಲಿ 25 ಸಾವಿರ ರು. ಎರಡನೇ ಹಂತದಲ್ಲಿ 2 ಲಕ್ಷ ರು. ದಂಡ ಹಾಕಿ ಆಸ್ಪತ್ರೆಯ ಪರವಾನಗಿ ರದ್ದು ಪಡಿಸಲು ಮುಂದಾಗ ಬೇಕಾಗುತ್ತದೆ ಎಂದು ನಗರಸಭೆ ಪೌರಾಯುಕ್ತ ಮಂಜುನಾಥ ಗುಂಡೂರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ವಚ್ಛ ಭಾರತ ನಿಯಮ ದಡಿಯಲ್ಲಿ ಹೋಟೆಲ್, ಕಿರಾಣಿ ಅಂಗಡಿ, ಮನೆಯಲ್ಲಿನ ಕಸವನ್ನು ಒಣ ಕಸ ಹಾಗೂ ಹಸಿ ಕಸ ಎಂದು ಪ್ರತ್ಯೇಕಿಸಿ ಸ್ವಚ್ಛ ಸಿಂಧನೂರಿಗಾಗಿ ಪ್ರತಿಯೊಬ್ಬರೂ ಸಹಕರಿಸಿ. ಕಾಯಿದೆ ಉಲ್ಲಂಘನೆಯಾದಲ್ಲಿ ಕಾಯಿದೆ ಅನುಸಾರ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಿದ್ದಾರೆ.

ನ್ಯಾಯಾಲಯ ಕಟ್ಟಡ ಉದ್ಘಾಟನೆ ಮಾ.1ಕ್ಕೆ

ಲಿಂಗಸೂಗೂರು: ಎಲ್ಲರ ಸುದೀರ್ಘ ಪ್ರಯತ್ನದಿಂದ ಪಟ್ಟಣದ ಕೆಎಸ್‌ಆರ್‌ಟಿಸಿ ಡಿಪೋ ಮುಂದುಗಡೆ ಮುದಗಲ್ ರಸ್ತೆಯಲ್ಲಿ ನಿರ್ಮಾಣವಾಗಿರುವ ನೂತನ ಜಿಲ್ಲಾ ನ್ಯಾಯಾಲಯದ ಕಟ್ಟಡವನ್ನು ಮಾ.1 ರಂದು ಹೈಕೋರ್ಟ್ ನ್ಯಾಯಮೂರ್ತಿ ಅಂಜಲಿಯ ಅವರು ಉದ್ಘಾಟನೆ ಮಾಡಲಿದ್ದಾರೆ ಎಂದು ತಾಲೂಕ ವಕೀಲರ ಸಂಘದ ಅಧ್ಯಕ್ಷ ಭೂಪನಗೌಡ ಕರಡಕಲ್ ಹೇಳಿದರು. ಜಿಲ್ಲಾ ನ್ಯಾಯಾಲಯಕ್ಕಾಗಿ ಹಾಗೂ ನ್ಯಾಯಾಲಯದ ನೂತನ ಕಟ್ಟಡಕ್ಕಾಗಿ ನಿರಂತರ ಪ್ರಯತ್ನವನ್ನು ಮಾಡುತ್ತಾ ಬಂದಿದ್ದು, 40 ವರ್ಷಗಳಿಂದ ನ್ಯಾಯಾಲಯವು ಹಳೆ ಕಟ್ಟಡದಲ್ಲಿದ್ದು 22 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಕಟ್ಟಡ ಉದ್ಘಾಟನೆಗೆ ಹೈಕೋರ್ಟ್ ನ್ಯಾಯಮೂರ್ತಿ ಅಂಜಲಿಯ ಅವರು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಡಾ.ಶಿವರಾಜ್ ಪಾಟೀಲ್, ಹೈಕೋರ್ಟ್ ನ್ಯಾಯಾಧೀಶರು ಹಾಗೂ ರಾಯಚೂರು ಆಡಳಿತಾತ್ಮಕ ನ್ಯಾಯಾಧೀಶರಾದ ಎಂ.ಜಿ.ಉಮಾ ರವರು ಸೇರಿದಂತೆ ಸಚಿವರು, ಶಾಸಕರು, ಜಿಲ್ಲೆಯ ಎಲ್ಲಾ ತಾಲೂಕಗಳ ನ್ಯಾಯಧೀಶರು ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಪ್ರಗತಿಪರ ಚಿಂತಕರು, ಸಂಘ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ವಕೀಲರಾದ ಮುದಕಪ್ಪ, ಕುಪ್ಪಣ್ಣ ಮಾಣಿಕ್, ಮದು ನಾಡಗೌಡ, ನಾಗರಾಜ ಗಸ್ತಿ ಇದ್ದರು.

{ಡಿ.ಕೆ.ಶಿವಕುಮಾರ್} ಉಪ ಮುಖ್ಯಮಂತ್ರಿ

ಕೆಲಸ ಮಾಡುವವರಿಗೆ ಪಕ್ಷದಲ್ಲಿ ಹುದ್ದೆ ಕೊಡುವಂತೆ ಎಐಸಿಸಿ ಸೂಚನೆ ನೀಡಿದೆ. ಈ ವಿಚಾರವಾಗಿ ಸ್ಥಳೀಯ ಮಟ್ಟದಿಂದ ವರದಿ ತರಿಸಿಕೊಂಡಿದ್ದು, ಸರಿಯಾಗಿ ಕೆಲಸ ಮಾಡುವವರಿಗೆ ಜವಾಬ್ದಾರಿ ನೀಡಲಾಗುವುದು.

ಉತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿ

ಹಂಪಿ ಉತ್ಸವಕ್ಕೆ ದಿನಗಣನೆ: ಫೆ.28ರಂದು ಉದ್ಘಾಟನೆ

ಹೊಸಪೇಟೆ: ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಇಲಾಖೆ ಹಾಗೂ ವಿಜಯನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸಲಾಗುತ್ತಿರುವ ಹಂಪಿ ಉತ್ಸವ-2025 ಕ್ಕೆ ದಿನಗಣನೆ ಆರಂಭವಾಗಿದೆ. ಫೆ.28 ಹಾಗೂ ಮಾರ್ಚ್ 1 ಮತ್ತು 2 ತಾರೀಖಿನಂದು ಮೂರು ದಿನಗಳ ಕಾಲ ವಿಜಯನಗರ ಸಾಮ್ರಾಜ್ಯದ ಗತವೈಭವ ಸಾರುವ ನಿಟ್ಟಿನಲ್ಲಿ ಹಂಪಿ ಉತ್ಸವ ಜರುಗಲಿದೆ.

ಫೆ.28 ಶುಕ್ರವಾರ ಸಂಜೆ 6 ಗಂಟೆಗೆ ಗಾಯತ್ರಿ ಪೀಠದ ಬಳಿ ನಿರ್ಮಿಸಲಾಗಿರುವ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ಜರುಗಲಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಂಪಿ ಉತ್ಸವ ಉದ್ಘಾಟಿಸುವರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘನ ಉಪಸ್ಥಿತರಿರುವರು. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ.ಪಾಟೀಲ್, ಸಾರಿಗೆ ಮತ್ತು ಮುಜುರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ ಗೌರವ ಉಪಸ್ಥಿತರಿರುವರು. ಶಾಸಕ ಎಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಸಂಸದ ಈ.ತುಕಾರಾಂ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ, ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಪಾಲ್ಗೊಳ್ಳುವರು.

ಉತ್ಸವದಲ್ಲಿ ವಿಶೇಷ ಕಾರ್ಯಕ್ರಮಗಳ ಆಕರ್ಷಣೆ: ಫೆ.26 ಬುಧವಾರದಂದು ಸಂಜೆ 6 ಗಂಟೆಗೆ ಹಂಪಿ ವಿರೂಪಾಕ್ಷ ದೇವಸ್ಥಾನದ ಹತ್ತಿರದ ತುಂಗಭದ್ರ ನದಿ ತಟದಲ್ಲಿ ತುಂಗಾರತಿ ನಡೆಯಲಿದೆ. ಫೆ.27 ಬೆಳಗ್ಗೆ 10:30ಕ್ಕೆ ದೋಣಿ ವಿಹಾರಕ್ಕೆ ಚಾಲನೆ ನೀಡಲಾಗುವುದು. ಅಂದು ಮಧ್ಯಾಹ್ನ 3 ಗಂಟೆಗೆ ಹೊಸಪೇಟೆ ನಗರದ ವಡಕರಾಯನ ದೇವಸ್ಥಾನದ ರಥ ಬೀದಿಯಲ್ಲಿ ವಿಜಯನಗರ ವಸಂತ ವೈಭವ ಮೆರಣಿಗೆ ಹಮ್ಮಿಕೊಳ್ಳಲಾಗಿದೆ. ಈ ಬಾರಿ ಅಂಬಾರಿ ಹೊತ್ತ ಆನೆ ಮೆರವಣಿಗೆಯಲ್ಲಿ ಸಾಗಲಿದೆ. ಫೆ.28 ಶುಕ್ರವಾರದಂದು 10 ಗಂ.ಗೆ ಹಂಪಿ ಬೈ ಸ್ಕೈ ಚಾಲನೆ ದೊರಕಲಿದೆ.

ಫೆ.28 ರಂದು ಬೆಳಗ್ಗೆ 10 ರಿಂದ 10.30 ಗಂಟೆಯ ಒಳಗೆ ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಎತ್ತುಗಳ ಪ್ರದರ್ಶನ, ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಮುಂಭಾಗದಲ್ಲಿ ರಂಗೋಲಿ ಸ್ಪರ್ಧೆ, ಮಾತಂಗ ಪರ್ವತ ಮೈದಾನದಲ್ಲಿ ಫಲ ಪುಷ್ಪ ಪ್ರದರ್ಶನ, ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನ, ಸಿರಿಧಾನ್ಯಗಳ ಪಾಕ ಸ್ಪರ್ಧೆ, ಆಹಾರ ಮೇಳ, ವಿಜ್ಞಾನಿಗಳಿಂದ ಉಪನ್ಯಾಸ ಹಾಗೂ ಸಂವಾದ, ಪುಸ್ತಕ ಪ್ರದರ್ಶನ, ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ, ಚಿತ್ರ ಸಂತೆ, ಮತ್ಸ್ಯ ಮೇಳಕ್ಕೆ ಚಾಲನೆ ನೀಡಲಾಗುವುದು. ಸಂಜೆ 6 ಗಂಟೆಗೆ ಹಂಪಿಯ ಆನೆ ಮತ್ತು ಕುದರೆ ಲಾಯ ಆವರಣದಲ್ಲಿ ವಿಜಯನಗರ ವೈಭವ ಸಾರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಉದ್ಘಾಟನೆಯಾಗಲಿದೆ.

ಮಾ.1ರಂದು ಬೆಳಗ್ಗೆ 7 ಗಂಟೆಗೆ ಹಂಪಿಯ ವಿಜಯ ವಿಠಲ ದೇವಾಲಯ ಆವರಣದಲ್ಲಿ ಯೋಗಾಸನ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 10 ಗಂಟೆಗೆ ಹೊಸ ಮಲಪನಗುಡಿಯ ವಿದ್ಯಾರಣ್ಯ ಪೀಠ ಹೈಸ್ಕೂಲ್ ಮೈದಾನದಲ್ಲಿ ಕುಸ್ತಿ ಸೇರಿದಂತೆ ಗ್ರಾಮೀಣ ಕ್ರೀಡೆಗಳಿಗೆ ಚಾಲನೆ ನೀಡಲಾವುದು. ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಕುರಿಗಳ ಪ್ರದರ್ಶನ ಜರುಗಲಿದೆ.

ಮಾ.2 ಭಾನುವಾರದಂದು ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಶ್ವಾನ ಪ್ರದರ್ಶನ ಜರುಗಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಉದ್ದಾನ ವೀರಭದ್ರೇಶ್ವರ ದೇವಸ್ಥಾನದ ಬಳಿ ಜಾನಪದ ವಾಹಿನಿ ಮೆರವಣಿಗೆ ಚಾಲನೆ ನೀಡಲಾಗುವುದು.

ಉತ್ಸವದಲ್ಲಿ ಚಲನಚಿತ್ರ ಕಲಾವಿದರ ದಂಡು: ಗಾಯತ್ರಿ ಪೀಠದ ಬಳಿಯ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಫೆ.28 ರಿಂದ ಮಾ. 1 ಹಾಗೂ 2 ಸೇರಿ ಮೂರು ದಿನಗಳ ಕಾಲ ಸಂಜೆ 6 ಗಂಟೆಯಿಂದ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಚಲನಚಿತ್ರ ಕಲಾವಿದರ ದಂಡು ಪಾಲ್ಗೊಳ್ಳಲಿದೆ.

ಮೊದಲ ದಿನ ಕಾರ್ಯಕ್ರಮದಲ್ಲಿ ನಟ ರಮೇಶ್ ಅರವಿಂದ್, ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್ ಕುಮಾರ್, ನಿರ್ದೇಶಕ ತರುಣ್ ಸುಧೀರ್, ನಟಿಯರಾದ ಪ್ರೇಮ, ವೈಷ್ಣವಿ ಗೌಡ, ಬೇಬಿ ಸಿಹಿ, ಸೋನಲ್ ಮೊಂಥೆರೋ ಭಾಗವಹಿಸುವರು. ಗಾಯಕ ರಾಜೇಶ್ ಕೃಷ್ಣನ್ ಅವರ ತಂಡ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಇವರೊಂದಿಗೆ ಬಿಗ್‌ಬಾಸ್ 11 ಸಂಚಿಕೆ ವಿಜೇತ ಹನುಮಂತು ಭಾಗವಹಿಸುವರು. ವಿವಿಧ ಕಲಾವಿದರು ಮಿಮಿಕ್ರಿ ಕಾರ್ಯಕ್ರಮ ನಡೆಸಿಕೊಡಲಿದೆ.

ಎರಡನೇ ದಿನದ ಕಾರ್ಯಕ್ರಮದಲ್ಲಿ ನಟ ನಟಿಯರಾದ ಉಪೇಂದ್ರ, ಪ್ರಿಯಾಂಕ ಉಪೇಂದ್ರ, ವಸಿಷ್ಠ ಸಿಂಹ, ರ‍್ಯಾಪರ್ ರಚ್ಚು, ಶರಣ್ಯ ಶೆಟ್ಟಿ, ಮೋಕ್ಷ ಕುನಾಲ್, ಅನುಶ್ರೀ, ದಿವ್ಯಾ ಆಲೂರ್, ರಜನಿ ಬೀಟ್ ಗುರು ಭಾಗವಹಿಸುವರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ನೇತೃತ್ವದ ತಂಡ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಸರಿಗಮಪ 21ರ ಸ್ಪರ್ಧಿ ಬಾಳು ಬೆಳಗುಂದಿ ಭಾಗವಹಿಸುವರು. ಕಾಮಿಡಿ ಕಿಲಾಡಿ ತಂಡ ಹ್ಯಾಸ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದೆ.

ಮೂರನೆಯ ದಿನ ನಟ ನಟಿಯರಾದ ವಿಜಯ್ ರಾಘವೇಂದ್ರ, ರಮ್ಯಾ, ಅನು ಪ್ರಭಾಕರ್, ದಿಗಂತ್, ಐಂದ್ರಿತಾ ರೈ, ರಾಗಿಣಿ ದ್ವಿವೇದಿ, ಶೃತಿ ಹರಿಹರನ್, ಬಾವನಾ ರಾವ್ ಭಾಗವಹಿಸುವರು. ಸಂಗೀತ ನಿರ್ದೇಶಕ ಹಾಗೂ ಗಾಯಕ ಗುರುಕಿರಣ್ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಮಾಳೂ ನಪನಾಳ ಗೀತ ಗಾಯನ ನಡೆಸಿಕೊಡುವರು. ಗಿಚ್ಚಿ ಗಿಲಿಗಿಲಿ ತಂಡ ಹ್ಯಾಸ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದೆ.

6 ವೇದಿಕೆಯಲ್ಲಿ ಮೈದಳೆಯಲಿದೆ ಹಂಪಿ ಮೆರಗು

2025ರ ಹಂಪಿ ಉತ್ಸವದ ಅಂಗವಾಗಿ ಗಾಯತ್ರಿ ಪೀಠದ ಬಳಿಯ ಮುಖ್ಯ ವೇದಿಕೆಗೆ ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ ಹೆಸರು ಇಡಲಾಗಿದೆ. ಇದರೊಂದಿಗೆ ಪ್ರತಿ ಬಾರಿಯಂತೆ ಎದುರು ಬಸವಣ್ಣ, ವಿರೂಪಾಕ್ಷೇಶ್ವರ ದೇವಸ್ಥಾನ, ಸಾಸುವೆ ಕಾಳು ಗಣಪ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಹಂಪಿಯ ಆನೆ ಮತ್ತು ಕುದರೆ ಲಾಯ ಆವರಣದಲ್ಲಿ ವಿಜಯನಗರ ವೈಭವ ಸಾರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಬಾರಿ ಹೊಸದಾಗಿ ಮಹಾನವಮಿ ದಿಬ್ಬದ ಬಳಿ 6ನೇ ವೇದಿಕೆ ನಿರ್ಮಾಣ ಮಾಡಲಾಗಿದ್ದು, ಇತರೆ ಹಾಗೂ ಸ್ಥಳೀಯ ಕಲಾವಿದರಿಗೆ ಹೆಚ್ಚು ಅವಕಾಶ ಲಭಿಸಿದ್ದು, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ ಆರಂಭ

ಹೊಸಪೇಟೆ: ನಗರದ 100 ಹಾಸಿಗೆಗಳ ಸರಕಾರಿ ಆಸ್ಪತ್ರೆಯಲ್ಲಿ ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ ಆರಂಭಿಸಲಾಗಿದ್ದು, ಘಟಕವು ರೋಗಿಗಳಿಗೆ ವರದಾನವಾಗಲಿದೆ. ಇದರ ಸದುಪಯೋಗ ಪಡೆಯುವಂತೆ ಶಾಸಕ ಎಚ್.ಆರ್.ಗವಿಯಪ್ಪ ಕರೆ ನೀಡಿದರು.

ನಗರ ಸರಕಾರಿ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ, ಸ್ನೇಹಾ ಕ್ಲಿನಿಕ್ ಹಾಗೂ ಪೌಷ್ಠಿಕ ಪುನರ್ ವಸತಿ ಕೇಂದ್ರಗಳನ್ನು ಉದ್ಘಾಟಿಸಿದರು.

ನಗರದ ಸರಕಾರಿ ಆಸ್ಪತ್ರೆಯಲ್ಲಿರುವ 6 ಡಯಾಲಿಸ್ ಯಂತ್ರಗಳಲ್ಲಿ 1 ಯಂತ್ರವನ್ನು ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್‌ಗಾಗಿ ಮೀಸಲು ಇರಿಸಲಾಗಿದೆ ಎಂದರು.

ಉಳಿದ 5 ಡಯಾಲಿಸಿಸ್ ಯಂತ್ರಗಳ ಪೈಕಿ ಒಂದು ಯಂತ್ರ ತಾಂತ್ರಿಕ ಕಾರಣದಿಂದ ಸ್ಥಗಿತಗೊಂಡಿದೆ. 4 ಡಯಾಲಿಸಿಸ್ ಯಂತ್ರಗಳಲ್ಲಿ ಒಟ್ಟು 25 ಸಾಮಾನ್ಯ ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ. ದಿನ ಒಂದಕ್ಕೆ 3 ಸೈಕಲ್‌ಗಳಲ್ಲಿ ಡಯಾಲಿಸಿಸ್ ನಡೆಸಲಾಗುತ್ತಿದೆ. ತಿಂಗಳಿಗೆ 280 ಹೆಚ್ಚು ಸೈಕಲ್‌ಗಳಲ್ಲಿ ಡಯಾಲಿಸ್ ನಡೆಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಹೆಪಟೈಟಿಸ್ ಬಿ ರೋಗಿಗಳಿಗೂ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೌಲಭ್ಯ ನೀಡಲಾಗುವುದು ಎಂದು ಹೇಳಿದರು.

ಸರಕಾರಿ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಹೆಪಟೈಟಿಸ್ ಸಿ ರೋಗಿಗಳ ಡಯಾಲಿಸಿಸ್ ಘಟಕ, ಸ್ನೇಹಾ ಕ್ಲಿನಿಕ್ ಹಾಗೂ ಪೌಷ್ಠಿಕ ಪುನರ್ ವಸತಿ ಕೇಂದ್ರದಲ್ಲಿ ಶಾಸಕ ಎಚ್.ಆರ್.ಗವಿಯಪ್ಪ ಇದ್ದರು.

ಜಿಲ್ಲೆಯಲ್ಲಿ ಒಟ್ಟು 19 ಹೆಪಟೈಟಿಸ್ ಬಿ ಹಾಗೂ ಸಿ ರೋಗಿಗಳು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಸರಕಾರಿ ಆಸ್ಪತ್ರೆಯಲ್ಲಿ ಇವರಿಗಾಗಿ ಪ್ರತ್ಯೇಕ ಡಯಾಲಿಸಿಸ್ ಘಟಕ ಇರದ ಕಾರಣ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲಾಸ್ಪತ್ರೆಗಳಿಗೆ ಕಳುಹಿಸಕೊಡಲಾಗುತ್ತಿತ್ತು.
-ಎಚ್.ಆರ್.ಗವಿಯಪ್ಪ, ಶಾಸಕ

10 ರಿಂದ 19 ವಯೋಮಾನದ ಹದಿಹರೆಯದವರಲ್ಲಿ ಕಂಡುಬರುವ ಆರೋಗ್ಯ ಹಾಗೂ ಮಾನಸಿಕ ಸಮಸ್ಯೆಗಳ ಪರಿಹಾರಕ್ಕಾಗಿ ಆಪ್ತ ಸಮಾಲೋಚನೆ ನೀಡಲು ಸ್ನೇಹಾ ಕ್ಲಿನಿಕ್ ಸಹ ಆಸ್ಪತ್ರೆಯಲ್ಲಿ ತೆರೆಯಲಾಗಿದೆ. ಇದರೊಂದಿಗೆ ತೀವ್ರ ತರನಾದ ಅಪೌಷ್ಠಿಕತೆ ಹೊಂದಿರುವ ಶಿಶು ಹಾಗೂ ಮಕ್ಕಳ ಹಾರೈಕೆಗಾಗಿ ಪೌಷ್ಠಿಕಾಂಶ ಪುನರ್ವಸತಿ ಕೇಂದ್ರವನ್ನು ಸಹ ತೆರೆಯಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಶಂಕರ್‌ನಾಯ್ಕ್, ಆಡಳಿತ ವೈದ್ಯಾಧಿಕಾರಿ ಡಾ.ಹರಿಪ್ರಸಾದ್ ಉಪಸ್ಥಿತರಿದ್ದರು.

ಕನಸಾಗಿಯೇ ಉಳಿದ ಇಂದಿರಾ ಕ್ಯಾಂಟೀನ್

ಬಸವರಾಜ ಹೂನೂರು ಮುದಗಲ್

ರಾಜ್ಯದಲ್ಲಿ ಬಡವರು ಹಾಗೂ ಮಧ್ಯಮ ವರ್ಗದ ಜನರು ಹಸಿವಿನಿಂದ ಇರಬಾರದು ಎನ್ನುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರಕಾರ ಪಟ್ಟಣದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡಲು ಆದೇಶ ನೀಡಿದೆ. ಆದರೆ ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಈ ಭಾಗದ ಜನರ ಕನಸಾಗಿ ಉಳಿದಿದೆ.

ನಿರ್ಮಾಣದ ಹಂತದಲ್ಲಿರುವ ಇಂದಿರಾ ಕ್ಯಾಂಟೀನ್ ಕಾಮಗಾರಿಯನ್ನು ಅಧಿಕಾರಿಗಳು ಬೇಗ ಮುಗಿಸಿ ಕಡಿಮೆ ದರದಲ್ಲಿ ಬಡ ಜನರಿಗೆ ಉಪಹಾರ ಸಿಗುವಂತೆ ಮಾಡಬೇಕು.
- ಸಜೀವ ಚಲುವಾದಿ ಮಾನವ ಬಂಧುತ್ವ ವೇದಿಕೆ ಮುದಗಲ್ ಘಟಕ

ಪಟ್ಟಣದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣವಾಗುತ್ತಿರುವ ಸುತ್ತಮುತ್ತಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಾಲಾ ಕಾಲೇಜ್, ಬ್ಯಾಂಕ್, ಜೆಸ್ಕಾಂ ಕಚೇರಿ, ಸಮುದಾಯ ಆರೋಗ್ಯ ಕೇಂದ್ರಕ್ಕೆ ಬರುವ ರೋಗಿಗಳಿಗೆ, ಸಂಬಂಧಿಕರಿಗೆ, ಕೂಲಿ ಕಾರ್ಮಿಕರಿಗೆ ಸೇರಿದಂತೆ ಮಧ್ಯಮ ವರ್ಗದ ಜನರಿಗೆ ಕಡಿಮೆ ದುಡ್ಡಿನಲ್ಲಿ ಊಟ ತಿಂಡಿ ಸಿಗುವ ಸಲುವಾಗಿ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಆದೇಶ ನೀಡಿ ಒಂದು ವರ್ಷ ಕಳೆಯುತ್ತಿದೆ.

ಆದರೆ ಪುರಸಭೆ ಅಧಿಕಾರಿಗಳ ಹಾಗೂ ಗುತ್ತಿಗೆದಾರನ ಬೇಜವಾಬ್ದಾರಿತನದಿಂದ ಕಾಮಗಾರಿ ಮಾತ್ರ ಪೂರ್ಣವಾಗಿಲ್ಲ. ಬೇಗನೆ ಇಂದಿರಾ ಕ್ಯಾಂಟೀನ್ ಕಟ್ಟಡದ ಕಾಮಗಾರಿ ನಿರ್ಮಾಣ ಮಾಡಿ ಎಂದು ಮಧ್ಯಮ ವರ್ಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸಂಘ ಸಂಸ್ಥೆಗಳ ಮುಖಂಡರು ಸಂಬಂಧಪಟ್ಟವರಿಗೆ ಮಾಹಿತಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಪುರಸಭೆಯ 23 ವಾರ್ಡಗಳು ಸೇರಿದಂತೆ 60 ಗ್ರಾಮಗಳ ಹಾಗೂ 18 ತಾಂಡಗಳ ಒಳಗೊಂಡಿರುವ 10 ಗ್ರಾ.ಪಂ ಜನರ ವ್ಯಾಪಾರ ವಹಿವಾಟು ಮಾಡುವ ಮುದಗಲ್ ಪಟ್ಟಣವು ಪ್ರಮುಖ ಕೇಂದ್ರ ಸ್ಥಾನವಾಗಿದೆ. ಈ ಕೂಡಲೆ ರಾಜ್ಯ ಸರಕಾರ ಸಂಬಂಧಪಟ್ಟ ಗುತ್ತಿಗೆದಾರನ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಆದಷ್ಟು ಬೇಗ ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಾಣ ಮಾಡಿ ಬಡಜನರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದು ಜನರ ಒತ್ತಾಯವಾಗಿದೆ.

ಕಾರಂಜಿ ಪೈಪ್‌ಗೆ ಹೆಚ್ಚಿದ ಬೇಡಿಕೆ

ಪಾಲಾಕ್ಷ ಬಿ.ತಿಪ್ಪಳ್ಳಿ

ಯಲಬುರ್ಗಾ: ಕೃಷಿ ಇಲಾಖೆಯಿಂದ ಸಬ್ಸಿಡಿ ದರದಲ್ಲಿ ದೊರೆಯುವ ತುಂತುರು ನೀರಾವರಿ ಯೋಜನೆಯ ಪೈಪ್‌ಗಳಿಗೆ ರೈತರಿಂದ ಹೆಚ್ಚಿನ ಬೇಡಿಕೆ ಬಂದಿದೆ. ಬೋರ್‌ನಲ್ಲಿ ಕಡಿಮೆ ನೀರು ಇರುವ ರೈತರು ಸ್ಪಿಂಕ್ಲರ್ ಸೆಟ್ ಕಡೆ ಆಸಕ್ತಿ ವಹಿಸಿದ್ದು, ವರ್ಷದಿಂದ ವರ್ಷಕ್ಕೆ ಅರ್ಜಿ ಸಲ್ಲಿಕೆ ಅಧಿಕವಾಗುತ್ತಿದೆ.

ಕೃಷಿ ಇಲಾಖೆಯಿಂದ ದೊರೆಯುವ ಸ್ಪಿಂಕ್ಲರ್ ಪೈಪ್‌ಗಳು ನಾಲ್ಕೈದು ವರ್ಷ ಬಾಳಿಕೆ ಬರುತ್ತವೆ. ಅಂಥದರಲ್ಲಿ ಎಸ್ಸಿ, ಎಸ್ಟಿಯವರು 7 ವರ್ಷಕ್ಕೊಮ್ಮೆ, ಸಾಮಾನ್ಯ ವರ್ಗದ ರೈತರು ಒಮ್ಮೆ ಖರೀದಿಸಿದರೆ ಮತ್ತೆ ಖರೀದಿಗೆ ಅವಕಾಶವಿಲ್ಲ ಎನ್ನುವ ಲೈಫ್‌ಟೈಮ್ ನಿಯಮ ಜಾರಿಗೆ ತಂದಿರುವುದು ಮಾರಕವಾಗಿದೆ. ಈ ನಿಯಮ ಸಡಿಲಿಕೆ ಆಗಬೇಕು.
-ಗುರುಬಸಪ್ಪ ಅಮರಾವತಿ, ಕೋಳಿಹಾಳ ರೈತ.

ತಾಲೂಕಿನಲ್ಲಿ ಕಳೆದ ಸಲ ಉತ್ತಮವಾಗಿ ಸುರಿದ ಮಳೆ ಮತ್ತು ಕೆರೆ ತುಂಬಿಸುವ ಯೋಜನೆಯಡಿ ಭರ್ತಿಗೊಂಡ ಕೆರೆ ನೀರಿನಿಂದ ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಸುಧಾರಣೆ ಕಂಡಿವೆ. ಆದರೆ, ಮಸಾರಿ ಭಾಗದ ಕಡೆ ಪಂಪ್ ಸೆಟ್ ನೀರು ಕಡಿಮೆ ಪ್ರಮಾಣದಲ್ಲಿ ಇವೆ. ಎರಿ ಮತ್ತು ಮಸಾರಿ ಭಾಗದ ಬಯಲು ಸೀಮೆಯ ರೈತರು ಹೆಚ್ಚಾಗಿ ಶೇಂಗಾ, ಮೆಕ್ಕೆಜೋಳ, ಸಜ್ಜೆ, ಕಡಲೆ, ಮೆಣಸಿನಕಾಯಿ, ಜೋಳ, ಅಲಸಂದಿ, ಹೆಸರು ಹಾಗೂ ತರಕಾರಿ ಬೆಳೆ ಹೆಚ್ಚು ಬೆಳೆಯುತ್ತಾರೆ. ಬೆಳೆಗೆ ಮಿತವಾಗಿ ನೀರು ಬಳಸಲು ವಿನೂತನ ತಂತ್ರಜ್ಞಾನದ ಮೊರೆ ಹೋಗಿದ್ದಾರೆ. ಅಲ್ಲದೆ ಇದರಿಂದ ಹೆಚ್ಚಿನ ಇಳುವರಿ, ನೀರು ಉಳಿತಾಯ, ಶ್ರಮ ಕಡಿಮೆಯಾಗಲಿದೆ. ಹೀಗಾಗಿ ಸ್ಪಿಂಕ್ಲರ್ ಪೈಪ್‌ಗೆ ಬೇಡಿಕೆ ಹೆಚ್ಚಿದೆ.

ಶೇ.90ರಷ್ಟು ಸಬ್ಸಿಡಿ: ಎಸ್ಸಿ, ಎಸ್ಟಿ ಮತ್ತು ಸಾಮಾನ್ಯ ವರ್ಗದ ರೈತರಿಗೆ ಶೇ.90ರಷ್ಟು ಸಬ್ಸಿಡಿಯಲ್ಲಿ ಸ್ಪಿಂಕ್ಲರ್ ಪೈಪ್ ದೊರೆಯುತ್ತಿವೆ. ಸುಮಾರು 2 ಇಂಚಿನ ಪೈಪ್‌ಗೆ 4139 ರು., 2.5 ಇಂಚಿನ ಪೈಪ್‌ಗೆ 4667 ರು, ರೈತರು ವಂತಿಗೆ ಪಾವತಿಸಬೇಕಾಗಿದೆ. ಹಿರೇವಂಕಲಕುಂಟಾ ರೈತ ಸಂಪರ್ಕ ಕೇಂದ್ರಕ್ಕೆ 2024-25ರಲ್ಲಿ 1500ಕ್ಕೂ ಅಧಿಕ ಅರ್ಜಿ ಬಂದಿದ್ದು, ಈಗಾಗಲೇ 1200 ಅರ್ಜಿ ಕ್ಲಿಯರ್ ಆಗಿವೆ. ಯಲಬುರ್ಗಾ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಗೆ 1700 ಅರ್ಜಿ ಬಂದಿದ್ದು, 750 ಸೆಟ್‌ಪೈಪ್ ವಿತರಿಸಲಾಗಿದೆ. ಮಸಾರಿ ಭಾಗದಲ್ಲಿ ಸ್ಪಿಂಕ್ಲರ್ ಪೈಪ್‌ಗೆ ಹೆಚ್ಚಿನ ಬೇಡಿಕೆ ಇದೆ.

ನಿಯಮ ಸಡಿಲಿಕೆಗೆ ರೈತರ ಒತ್ತಾಯ

ಎಸ್ಸಿ, ಎಸ್ಟಿ ವರ್ಗದವರು ಒಂದು ಸಲ ಸ್ಪಿಂಕ್ಲರ್ ಪೈಪ್ ಖರೀದಿಸಿದರೆ 7 ವರ್ಷದ ವರೆಗೂ ಮತ್ತೇ ಸಬ್ಸಿಡಿ ಪಡೆಯಲು ಅರ್ಹರಿಲ್ಲ. ಆದರೆ, ಸಾಮಾನ್ಯ ವರ್ಗದ ರೈತರು ಒಮ್ಮೆ ತೆಗೆದುಕೊಂಡರೆ ಲೈಫ್‌ಟೈಮ್ ಖರೀದಿ ಮಾಡಲು ಬರುವುದಿಲ್ಲ ಎಂಬ ಸರಕಾರದ ನಿಯಮ ರೈತರಿಗೆ ಶಾಪವಾಗಿ ಪರಿಣಮಿಸಿದೆ. ಈ ನಿಯಮ ಸಡಿಲಿಕೆ ಮಾಡಬೇಕು ಎನ್ನುವುದು ರೈತರ ಆಗ್ರಹ. ಅಲ್ಲದೆ 2023-24ರಿಂದ ಸರಕಾರ ಸ್ಪಿಂಕ್ಲರ್ ಪೈಪ್ ದರ ಏರಿಕೆ ಮಾಡಿದ್ದು, ಕೆಲ ರೈತರು ಅರ್ಜಿ ಸಲ್ಲಿಸಿದ್ದರೂ ಹಣ ಪಾವತಿಸಿ ಪೈಪ್ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ.

ಬಲೆಗೆ ಬಿದ್ದ ಚಿರತೆ: ಸೆಲ್ಫಿಗೆ ಮುಗಿಬಿದ್ದ ಜನತೆ

ರಾಯಚೂರು: ಕಳೆದ ಕೆಲವು ತಿಂಗಳಿಂದ ತಾಲೂಕಿನ ಮಲಿಯಾದ ಅರಣ್ಯ ಪ್ರದೇಶದಲ್ಲಿ ನೆಲೆಸಿದ್ದ ಚಿರತೆ ಮಂಗಳವಾರ ಬೆಳಗ್ಗೆ ಅರಣ್ಯ ಇಲಾಖೆ ಬೋನಿಗೆ ಬಿದ್ದಿದೆ.

ತಾಲೂಕಿನ ಅರಣ್ಯ ಪ್ರದೇಶದಲ್ಲಿ ಚಿರತೆ ಗೋಶಾಲೆಯ ಗೋವುಗಳ ಮೇಲೆ ದಾಳಿ ನಡೆಸಿ, ಐದಾರು ಗೋವಿಗಳನ್ನು ಸಾಯಿಸಿತ್ತು. ಅರಣ್ಯ ಇಲಾಖೆಯು ನಿರಂತರವಾಗಿ ಹಗಲು ರಾತ್ರಿ ಕಾರ್ಯಚರಣೆ ನಡೆಸಿತ್ತು. ಚಿರತೆ ಚಲನವಲನಗಳನ್ನು ಕ್ಯಾಮೆರಾಗಳ ಮೂಲಕ ಸೆರೆಹಿಡಿದು ಬೋನ್‌ಗಳನ್ನು ಅಳವಡಿಸಿತ್ತು. ಅರಣ್ಯ ಇಲಾಖೆ ಅಧಿಕಾರಿಗಳ ನಿದ್ದೆಗೆಡಿಸಿದ್ದ ಚಿರತೆ ಆಕಳು, ಮೇಕೆ ತಿಂದು ಹಾಕಿ ಜನರಲ್ಲಿ ಭೀತಿ ಹುಟ್ಟಿಸಿದ್ದ ಚಿರತೆಯ ಹಿಡಿಯಲು ನಾಲ್ಕು ಬೋನ್‌ಗಳನ್ನು ಅಳಡಿಸಿದ್ದ ಅರಣ್ಯ ಇಲಾಖೆ ಕೊನೆಗೂ ಚಿರತೆಯನ್ನು ಬೋನಿಗೆ ಹಾಕುವಲ್ಲಿ ಯಶಸ್ಸು ಕಂಡಿದೆ.

ಅರಣ್ಯ ಇಲಾಖೆಗೆ ಮೂರ ನಾಲ್ಕು ವರ್ಷದ ಗಂಡು ಚಿರತೆ ಬೋನಿಗೆ ಬಿದ್ದಿರುವುದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಪ್ರಯತ್ನವನ್ನು ಗ್ರಾಮಸ್ಥರು ಶ್ಲಾಘಿಸಿದ್ದಾರೆ.

ಫೋಟೋಗಾಗಿ ಮುಗಿಬಿದ್ದ ಜನ: ಮಲಿಯಾಬಾದ್‌ನ ಅರಣ್ಯ ಪ್ರದೇಶದ ಬೋನಿಗೆ ಬಿದ್ದ ಸುದ್ದಿ ಗೊತ್ತಾಗುತ್ತಿದ್ದಂತೆ ಚಿರತೆ ನೋಡಲು ಮತ್ತು ಅದರೊಂದಿಗೆ ಸೆಲ್ಫಿ ತೆಗೆಸಿಕೊಳ್ಳಲು ಗ್ರಾಮಸ್ಥರು ಮುಗಿಬಿದ್ದಿದ್ದರು. ಅರಣ್ಯ ಇಲಾಖೆ ಅಧಿಕಾರಿಗಳ ಜನರನ್ನು ನಿಯಂತ್ರಣ ಹರ ಸಾಹಸ ಪಟ್ಟರು. ಕೊನೆಗೆ ಚಿರತೆ ಬೋನನ್ನು, ಟ್ರಾಕ್ಟರ್‌ನಲ್ಲಿರಿಸಿ ಚಿರತೆ ಕಾಣದಂತೆ ಮರೆ ಮಾಚಿದರೂ ಜನರು ಮಾತ್ರ ಚಿರತೆ ಫೋಟೋ ಪಡೆಯಲು ದುಂಬಾಲು ಹತ್ತಿದರು. ಮಲಿಯಾಬಾದ್ ನಿಂದ ರಾಯಚೂರಿಗೆ ತರುವವರೆಗೂ ಚಿರತೆಯಂತೆ ಬಿನ್ನಟ್ಟಿ ಫೋಟೋ ಪಡೆದುಕೊಂಡು ಖುಷಿಪಟ್ಟರು.

ಕಳೆದ ಸುಮಾರು ತಿಂಗಲಿನಿಂದ ಮಲಿಯಾಬಾದ್ ಗ್ರಾಮದ ಹತ್ತಿರ ಚಿರತೆಯೊಂದು ಪ್ರತ್ಯಕ್ಷವಾಗಿದ್ದು, ಸೆರೆಹಿಡಿಯಲು ಹಾಕಿದ್ದ ಬೋನಿಗೆ ಚಿರತೆ ಬಿದ್ದಿದೆ. ಸೆರೆ ಹಿಡಿಯಲಾದ ಗಂಡು ಚಿರತೆಯನ್ನು ಪಶು ವೈದ್ಯರ ಸಲಹೆಯ ಮೇರೆಗೆ ಅವರಿಂದ ಪ್ರಮಾಣ ಪತ್ರ ದೊರೆತ ನಂತರ ಚಿರತೆಯನ್ನು ಮೃಗಾಲಯಕ್ಕೆ ಸ್ಥಳಾಂತರಿಸಲಾಗುವುದು.
-ಪ್ರವೀಣ ಕುಮಾರ, ಉಪ ಅರಣ್ಯ ಸಂರಕ್ಷಣಾಧಿಕಾರಿ.

ಮರಾಠಿ ಪುಂಡರನ್ನು ಬಂಧಿಸಿ

ಗಂಗಾವತಿ: ಬೆಳಗಾವಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ ಹಾಗೂ ಡ್ರೈವರ್ ಮೇಲೆ ಮರಾಠಿ ಭಾಷಿಕರು ಹಲ್ಲೆಮಾಡಿರುವುದನ್ನು ಖಂಡಿಸಿ ಹಾಗೂ ಎಂಇಎಸ್ ಪುಂಡರ ಬಂಧನಕ್ಕೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಕಾರ್ಯಕರ್ತರು ಹಾಗೂ ಕೆಎಸ್‌ಆರ್‌ಟಿಸಿ ಸಿಬ್ಬಂದಿ ನಗರದ ಕೃಷ್ಣದೇವರಾಯ ಸರ್ಕಲ್‌ನಲ್ಲಿ ಮಂಗಳವಾರ ಪ್ರತಿಭಟಿಸಿದರು. ಸಂಘಟನೆಯ ತಾಲೂಕು ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಮಾತನಾಡಿ, ಕರ್ನಾಟಕದಲ್ಲಿ ಇರುವ ಬೆಳಗಾವಿಯಲ್ಲಿ ಕಳೆದ ಸುಮಾರು ವರ್ಷಗಳಿಂದ ಮಹಾರಾಷ್ಟ್ರದ ಎಂಇಎಸ್ ಸಂಘಟನೆಯ ಪುಂಡರ ದಾಂದಲೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಳೆದ ಎರಡ್ಮೂರು ದಿನಗಳ ಹಿಂದೆ ರಾಜ್ಯದ ಕೆಎಸ್‌ಆರ್‌ಟಿಸಿ ಬಸ್‌ಗಳ ನಿರ್ವಾಹಕರಿಗೆ, ಡ್ರೈವರ್‌ಗಳಿಗೆ ಏಕಾಏಕಿಯಾಗಿ ಹಲ್ಲೆ ನಡೆಸಿ, ಅವಮಾನಿ ಸಿದ್ದಾರೆ. ಬಸ್ ನಿರ್ವಾಹಕ ಕನ್ನಡದಲ್ಲಿ ಮಾತಾಡಿ ಎಂದು ಹೇಳಿದ ಕಾರಣಕ್ಕೆ ಎಂಇಎಸ್ ಪುಂಡರು ದಾಂದಲೆ ನಡೆಸುತ್ತಿದ್ದಾರೆ. ಕರ್ನಾಟಕದಲ್ಲಿ ಕನ್ನಡ ಭಾಷೆ ಮಾತನಾಡಿ ಎಂದು ಹೇಳುವುದು ತಪ್ಪು ಎನ್ನುವ ಮಟ್ಟಕ್ಕೆ ಬಂದಿದೆ. ಕೆಎಸ್‌ಆರ್‌ಟಿಸಿ ನಿರ್ವಾಹಕರಿಗೆ ಹಲ್ಲೆ ನಡೆಸಿ, ಎಂಇಎಸ್ ಪುಂಡರನ್ನು ಕೂಡಲೇ ಬಂಧನ ಮಾಡಿ, ಕಾನೂನು ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆ ನಡೆಸಿ, ನಂತರ ತಹಸೀಲ್ದಾರ ಮಹಾಂತ ಗೌಡ ಪಾಟೀಲ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸಂಘಟನೆಯ ಕಾರ್ಯಕರ್ತರಾದ ಪ್ರಕಾಶ ಭೋವಿ, ಮಾಂತಗೊಂಡ ಬಸವರಾಜ, ನಾಗರಾಜ ಐಲಿ, ಕೆಎಸ್‌ಆರ್‌ಟಿಸಿ ಸಿಬ್ಬಂದಿ ದುರುಗಪ್ಪ, ಹನುಮಂತಪ್ಪ, ಸುನೀಲ್‌ಗೌಡ, ಸಂಗಮೇಶ, ಭೀಮಪ್ಪ ಗುಳದಳ್ಳಿ, ಹುಸೇನ ಬಾಷಾ ಇದ್ದರು.

ಉಪಲೋಕಾಯುಕ್ತರ ಪ್ರವಾಸ ಮಾ.13ರಿಂದ

ಹೊಸಪೇಟೆ: ಉಪಲೋಕಾಯುಕ್ತರಾದ ಬಿ.ಬೀರಪ್ಪ ಅವರು ಮಾರ್ಚ್ 13 ರಿಂದ 15 ರವರೆಗೆ ವಿಜಯನಗರ ಪ್ರವಾಸ ಕೈಗೊಳ್ಳುವರು. ಮಾ.14 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ಹೊಸಪೇಟೆ ನಗರದ ಡ್ಯಾಂ ರಸ್ತೆ, ನೆಹರು ಕಾಲೋನಿ, ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನದ ಎದುರು ಇರುವ ಸಹಕಾರಿ ಕಲ್ಯಾಣ ಮಂಟಪದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಹಾಗೂ ವಿಚಾರಣೆ ನಡೆಸುವರು. ಜಿಲ್ಲೆಯಲ್ಲಿ ಯಾರಿಗಾದರೂ ಸರಕಾರಿ ಅಧಿಕಾರಿ, ನೌಕರರಿಂದ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಮತ್ತು ಭ್ರಷ್ಟಾಚಾರ ಮತ್ತು ದುರಾಡಳಿತದಲ್ಲಿ ತೊಡಗಿದ್ದರೆ ಸಾರ್ವಜನಿಕರು ಉಪಲೋಕಾಯುಕ್ತರ ಮುಂದೆ ತಮ್ಮ ದೂರುಗಳನ್ನು ಲಿಖಿತ ರೂಪದ ಮುಖಾಂತರ ಸಲ್ಲಿಸಬಹುದಾಗಿದೆ. ಮಾ.15 ರಂದು ಸಹಕಾರಿ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರ ವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ರವರಗೆ ವಿಜಯನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಉಪಲೋಕಾಯುಕ್ತರ ಕಾರ್ಯ ವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ ತನಿಖೆ ಹಾಗೂ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ ದೂರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ.

ನಿರ್ವಾಹಕನ ಮೇಲೆ ಹಲ್ಲೆ ಖಂಡನೀಯ

ಕೊಪ್ಪಳ: ಬೆಳಗಾವಿಯಲ್ಲಿ ಬಸ್ ನಿರ್ವಾಹಕನ ಮೇಲೆ ಹಲ್ಲೆ ಮಾಡಿ, ಅವರ ಮೇಲೆ ಪೋಸ್ಕೋ ಪ್ರಕರಣ ದಾಖಲಿಸಿರುವ ಪ್ರಕರಣ ಖಂಡಿಸಿ, ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಕೊಪ್ಪಳದಲ್ಲಿ ಎಡಿಸಿ ಸಿದ್ದರಾಮೇಶ್ವರ ಮೂಲಕ ಸಿಎಂ ಸಿದ್ದರಾಮಯ್ಯರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ನಿರ್ವಾಹಕ ಮಹಾದೇವಪ್ಪ ಹುಕ್ಕೇರಿ ಫೆ.21 ರಂದು ಬೆಳಗಾವಿಯಿಂದ ಸುಳೆಬಾವಿ ಗ್ರಾಮಕ್ಕೆ ಸಂಚರಿಸುವ ಬಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಮಾರ್ಗದ ಪಂತಬಾಳೆಕುಂದ್ರಿ ಗ್ರಾಮಕ್ಕೆ ಒಬ್ಬ ಮಹಿಳೆ, ಯುವಕ ಜತೆ ಸಂಚರಿಸುವಾಗ ಘಟನೆ ನಡೆದಿದೆ. ಟಿಕೇಟ್ ತೆಗೆದುಕೊಳ್ಳಿ ಎಂದು ಕೇಳಿರುತ್ತಾರೆ. ಮಹಿಳೆ ಆಧಾರ್ ಕಾರ್ಡ್ ತೋರಿಸಿ ತನ್ನ ಜೊತೆಗಿನ ಯುವಕನಿಗೂ ಫ್ರೀ ಟಿಕೇಟ್ ನೀಡುವಂತೆ ಕೇಳಿ ಗಲಾಟೆ ಮಾಡಿದ್ದಾರೆ. ಈ ವೇಳೆ ಮರಾಠಿಯಲ್ಲಿ ಮಾತನಾಡಿ ಎಂದು ನಿರ್ವಾಹಕರೊಂದಿಗೆ ವಾಗ್ವಾದಕ್ಕೆ ಇಳಿದಿದ್ದಾರೆ. ಈ ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು. ಇಷ್ಟೇ ಅಲ್ಲದೇ ಹಲ್ಲೆಗೆ ಒಳಗಾದ ನಿರ್ವಾಹಕನ ಮೇಲೆ ಸುಳ್ಳು ಪೋಕ್ಸೋ ಪ್ರಕರಣ ದಾಖಲು ಮಾಡಿರುವುದು ಖಂಡನೀಯ. ಇದು ಅತ್ಯಂತ ಅಮಾನವೀಯ ಘಟನೆ. ಸಾರಿಗೆ ನೌಕರರ ಸುರಕ್ಷತೆಗಾಗಿ ಸೂಕ್ತ ಭದ್ರತೆ ಕಲ್ಪಿಸಬೇಕು. ಸುಳ್ಳು ಪೋಕ್ಸೋ ಪ್ರಕರಣ ದಾಖಲಿಸಿರುವ ಬೆಳಗಾವಿ ನಗರ ಪೊಲೀಸ್ ಕಮಿಷನರ್ ಮೇಲೆ ಕ್ರಮ ಕೈಗೊಳ್ಳಬೇಕು. ಎಲ್ಲ ನಗರ ಹಾಗೂ ಗ್ರಾಮೀಣ ಬಸ್ ನಿಲ್ದಾಣಗಳಲ್ಲಿ ಪೊಲೀಸ್ ಚೌಕಿ ನಿರ್ಮಿಸಬೇಕು ಎಂದು ಒತ್ತಾಯಿಸಿದ್ದಾರೆ.

ಯೂನಿಯನ್ ವಿಭಾಗೀಯ ಅಧ್ಯಕ್ಷ ಬಸಯ್ಯ ಕಡ್ಲಿ, ಪ್ರಧಾನ ಕಾರ್ಯದರ್ಶಿ ಎ.ಬಿ.ದಿಂಡೂರ, ರಾಜ್ಯ ಜಂಟಿ ಕಾರ್ಯದರ್ಶಿ ಎ.ಜಿ.ಮಣ್ಣೂರ, ಜನಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಎಸ್.ಎಗಘಾರ, ಮಲ್ಲಪ್ಪ ನೂಟಗಾರ, ಸತೀಶ ಮುಚ್ಚಂಡಿ, ಬಿ.ಕೆ.ಮುದೇನೂರು, ಶಿವಕುಮಾರ ಬೀಳಗಿ ಮಠ, ಗೂಡು ಸಾಬ್ ಸವಡಿ ಇದ್ದರು.



ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಯೂನಿಯನ್‌ನಿಂದ ಕೊಪ್ಪಳದಲ್ಲಿ ಎಡಿಸಿ ಸಿದ್ದರಾಮೇಶ್ವರ ಮೂಲಕ ಸಿಎಂ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸಿದರು.

ಆಂಬ್ಯುಲೆನ್ಸ್ ದುರುಪಯೋಗ

ಹೊಸಪೇಟೆ: ಫೆ.14 ರಂದು ಮೈಲಾರ ಜಾತ್ರೆ ಕಾರ್ಣಿಕೋತ್ಸವದಲ್ಲಿ ಆರೋಗ್ಯ ಇಲಾಖೆಯ ಆಂಬ್ಯುಲೆನ್ಸ್ ವಾಹನ ದುರುಪಯೋಗವಾದ ಪ್ರಸಂಗ ಬೆಳಕಿಗೆ ಬಂದಿದೆ. ಲಕ್ಷಾಂತರ ಜನ ಸೇರುವ ಜಾತ್ರೆಯಲ್ಲಿ ಆರೋಗ್ಯ ಇಲಾಖೆಯ ಆಂಬ್ಯುಲೆನ್ಸನಲ್ಲಿ ಸಂಬಂಧಿಕರನ್ನು ಕೂರಿಸಿಕೊಂಡು ಸೈರನ್‌ನೊಂದಿಗೆ ಜಾತ್ರೆ ಗದ್ದಲದಲ್ಲಿ ಸಂಚರಿಸಿದೆ. ಸೈರನ್ ಸದ್ದಿನೊಂದಿಗೆ ಆಂಬ್ಯುಲೆನ್ಸ್ ಬುರುವುದನ್ನು ನೋಡಿದ ಪೊಲೀಸರು ಜನರನ್ನು ಚದುರಿಸಿ ಜಾಗ ಮಾಡಿಕೊಟ್ಟಿದ್ದಾರೆ. ಪದೇ ಪದೇ ಅಂಬ್ಯುಲೆನ್ಸ್ ಸೈರನ್‌ನೊಂದಿಗೆ ಓಡಾಟ ಮಾಡುತ್ತಿರುವುದನ್ನು ಗಮನಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಅನುಮಾನಿಸಿ ಆಂಬ್ಯುಲೆನ್ಸ್ ತಡೆದು ತಪಾಸಣೆ ನಡೆಸಿದಾಗ ಆರೋಗ್ಯ ಇಲಾಖೆ ಅಧಿಕಾರಿ ಸಿಬ್ಬಂದಿ ಸಂಬಂಧಿಕರನ್ನು ಕರೆದುಕೊಂಡು ಹೋಗುತ್ತಿದ್ದುದು ಪತ್ತೆಯಾಗಿದೆ. ಮೋಟಾರು ಕಾಯಿದೆ ಅನುಸಾರ ಇದು ಶಿಕ್ಷಾರ್ಹ ಅಪರಾಧವಾಗಿದೆ. ಈ ಘಟನೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್ ಸೋಮವಾರ ಜಿಲ್ಲಾಧಿಕಾರಗಳೊಂದಿಗೆ ಸಭೆಯಲ್ಲಿ ಗಮನಕ್ಕೆ ತಂದರು. ಕೂಡಲೇ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಂಬಂಧ ಪಟ್ಟ ಆರೋಗ್ಯ ಇಲಾಖೆ ಅಧಿಕಾರಿಗೆ ಕೂಡಲೇ ನೋಟಿಸ್ ನೀಡಿ, ದಂಡ ವಸೂಲಿ ಮಾಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ನಿರ್ದೇಶನ ನೀಡಿದರು.

ಸಮಾಚಾರ ಸಣ್ಣದಲ್ಲ

ಬ್ರೈಡನ್ ಕಾರ್ಸ್ ಬದಲು ರೆಹಾನ್ ಅಹ್ಮದ್

ಕರಾಚಿ: ಚಾಂಪಿಯನ್ಸ್ ಟ್ರೋಫಿಯಲ್ಲಿ ಈಗಾಗಲೇ ಆಡಿದ ಮೊದಲ ಪಂದ್ಯದಲ್ಲಿ ಸೋಲು ಕಂಡಿರುವ ಇಂಗ್ಲೆಂಡ್ ತಂಡಕ್ಕೆ ಇದೀಗ ಮತ್ತೊಂದು ಹಿನ್ನಡೆಯಾಗಿದೆ. ಅಫಘಾನಿಸ್ತಾನ ವಿರುದ್ಧದ ಪಂದ್ಯಕ್ಕೂ ಮುನ್ನವೇ ತಂಡದ ಸ್ಟಾರ್ ವೇಗಿ ಬ್ರೈಡನ್ ಕಾರ್ಸ್ ಗಾಯದ ಸಮಸ್ಯೆಯಿಂದ ಟೂರ್ನಿಯಿಂದಲೇ ಹೊರಬಿದ್ದಿದ್ದು, ಅವರ ಸ್ಥಾನಕ್ಕೆ ಸ್ಪಿನ್ನರ್ ರೆಹಾನ್ ಅಹ್ಮದ್ ಬದಲಿ ಆಟಗಾರನಾಗಿ ತಂಡ ಸೇರಿದ್ದಾರೆ. 'ಇಂಗ್ಲೆಂಡ್ ಬೌಲಿಂಗ್ ಆಲ್‌ರೌಂಡರ್ ಬ್ರೈಡನ್ ಕಾರ್ಸ್ ಎಡಗಾಲಿನ ಹೆಬ್ಬೆರಳಿನ ಗಾಯದಿಂದಾಗಿ ಐಸಿಸಿ ಪುರುಷರ ಚಾಂಪಿಯನ್ಸ್ ಟ್ರೋಫಿಯ ಉಳಿದ ಪಂದ್ಯಗಳಿಂದ ಹೊರಗುಳಿದಿದ್ದಾರೆ, ಸ್ಪಿನ್ನರ್ ರೆಹಾನ್ ಅಹ್ಮದ್ ತಂಡಕ್ಕೆ ಬಂದಿರುವುದು ಸ್ಪಿನ್ ದಾಳಿಯನ್ನು ಬಲಪಡಿಸಿದೆ. ಈಗಾಗಲೇ ತಂಡದಲ್ಲಿರುವ ಏಕೈಕ ಸ್ಪಿನ್ನರ್ ಆದಿಲ್ ರಶೀದ್ ಅವರಿಗೆ ಬೆಂಬಲ ಸಿಕ್ಕಂತಾಗಿದೆ' ಎಂದು ಇಸಿಬಿ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಡ್ವೇನ್ ಬ್ರಾವೋ ಸ್ಥಾನಕ್ಕೆ ಶ್ರೀಧರನ್ ಶ್ರೀರಾಮ

ಚೆನ್ನೈ: ಮುಂಬರುವ ಐಪಿಎಲ್ 18ನೇ ಆವೃತ್ತಿಗೆ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಭಾರತದ ಮಾಜಿ ಆಲ್‌ರೌಂಡರ್ ಶ್ರೀಧರನ್ ಶ್ರೀರಾಮ್ ಅವರನ್ನು

ತಂಡದ ಸಹಾಯಕ ಬೌಲಿಂಗ್ ಕೋಚ್ ಆಗಿ ನೇಮಿಸಿದೆ. ವಿಂಡೀಸ್‌ನ ಡ್ವೇನ್ ಬ್ರಾವೋ ಕೆಕೆಆರ್ ತಂಡಕ್ಕೆ ಸಲಹೆಗಾರನಾಗಿ ಆಯ್ಕೆಯಾದ ಕಾರಣ ಅವರ ಸ್ಥಾನಕ್ಕೆ ಇದೀಗ ಶ್ರೀರಾಮ್ ಅವರನ್ನು ನೇಮಿಸಲಾಗಿದೆ. ಅವರು ಈ ಹಿಂದೆ ಪಂಜಾಬ್‌ನ ಬೌಲಿಂಗ್ ಕೋಚ್ ಆಗಿ, ಆರ್‌ಸಿಬಿಯ ಬ್ಯಾಟಿಂಗ್ ಮತ್ತು ಸ್ಪಿನ್ ಬೌಲಿಂಗ್ ಕೋಚ್ ಆಗಿ, ಆಸ್ಟ್ರೇಲಿಯಾದ ಸಹಾಯಕ ತರಬೇತುದಾರರಾಗಿ 2021ರ ವಿಶ್ವಕಪ್ ವಿಜೇತ ತಂಡದ ಭಾಗವಾಗಿದ್ದರು. ಶ್ರೀರಾಮ್ 2000 ಮತ್ತು 2004ರ ನಡುವೆ 8 ಏಕದಿನ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಏಷ್ಯಾಕಪ್ ಹಾಗೂ ಟಿ20 ವಿಶ್ವಕಪ್‌ಗಿಂತ ಮೊದಲು ಬಾಂಗ್ಲಾದೇಶದ ಟಿ20 ಸಲಹೆಗಾರನಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ವಿರಾಮ
ಪ್ರತಿ ಭಾನುವಾರ

ಚೊಚ್ಚಲ ಪ್ರಶಸ್ತಿಗಾಗಿ ಕೇರಳ, ಮೂರನೇ ಪ್ರಶಸ್ತಿಗೆ ವಿದರ್ಭ ಸೆಣಸಾಟ

ಇಂದಿನಿಂದ ರಣಜಿ ಫೈನಲ್

ನಾಗ್ಪುರ: ರಣಜಿ ಟ್ರೋಫಿ ಕ್ರಿಕೆಟ್ ಫೈನಲ್ ಇಂದಿನಿಂದ ಆರಂಭವಾಗಿ ಮಾರ್ಚ್ 2ರ ತನಕ ನಡೆಯಲಿದ್ದು, ಚೊಚ್ಚಲ ಪ್ರಶಸ್ತಿಗಾಗಿ ಕೇರಳ ತಂಡವು ಮೂರನೇ ಬಾರಿಗೆ ಪ್ರಶಸ್ತಿಯತ್ತ ಕಣ್ಣಿಟ್ಟಿರುವ ವಿದರ್ಭ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್‌ನಲ್ಲಿ ಗುಜರಾತ್ ವಿರುದ್ಧ ಪಂದ್ಯ ಡ್ರಾ ಮಾಡಿಕೊಂಡಿರುವ ಕೇರಳ ತಂಡವು ಪ್ರಥಮ ಇನ್ನಿಂಗ್ಸ್‌ನ ಕೇವಲ 2 ರನ್‌ಗಳ ಮುನ್ನಡೆಯ ಆಧಾರದಿಂದ ಫೈನಲ್ ಪ್ರವೇಶಿದ್ದರೆ, ಮುಂಬೈ ವಿರುದ್ಧ ಗೆದ್ದಿರುವ ವಿದರ್ಭ ತಂಡವು ಈ ಬಾರಿ ರಣಜಿ ಟ್ರೋಫಿಯನ್ನು ತನ್ನ ಮುಡಿಗೇರಿಸುವ ತವಕದಲ್ಲಿದೆ.

'ಕ್ರಿಕೆಟ್‌ನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ, ಹಾಗಾಗಿ ನಾವು ಕೇರಳ ತಂಡವನ್ನು ರಣಜಿ ಫೈನಲ್‌ನಲ್ಲಿ ಲಘುವಾಗಿ ಪರಿಗಣಿಸಿಲ್ಲ, 74 ವರ್ಷಗಳ ರಣಜಿ ಇತಿಹಾಸದಲ್ಲೇ ಈ ಸಲದ ಕೇರಳದ ಸಾಧನೆ ನಿಜಕ್ಕೂ ಅಚ್ಚರಿ' ಎಂದು ವಿದರ್ಭ ತಂಡದ ನಾಯಕ ಅಕ್ಷಯ್ ವಾಡ್ಕರ್ ಹೇಳಿದ್ದಾರೆ.

ವಿದರ್ಭ ತಂಡ ಈ ರಣಜಿ ಋತುವಿನಲ್ಲಿ ಉತ್ತಮ ಫಾರ್ಮ್‌ನಲ್ಲಿದೆ. ಆಡಿರುವ ಒಂಬತ್ತು ಪಂದ್ಯಗಳ ಪೈಕಿ ಎಂಟು ಪಂದ್ಯಗಳನ್ನು ಅದು ಗೆದ್ದು, ಒಂದು ಪಂದ್ಯದಲ್ಲಿ ಡ್ರಾ ಸಾಧಿಸಿದೆ. ಎಂಟರ ಘಟ್ಟದ ಪಂದ್ಯದಲ್ಲಿ ತಮಿಳುನಾಡು ತಂಡವನ್ನು 198 ರನ್‌ಗಳಿಂದ ಮತ್ತು ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಮುಂಬೈಯನ್ನು 80 ರನ್‌ಗಳಿಂದ ಸೋಲಿಸಿದೆ. 2017-18 ಮತ್ತು 2018-19ರಲ್ಲಿ ಗೆಲುವು ಸಾಧಿಸಿ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿದ್ದ ವಿದರ್ಭ ತಂಡವು ಕಳೆದ ನಾರಿ ಫೈನಲ್‌ನಲ್ಲಿ ಮುಂಬೈಗೆ ಮಣಿದಿತ್ತು. ಈ ವರ್ಷ ವಿಜಯ್ ಹಜಾರೆ ಟ್ರೋಫಿಯಲ್ಲೂ ವಿದರ್ಭ ಫೈನಲ್ ತಲುಪಿತ್ತು. ಯಶ್ ರಾಥೋಡ್ ಬ್ಯಾಟಿಂಗ್‌ನಲ್ಲಿ ಈ ರಣಜಿ ಋತುವಿನಲ್ಲಿ 933 ರನ್‌ಗಳನ್ನು ಕಲೆ ಹಾಕಿದ್ದಾರೆ. ಇದರಲ್ಲಿ ಐದು ಶತಕಗಳು, ಮೂರು ಅರ್ಧ ಶತಕಗಳು ಸೇರಿವೆ. ಜೊತೆಗೆ ದಾನಿಶ್ ಮಾಲೇಕರ್ (557) ಹಾಗೂ ಧ್ರುವ್ ಶೋರೆ ಅವರ ಕೊಡುಗೆಯನ್ನೂ ನಿರ್ಲಕ್ಷಿಸುವಂತಿಲ್ಲ. ಬೌಲಿಂಗ್‌ನಲ್ಲಿ ಎಡಗೈ ಸ್ಪಿನ್ನರ್ ಹರ್ಷ್ ದುಬೆ ಆಡಿರುವ ಒಂಬತ್ತು ಪಂದ್ಯಗಳಿಂದ 66 ವಿಕೆಟ್‌ಗಳನ್ನು ಪಡೆದಿದ್ದಾರೆ. ಏಳು ಬಾರಿ ಐದು ವಿಕೆಟ್‌ಗಳನ್ನು ಅವರು

ಪಡೆದಿರುವುದು ನಿಜಕ್ಕೂ ಹೆಗ್ಗಳಿಕೆ.

ಸಚಿನ್ ಬೇಬಿ ನಾಯಕತ್ವದ ಕೇರಳ ತಂಡ ಈ ಬಾರಿ ಅದೃಷ್ಟದ ಬಲದಿಂದ ರಣಜಿ ಟ್ರೋಫಿಯ ಫೈನಲ್ ತಲುಪಿದೆ. ತಂಡದ ಬ್ಯಾಟರ್ ಸಲ್ಮಾನ್ ನಿಜಾರ್ ಮತ್ತು ಮೊಹಮ್ಮದ್ ಅಜರುದ್ದೀನ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆಫ್ ಸ್ಪಿನ್ನರ್ ಜಲಜ್ ಸಕ್ಸೇನಾ ಈ ರಣಜಿ ಋತುವಿನಲ್ಲಿ ಒಟ್ಟು 38 ವಿಕೆಟ್ ಪಡೆದಿದ್ದು, ಯಶಸ್ವಿ ಬೌಲರ್ ಎನಿಸಿದ್ದಾರೆ. ಈ ಹಿಂದೆ ವಿದರ್ಭ ತಂಡದಲ್ಲಿದ್ದ ಎಡಗೈ ಸ್ಪಿನ್ನರ್ ಆದಿತ್ಯ ಸರ್ವಟೆ 30 ವಿಕೆಟ್ ಪಡೆದು ಸಕ್ಸೇನಾಗೆ ಬೆಂಬಲ ನೀಡಿದ್ದಾರೆ.

ವಿದರ್ಭ ತಂಡ: ಅಕ್ಷಯ್ ವಾಡ್ಕರ್ (ನಾಯಕ), ಅಥರ್ವ ತಾಯಡೆ, ಅಮಾನ್ ಮೋಖಡೆ, ಯಶ್ ರಾಥೋಡ್, ಹರ್ಷ್ ದುಬೆ, ಅಕ್ಷಯ್ ಕರ್ಣೇವಾರ್, ಯಶ್ ಕದಮ್, ಅಕ್ಷಯ್ ವಖಾರೆ, ಆದಿತ್ಯ ಠಾಕ್ರೆ, ದರ್ಶನ್ ನಲ್ಕಂಡೆ, ನಚಿಕೇತ್ ಭೂಟೆ, ಸಿದ್ದೇಶ್ ವಾಥ್, ಯಶ್ ಠಾಕೂರ್, ದಾನಿಶ್ ಮಾಲೇವಾರ್, ಪಾರ್ಥ್ ರೆಖಾಡೆ, ಕರುಣ್ ನಾಯರ್, ಧ್ರುವ ಶೋರೆ.

ಕೇರಳ ತಂಡ: ಸಚಿನ್ ಬೇಬಿ (ನಾಯಕ) ಮೊಹಮ್ಮದ್ ಅಜರುದ್ದೀನ್, ವಿಷ್ಣು ವಿನೋದ್, ಬಾಬಾ ಅಪರಾಜಿತ್, ಜಲಜ್ ಸಕ್ಸೇನಾ, ಆದಿತ್ಯಾ ಸರ್ವಟೆ, ಕೆ.ಎಂ. ಆಸಿಫ್, ಬಾಸಿಲ್ ತಂಬಿ, ಎಂಡಿ ನಿಧೀಶ್, ಅಕ್ಷಯ್ ಚಂದ್ರ, ಫಾಜಿಲ್ ಫನೋಸ್, ವತ್ಸಲ್ ಗೋವಿಂದ್, ಕೃಷ್ಣ ಪ್ರಸಾದ್, ರೋಹನ್ ಕುನ್ನುಮಲ್. ಸಲ್ಮಾನ್ ನಿಝಾರ್.

ಕರುಣ್ ಬಗ್ಗೆ ವಿದರ್ಭಕ್ಕೆ ಭರವಸೆ

ಹಿಂದೊಮ್ಮೆ ಕರ್ನಾಟಕದ ರಣಜಿ ಕ್ರಿಕೆಟ್ ತಂಡದ ಭಾಗವಾಗಿದ್ದ ಕರುಣ್ ನಾಯರ್, ಈ ಸಲ ರಾಜ್ಯ ತಂಡದಲ್ಲಿ ಅವಕಾಶ ಇಲ್ಲದೆ ವಿದರ್ಭ ಪರ ಆಡಿದ್ದಾರೆ. ಈ ರಣಜಿ ಋತುವಿನಲ್ಲಿ ಅವರು ವಿದರ್ಭ ಪರ 14 ಇನ್ನಿಂಗ್ಸ್ ಆಡಿದ್ದು 45.8ರ ಸರಾಸರಿಯಲ್ಲಿ ಒಟ್ಟು 642 ರನ್ ಬಾರಿಸಿದ್ದಾರೆ. ಈ ಬಾರಿ ಹೈದರಾಬಾದ್ ಹಾಗೂ ಕ್ವಾಟರ್ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಅವರು ಶತಕ ಸಿಡಿಸಿದ್ದಾರೆ. ಮೂಲತ: ಕೇರಳದವರಾದ ಕರುಣ್ ನಾಯರ್ ಈ ಸಲ ರಣಜಿ ಫೈನಲ್‌ನಲ್ಲಿ ಕೇರಳದ ವಿರುದ್ಧ ವಿದರ್ಭ ತಂಡದ ಭರವಸೆಯ ಬ್ಯಾಟ್ಸ್‌ಮ್ಯಾನ್ ಆಗಿ ಕಣಕ್ಕಿಳಿಯುತ್ತಿರುವುದು ವಿಶೇಷ.

ಗಿಲ್ ಭವಿಷ್ಯದ ನಾಯಕ: ಸಂಜಯ್ ಬಂಗಾರ್

ದೆಹಲಿ: ಭಾರತ ತಂಡದ ಮಾಜಿ ಬ್ಯಾಟಿಂಗ್ ಸಂಜಯ್ ಬಂಗಾರ್ ಅವರು, ದೀರ್ಘಾವಧಿ ಭಾರತ ತಂಡಕ್ಕೆ ನಾಯಕನ್ನಾಗಿ ಶುಭಮನ್ ಗಿಲ್ ಅವರನ್ನು ಆಯ್ಕೆ ಮಾಡುವುದು ಒಳ್ಳೆಯದು ಎಂದು ಸಲಹೆ ನೀಡಿದ್ದಾರೆ.

ಜಿಯೋ ಹಾಟ್‌ಸ್ಟಾರ್ ಸಂಭಾಷಣೆಯಲ್ಲಿ ಮಾತನಾಡಿದ ಬಾಂಗರ್, ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಅವರು ದೀರ್ಘಾವಧಿಗೆ ಭಾರತ ತಂಡದ ನಾಯಕನಾಗಿ ದೊಡ್ಡ ಜವಾಬ್ದಾರಿಯನ್ನು ಪಡೆಯುವ ಸಾಧ್ಯತೆ ಇದೆ. ಏಕದಿನ ಕ್ರಿಕೆಟ್‌ನಲ್ಲಿ ಗಿಲ್ ಅವರ ದಾಖಲೆ ಅತ್ಯುತ್ತಮವಾಗಿದೆ

ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನ ವಿರುದ್ಧ 46 ರನ್ ಗಳಿಸಿದ ಗಿಲ್ ಬ್ಯಾಟಿಂಗ್ ಅದ್ಭುತವಾಗಿತ್ತು ಎಂದೂ ಅವರು ಹೊಗಳಿದ್ದಾರೆ.

ಮುಂದಿನ ವರ್ಷಗಳಲ್ಲಿ ಭಾರತ ತಂಡದ ನಾಯಕನಾಗಿ ಶುಭಮನ್ ಗಿಲ್ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆಂಬುದು ಸ್ಪಷ್ಟವಾಗಿದೆ. ಕಳೆದ ಒಂದು ಅಥವಾ ಒಂದೂವರೆ ವರ್ಷದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಅವರು ತೋರಿದ ಅಸಾಧಾರಣ ಪ್ರದರ್ಶನವೇ ಇದಕ್ಕೆ ಸಾಕ್ಷಿ. ಅವರ ಏಕದಿನ ಕ್ರಿಕೆಟ್‌ನ ಅಂಕಿಅಂಶಗಳು ಅತ್ಯುತ್ತಮವಾಗಿವೆ, ಎಂದು ಸಂಜಯ್ ಬಂಗಾರ್ ತಿಳಿಸಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ಶುಭಮನ್ ಗಿಲ್ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಎರಡು ಪಂದ್ಯಗಳಿಂದ 147 ರನ್‌ಗಳನ್ನು ಕಲೆ ಹಾಕಿದ್ದಾರೆ. ಬಾಂಗ್ಲಾದೇಶ ವಿರುದ್ಧ ಭರ್ಜರಿ ಶತಕವನ್ನು ಸಿಡಿಸಿ, ಕಳೆದ ಐದು ಏಕದಿನ ಇನಿಂಗ್ಸ್‌ಗಳಿಂದ ಎರಡು ಶತಕಗಳಿಂದ 406 ರನ್‌ಗಳನ್ನು ಕಲೆ ಹಾಕಿದ್ದಾರೆ.

ಮಹಿಳಾ ಪ್ರೀಮಿಯರ್ ಲೀಗ್ | ಡೆಲ್ಲಿ-ಗುಜರಾತ್ ಪಂದ್ಯ

ಡೆಲ್ಲಿಗೆ 128 ರನ್ ಗುರಿ

ಬೆಂಗಳೂರು: ಮಂಗಳವಾರ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಗುಜರಾತ್ ಜೈಂಟ್ಸ್ ತಂಡವು 128 ರನ್‌ಗಳ ಗೆಲುವಿನ ಗುರಿ ನೀಡಿದೆ.

ಗುಜರಾತ್ ಪರ ಭಾರತಿ ಫುಲಮಲಿ 40, ಡಿ. ಡಾಟಿನ್ 26 ರನ್ ಗಳಿಸಿ ಗಮನ ಸೆಳೆದರು, ಉಳಿದ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಗುಜರಾತ್ ಜೈಂಟ್ಸ್ ತಂಡದ ಆರಂಭವೇ ಉತ್ತಮವಾಗಿರಲಿಲ್ಲ. ಆರಂಭಿಕ ಬ್ಯಾಟರ್ ಹರ್ಲೀನ್ ಡಿಯೋಲ್ 10 ಬಾಲ್‌ಗಳಲ್ಲಿ ಕೇವಲ 5 ರನ್ ಗಳಿಸಿ ತಂಡದ ಮೊತ್ತ 16 ರನ್ ಆದಾಗ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ಫೋಬೆ ಲಿಚ್‌ಫೀಲ್ಡ್ ಕೇವಲ 3 ಬಾಲ್‌ಗಳನ್ನು ಎದುರಿಸಿ ಯಾವುದೇ ರನ್ ಗಳಿಸದೆ ಔಟಾದರು. ಗುಜರಾತ್ ಜೈಂಟ್ಸ್ ತಂಡದ ವಿಕೆಟ್ ಕೀಪರ್ ಬೆತ್ ಮೂನಿ 11 ಬಾಲ್‌ಗಳಲ್ಲಿ 10 ರನ್ ಗಳಿಸಿ ತಂಡದ ಸ್ಕೋರ್ 20 ಇದ್ದಾಗ ತಮ್ಮ ವಿಕೆಟ್ ಕಳೆದುಕೊಂಡರು. ಆ ನಂತರ ಆಟವಾಡಲು ಕ್ರೀಸ್‌ಗೆ ಬಂದ ಗುಜರಾತ್ ಜೈಂಟ್ಸ್‌ನ ಕಾಶ್ವಿ ಗೌತಮ್ ಯಾವುದೇ ರನ್ ತೆಗೆಯದೆ ತಮ್ಮ ವಿಕೆಟ್ ಒಪ್ಪಿಸಿದರು. ಗುಜರಾತ್ ನಾಯಕಿ ಅಶ್ಲೀಗ್ ಗಾರ್ಡ್ನರ್ 9 ಬಾಲ್‌ಗಳಿಂದ ಕೇವಲ 3 ರನ್ ಗಳಿಸಿ ಪೆವಿಲಿಯನ್ ಕಡೆ ತೆರಳಿದರು. ಒಂದು ಕಡೆಯಿಂದ ವಿಕೆಟ್‌ಗಳು ಒಂದರ ಹಿಂದೆ ಒಂದು ಬೀಳುತ್ತಾ ಇದ್ದರೂ ಡಿ. ಡಾಟಿನ್ ಅತ್ತುತ್ತಮವಾಗಿಯೇ ತಮ್ಮ

ಇನ್ನಿಂಗ್ಸ್ ಮುಂದುವರಿಸಿದರು. ಅವರು 24 ಬಾಲ್‌ಗಳಲ್ಲಿ 26 ರನ್ ಗಳಿಸಿ ಸದರ್‌ಲ್ಯಾಂಡ್‌ಗೆ ತಮ್ಮ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಗುಜರಾತ್ ಬ್ಯಾಟರ್ ತನುಜಾ ಕನ್ವರ್ 24 ಬಾಲ್‌ಗಳಲ್ಲಿ 16 ರನ್ ಗಳಿಸಿ ರನ್ ಔಟ್ ಆದರು. ಮತ್ತೊಂದೆಡೆ ಗುಜರಾತ್‌ನ ಆಲ್‌ರೌಂಡರ್ ಭಾರತಿ ಫುಲಮಲಿ ತಂಡಕ್ಕೆ ಬಹಳಷ್ಟು ಹೊತ್ತು ಆಧಾರಸ್ತಂಭವಾಗಿ ಅತ್ಯುತ್ತಮವಾಗಿ ಆಡಿ, ಕೇವಲ 29 ಬಾಲ್‌ಗಳಲ್ಲಿ 40 ರನ್ ಗಳಿಸಿದರು. ಕೊನೆಯಲ್ಲಿ ಗುಜರಾತ್‌ನ ಬಾಲಂಗೋಚಿಗಳೂ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಸಿಮ್ರಾನ್ ಶೇಕ್ 7 ಬಾಲ್‌ಗಳಲ್ಲಿ 5 ರನ್, ಮೇಘನಾ ಸಿಂಗ್ ಒಂದು ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ತಮ್ಮ ವಿಕೆಟ್ ಒಪ್ಪಿಸಿದರು. ಪ್ರಿಯಾ ಮಿಶ್ರಾ ಒಂದು ಬಾಲ್ ಎದುರಿಸಿ ಕೇವಲ ಒಂದು ರನ್ ಪಡೆದು ಔಟ್ ಆದರು. ಅಂತಿಮವಾಗಿ ಗುಜರಾತ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 127 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು.

ಡೆಲ್ಲಿ ಪರವಾಗಿ ಮಾರಿಜೆನ್ನೆ, ಶಿಕಾ ಪಾಂಡೆ, ಸದರ್‌ಲ್ಯಾಂಡ್ ತಲಾ 2 ವಿಕೆಟ್ ಪಡೆದರು.

ದ.ಆಫ್ರಿಕಾ-ಆಸ್ಟ್ರೇಲಿಯಾ ಪಂದ್ಯ ರದ್ದು

ರಾವಲ್ಪಿಂಡಿ: ಇಲ್ಲಿ ಮಂಗಳವಾರ ನಡೆಯಬೇಕಿದ್ದ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ನಡುವಿನ ಚಾಂಪಿಯನ್ಸ್ ಟ್ರೋಫಿ 2025ರ ಪಂದ್ಯ ಮಳೆಯಿಂದಾಗಿ ರದ್ದಾಗಿದೆ. 20 ಓವರ್ ಪಂದ್ಯವಾದರೂ ನಡೆಯುತ್ತಿದೆ ಎಂದು ನಿರೀಕ್ಷೆ ಮಾಡಲಾಗಿತ್ತಾದರೂ ಮಳೆ ಬಿಡುವ ಯಾವುದೇ ಮುನ್ಸೂಚನೆ ಇಲ್ಲದ ಕಾರಣ ಪಂದ್ಯವನ್ನು ಸಂಪೂರ್ಣವಾಗಿ ರದ್ದುಗೊಳಿಸಲು ನಿರ್ಧರಿಸಲಾಯಿತು.

ಪಂದ್ಯ ರದ್ದಾಗಿದ್ದರಿಂದ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡ ತಲಾ 1 ಅಂಕವನ್ನು ಹಂಚಿಕೊಂಡಿವೆ. ಈಗಾಗಲೇ ಎರಡೂ ತಂಡಗಳು ಒಂದು ಪಂದ್ಯವನ್ನು ಗೆದ್ದಿದ್ದು, ಎರಡನೇ ಪಂದ್ಯ ಮಳೆಯಿಂದ ರದ್ದಾಗಿದ್ದು ಒಂದು ಲೆಕ್ಕಾಚಾರದಲ್ಲಿ ಅನುಕೂಲವಾಗಿದ್ದರೆ, ಅದೇ ಗ್ರೂಪ್‌ನಲ್ಲಿರುವ ಇಂಗ್ಲೆಂಡ್‌ಗೆ ಸಂಕಷ್ಟವನ್ನು ಹೆಚ್ಚಿಸಿದೆ.

ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಈಗ ತಲಾ 3 ಅಂಕಗಳನ್ನು ಹೊಂದಿದ್ದು, ಮೊದಲು ಮತ್ತು ಎರಡನೇ ಸ್ಥಾನದಲ್ಲಿವೆ. ಇಂಗ್ಲೆಂಡ್ ಮೊದಲ ಪಂದ್ಯದಲ್ಲಿ ಸೋತಿದ್ದು ಸೆಮಿಫೈನಲ್ ತಲುಪಬೇಕಾದರೆ ಅಫ್ಘಾನಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಗೆಲುವು ಸಾಧಿಸಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ಇಂದಿನ ಪಂದ್ಯ

ಇಂಗ್ಲೆಂಡ್-ಅಫ್ಘಾನಿಸ್ತಾನ
ಸ್ಥಳ: ಲಾಹೋರ್
ಪಂದ್ಯ ಆರಂಭ: ಅಪರಾಹ್ನ: 2.30

ನಾಗಬಂಧಂನಲ್ಲಿ ಗಣೇಶ್‌ನ ನೃತ್ಯ

ಅಭಿಷೇಕ್ ನಾಮ ನಿರ್ದೇಶನದ ನಾಗಬಂಧಂ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಎನ್‌ಐಕೆ ಸ್ಟುಡಿಯೋಸ್‌ನಲ್ಲಿ ಕಿಶೋರ್ ಅನ್ನಾಪುರರೆಡ್ಡಿ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ವಿರಾಟ್ ಕರ್ಣ ನಾಯಕನಾಗಿ ನಟಿಸುತ್ತಿದ್ದು, ನಭಾ ನಟೇಶ್ ಮತ್ತು ಐಶ್ವರ್ಯಾ ಮೆನನ್

ನಾಯಕಿಯರಾಗಿ ನಟಿಸುತ್ತಿದ್ದಾರೆ. ಸದ್ಯ ಈ ಚಿತ್ರದ ಹಾಡಿನ ಶೂಟಿಂಗ್ ನಡೆಯುತ್ತಿದ್ದು, ಪುಷ್ಪ ಖ್ಯಾತಿಯ ಗಣೇಶ್ ಆಚಾರ್ಯ ನೃತ್ಯ ನಿರ್ದೇಶನ ಮಾಡುತ್ತಿದ್ದಾರೆ. ಹಾಗಾಗಿ ಚಿತ್ರದ ಬಗ್ಗೆ ಕ್ಯೂರಿಯಾಸಿಟಿ ಮೂಡಿದೆ. ಪ್ರಸ್ತುತ, ರಾಮನಾಯ್ಡು ಸ್ಟುಡಿಯೊದಲ್ಲಿ ಬೃಹತ್ ಸೆಟ್ ಹಾಕಿ ಹಾಡಿನ ಚಿತ್ರೀಕರಣ ನಡೆಸಲಾಗುತ್ತಿದೆ. ನಾಗಬಂಧಂ ಈಗಾಗಲೇ ಪೋಸ್ಟರ್ ಮೂಲಕ ಹೈಪ್ ಕ್ರಿಯೇಟ್ ಮಾಡಿದೆ. ಅಷ್ಟೇ ದೊಡ್ಡ ಪ್ರಮಾಣದಲ್ಲಿಯೇ ಈ ಸಿನಿಮಾ ಮೂಡಿಬರುತ್ತಿದೆ. ದಿ ಸೀಕ್ರೆಟ್ ಟ್ರೆಷರ್ ಎಂಬ ಟ್ಯಾಗ್‌ಲೈನ್‌ನೊಂದಿಗೆ ನಾಗಬಂಧಂ ಒಂದು ಮಹಾಕಾವ್ಯ ಸಾಹಸವಾಗಿ ರೂಪುಗೊಳ್ಳುತ್ತಿದೆ. ಅಭಿಷೇಕ್ ನಾಮ ಕಥೆ ಮತ್ತು ಚಿತ್ರಕಥೆ ಎರಡಕ್ಕೂ ತಮ್ಮ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಜಗಪತಿ ಬಾಬು, ರಿಷಭ್ ಸಹಾನಿ,

ಜಯಪ್ರಕಾಶ್, ಜಾನ್ ವಿಜಯ್, ಮುರಳಿ ಶರ್ಮಾ, ಅನಸೂಯಾ, ಶರಣ್ಯಾ, ಈಶ್ವರ್ ರಾವ್, ಜಾನ್ ಕೊಕ್ಕಿನ್, ಅಂಕಿತ್ ಕೊಯ್ಯ, ಸೋನಿಯಾ ಸಿಂಗ್, ಮ್ಯಾಥ್ಯೂ ವರ್ಗಾಸ್, ಜೇಸನ್ ಶಾ, ಬಿ.ಎಸ್. ಅವಿನಾಶ್ ಮತ್ತು ಬೇಬಿ ಕಿಯಾರಾ ಮುಂತಾದವರು ತಾರಾಗಣದಲ್ಲಿದ್ದಾರೆ.

ನಾಗಬಂಧಂ ಚಿತ್ರವು ಪ್ರಾಚೀನ ಪುರಾಣಗಳಿಂದ ಪ್ರೇರಿತವಾದ ನಿರೂಪಣೆಯನ್ನು ಆಧ್ಯಾತ್ಮಿಕ ಸಾಹಸದ ವಿಷಯಗಳೊಂದಿಗೆ ಪ್ರೇಕ್ಷಕರಿಗೆ ಪರಿಚಯಿಸಲಿದೆ. ಪದ್ಮನಾಭಸ್ವಾಮಿ ಮತ್ತು ಪುರಿ ಜಗನ್ನಾಥ ದೇವಾಲಯಗಳಲ್ಲಿ ಇತ್ತೀಚೆಗೆ ಪತ್ತೆಯಾದ ಗುಪ್ತ ನಿಧಿಗಳಿಂದ ಸ್ಫೂರ್ತಿ ಪಡೆದ ಈ ಸಿನಿಮಾ, ಈ ಪವಿತ್ರ ಸ್ಥಳಗಳನ್ನು ಸಂರಕ್ಷಿಸುವುದರ ಮೇಲೆ ಕೇಂದ್ರೀಕೃತವಾಗಿದೆ. ಭಾರತದ ವಿಷ್ಣು ದೇವಾಲಯಗಳ ಸುತ್ತಲಿನ ರಹಸ್ಯಗಳನ್ನು ಈ ಸಿನಿಮಾ ತೆರೆದಿಡಲಿದೆ. ನಾಗಬಂಧಂ ತೆಲುಗು, ಹಿಂದಿ, ತಮಿಳು, ಕನ್ನಡ ಮತ್ತು ಮಲೆಯಾಳಂ ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗಲಿದೆ.

ದುಬೈನಲ್ಲಿ ರಂಜಾನ್

ಸಾಮಾಜಿಕ ಸಾಮರಸ್ಯ ಸಾರುವ ರಂಜಾನ್ ಕಳೆದ ವರ್ಷ ತೆರೆಗೆ ಬಂದಿತ್ತು, ಎಲ್ಲರೂ ನೋಡಬೇಕಾದ, ತಿಳಿಯಬೇಕಾದ ಅಂಶಗಳು ಚಿತ್ರದಲ್ಲಿ ಬೆರೆತಿದ್ದವು. ಕಮರ್ಷಿಯಲ್ ಸಿನಿಮಾಗಳ ನಡುವೆಯೂ ಕಲಾತ್ಮಕ ಸಿನಿಮಾವಾಗಿ ಮೂಡಿಬಂದ ರಂಜಾನ್ ಅದ್ಭುತ ಯಶಸ್ಸು ಪಡೆಯಿತು. ಫಕೀರ್ ಮಹಮ್ಮದ್ ಕಟ್ಪಾಡಿಯವರ ನೊಂಬು ಕಥೆಯಾಧಾರಿತ ಸಿನಿಮಾ ಇದಾಗಿದ್ದು, ಪಂಚಾಕ್ಷರಿ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದರು. ರಂಜಾನ್ ಅಂದಾಕ್ಷಣ ಇದು ಮುಸಲ್ಮಾನ ಸಮುದಾಯಕ್ಕೆ ಸೀಮಿತವಾದ ಕಥೆಯಲ್ಲ ಬದಲಾಗಿ ಸಮಾಜ ಅಲ್ಲಿನ ಕಟ್ಟುಪಾಡುಗಳು, ಅದರಿಂದ ಸಂಕಷ್ಟಕ್ಕೆ ಸಿಲುಕಿರುವ ಬಡವರ್ಗದ ಜನತೆ ಇದೆಲ್ಲವೂ ಚಿತ್ರದಲ್ಲಿ ಅಡಕವಾಗಿದೆ.

ಈಗ ಇದೇ ರಂಜಾನ್, ದುಬೈನಲ್ಲಿಯೂ ಪ್ರದರ್ಶನ ಕಂಡಿದೆ. ರಂಜಾನ್ ಕರ್ನಾಟಕದಲ್ಲಿ ಬಿಡುಗಡೆಯಾದ ಒಂದು ವರ್ಷದ ಬಳಿಕ ಸೌದಿಯಲ್ಲಿಯೂ ರಿಲೀಸ್ ಆಗಿರುವುದು ವಿಶೇಷ.

ನಟ ಸಂಗಮೇಶ್ ಉಪಾಸನೆ ಈ ಚಿತ್ರದ ಹೈಲೈಟ್ಸ್. ಮುಸಲ್ಮಾನ ಸಮುದಾಯದ ಬಡ ವ್ಯಕ್ತಿಯಾಗಿ ಕಾಣಿಸಿಕೊಂಡಿರುವ ಸಂಗಮೇಶ್ ಉಪಾಸನೆ ತಮ್ಮ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿದ್ದಾರೆ. ಈ ಚಿತ್ರದ ಅತ್ಯುತ್ತಮ ಅಭಿನಯಕ್ಕಾಗಿ ಯೂನಿವರ್ಸಲ್ ಫಿಲಂ ಮೇಕರ್ಸ್ ಕೌನ್ಸಿಲ್ ಹಾಗೂ ಜೆನಿಸಿಸ್ ಅಲ್ಟಿಮಾ ಹದಿನಾಲ್ಕನೇ ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿ ಉತ್ತಮ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಹಾಗಂತ ಸಂಗಮೇಶ್ ನಟನೆಗೆ ಸೀಮಿತವಾಗಿಲ್ಲ. ಕೆಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಸಂಗಮೇಶ್, ಸದ್ಯ ಕಾರ್ಮಿಕ ಇಲಾಖೆಯ ಅಧಿಕಾರಿಯಾಗಿ ಸೇವೆ ಸಕಲ್ಲಿಸುತ್ತಿದ್ದಾರೆ. ಅದರ ಜತೆಗೆ ನಟನೆಯಲ್ಲಿಯೂ ತೊಡಗಿಸಿಕೊಂಡಿದ್ದಾರೆ.

ರಂಜಾನ್ ಚಿತ್ರಕ್ಕೆ ದುಬೈನಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಿರುತೆರೆಯಲ್ಲಿ ಪ್ರಸಾರವಾಗುತ್ತಿದ್ದ ಸಿಲ್ಲಿಲಲ್ಲಿ ಧಾರಾವಾಹಿಯಲ್ಲಿ ಗೋವಿಂದನಾಗಿ ಕಾಣಿಸಿಕೊಂಡಿದ್ದ ನಟ ಸಂಗಮೇಶ ಉಪಾಸನೆ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತನ್ನ ಕುಟುಂಬಕ್ಕೆ ಎದುರಾಗುವ ಸವಾಲು, ಅದರಿಂದ ಮಕ್ಕಳ ಮೇಲೆ ಬೀರುವ ಪರಿಣಾಮ, ಅದನ್ನು ಎದಿರಿಸುವ ಪರಿ ಇದೆಲ್ಲವೂ ಚಿತ್ರದಲ್ಲಿ ಅಡಕವಾಗಿದೆ. ರಂಜಾನ್ ಸಿನಿಮಾವನ್ನು ನೋಡುತ್ತಿದ್ದರೆ ಸಿನಿಮಾದ ಜತೆಗೆ ನಾವು ಸಾಗುತ್ತೇವೆ. ಸಮಾಜದಲ್ಲಿ ಕಾಡುತ್ತಿರುವ ಸಮಸ್ಯೆಗಳಿಗೆ ದನಿಯಾಗುತ್ತೇವೆ. ಅದರ ಜತೆಗೆ ಸಮ ಸಮಾಜದ ಕಲ್ಪನೆ ಎಲ್ಲಿದೆ ಎಂಬ ಪ್ರಶ್ನೆಯೂ ಮೂಡುತ್ತದೆ. ಒಟ್ಟಾರೆ ರಂಜಾನ್ ಇಡೀ ಕುಟುಂಬ ಸಮೇತ ಕುಳಿತು ನೋಡಬಹುದಾದ, ನೋಡಬೇಕಾದ ಕಲಾತ್ಮ ಸಿನಿಮಾವಾಗಿದೆ.